ಅಧ್ಯಕ್ಷರು : ಅವರು adjournment motion ಬಗ್ಗೆ preliminary submission ಮಾಡುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಾವು ನಿಲುಳಿ ಸೂಚನೆಯಡಿಯಲ್ಲಿ ಏನು ಹೇಳುತ್ತಿದ್ದೇವೆಂದರೆ, ಇವತ್ತು ಮುಖ್ಯಮಂತ್ರಿಗಳ ಮೇಲೆ ಮೇಲಿಂದ ಮೇಲೆ ಬರತಕ್ಕಂತಹ ಆರೋಪ ಎನಿದೆ, ನಿನ್ನೆ ಬಂದಂತಹ ಆರೋಪ ಬಹಳ ಗಂಭೀರವಾದಂತಹ ಆರೋಪ, ಸದನ ನಡೆಯತಕ್ಕಂತಹ ಕಾಲದಲ್ಲಿ ಮುಖ್ಯಮಂತ್ರಿಗಳು ಆ ಸ್ಥಾನದಲ್ಲಿ ಒಂದು ನಿಮಿಷ ಇರುವುದಕ್ಕೆ ಸಾಧವಿಲ್ಲ. ನಾವು ಇವತ್ತು ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳುತ್ತಿದ್ದೇವೆ. ಮುಖ್ಯಮಂತ್ರಿಗಳ ಮೇಲೆ ಏನು ಈ ತರಹ ಆಪಾದನೆ ಟಿವಿಯಲ್ಲಿ ಬಂದಿದೆ, ಅದರ ಬಗ್ಗೆ ಅವರು ಯಾವ ರೀತಿಯಲ್ಲಿಸ ಹೇಳುತ್ತಾರೆಂದು ನಾವು ಕೇಳುವುದಕ್ಕೆ ನಿಂತಿದ್ದೇವೆ. ತಾವು ಇದಕ್ಕೆ ಅನುಮತಿಯನ್ನು ಕೊಡಬೇಕು, ಬಹಳ ಸಮಗ್ರವಾದ ಚರ್ಚೆಯಾಗಬೇಕು. ರಾಜ್ಯದಲ್ಲಿ ಆಗತಕ್ಕಂತಹ ಈ ಎಲ್ಲಾ ಹಗರಣಗಳ ಸುರಿಮಳೆಗಳು ಏನಿದೆ, ಇದನ್ನು ಪ್ರಸ್ತಾಪ ಮಾಡತಕ್ಕಂಥ ರೀತಿಯಲ್ಲಿ ನಿಲುವಳಿ ಸೂಚನೆ ಮುಖಾಂತರ ಅಧ್ಯಕ್ಷರ ಅಪ್ಪಣೆಯನ್ನು ಕೇಳುತ್ತಿದ್ದೇವೆ. ಅಧ್ಯಕ್ಷರು ತಾವು ಅಪ್ಪಣೆಯನ್ನು ಕೊಟ್ಟರೆ ನಾವೆಲ್ಲರೂ ಕೂಡ ಚರ್ಚೆಯಲ್ಲಿ ಭಾಗವಹಿಸಿ ಇವರ ಬಗ್ಗೆ ವಿಶೇಷವಾದಂತಹ ರೀತಿಯಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುವುದರ ಬಗ್ಗೆ ಪ್ರಸ್ತಾಪ ಮಾಡುವುಧಕ್ಕೆ ನಮಗೆ ಅನುಮತಿ ಕೊಡಬೇಕೆಂದು ಕೇಳಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೆಚ್ಚಿಗೆ ಏನು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಈಗಾಗಲೇ ಎಲ್ಲಾ ಪತ್ರಿಕೆಯಲ್ಲೂ ಬಂದಿದೆ. ಅದಕ್ಕೆ ನಾವು ಕೇಳಿದ್ದೇವೆ ನೇರವಾಗಿ ತನಿಖೆಗೆ C.B.I. ಗೆ ಕೊಡಿ. ಮತ್ತೆ ಕೆಲವು ಬೇರೆ ಹೊರಗಡೆಯೂ ಕೂಡ ನಮ್ಮ ಬಗ್ಗೆಯೂ ಕೂಡ ಮಾತನಾಡಿರುವುದನ್ನು ನಾನು ಕೇಳಿದ್ದೇನೆ.

7. ಮಾನ್ಯ ಎಂ.ಪಿ. ವೆಂಕಟೇಶ್‌ರವರು ಕಲರ್, ಪೋಟೋವನ್ನು ಸದನದಲ್ಲಿ ಪ್ರದರ್ಶಿಸಿದ ಬಗ್ಗೆ.

(ಈ ಹಂತದಲ್ಲಿ ಮಾನ್ಯ ಎಂ.ಪಿ. ವೆಂಕಟೇಶ್‌ರವರು ಒಂದು colour photoವನ್ನು ಪ್ರದರ್ಶಿಸಿದರು)

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮದು ಏನಾದರೂ ಇದ್ದರೆ ಅದನ್ನು ಸೇರಿಸಿಯೇ CBI ಗೆ ಕೊಟ್ಟುಬಿಡಿ. ಅವರದ್ದನ್ನೂ ಕೊಡಿ. ಸಾರ್ ಈಗ ಅವರು ತೋರಿಸುತ್ತಿದ್ದಾರಲ್ಲಾ. I request you, ಆ photo ವನ್ನು ತಾವು ತಕ್ಷಣ ತೆಗೆದುಕೊಂಡು you refer it to CBI. Let us see. I will face it If you have got guts. CBI ಗೆ ಕೊಡಿ. ಎಲ್ಲಾ ದಾಖಲೆಗಳನ್ನು CBI ಗೆ refer ಮಾಡಿ.

1.30 ಪಿ.ಎಂ.

(ಅಡಚಣೆ)

ಅಧ್ಯಕ್ಷರು : ಈಗ ಎಲ್ಲಾ ದಯಮಾಡಿ ಕುಳಿತುಕೊಳ್ಳಿ. ಎಲ್ಲಾ ಸದಸ್ಯರೂ ಕೂರದೆ ಇದ್ದರೆ, ನಾನು ಯಾರು ನಿಂತಿದ್ದಾರೆ ಅವರೆಲ್ಲರನ್ನೂ ಹೊರಗಡೆ ಕಳುಹಿಸಿಬಿಡುತ್ತೇನೆ. ದಯಮಾಡಿ ಕುಳಿತುಕೊಳ್ಳಬೇಕು.

(ಅಡಚಣೆ)

ಅಧ್ಯಕ್ಷರು : ಈಗ ಯಾರು ಏನು ಹೇಳಿದರೂ ಸ್ಪಷ್ಟವಾಗಿ ಕೇಳಿಸುವುದಿಲ್ಲ. ಅದನ್ನು ದುರುಪಯೋಗ ಮಾಡಿಕೊಂಡು ನೀವು ಎಲ್ಲಾ ಸದಸ್ಯರುಗಳು ಈ ರೀತಿಯ ಆಶಿಸ್ತಿನಲ್ಲಿ ತೊಡಗಿದ್ದೀರಿ. ಈಗ ನೇರ ಪ್ರಸಾರವಾಗುತ್ತಿದೆ. ನಿಮ್ಮ ಗೌರವವು ಹೊರಗಡೆ ಹರಾಜು ಆಗುತ್ತಿದೆ. ಪತ್ರಿಕೆಗಳಲ್ಲಿ ಏನು ಬರೆಯುತ್ತಿದ್ದಾರೆ? ಕುಳಿತುಕೊಳ್ಳಿ. ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ. ಇದೇನು ವಿಧಾನ ಸಭೆಯೇ? ಗ್ರಾಮ ಪಂಚಾಯತಿಯ ಸದಸ್ಯರು ಎಷ್ಟೋ ಗೌರವದಿಂದ ನಡೆದುಕೊಳ್ಳುತ್ತಾರೆ. ನಾನು ನಿಂತಿದ್ದೇನೆ. ನೀವು ಕುಳಿತುಕೊಂಡಿಲ್ಲ. ನಿಮಗೆ ಸಭಾ ನಿಯಮವೇ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನೇನು documents ಇಟ್ಟುಕೊಂಡಿದ್ದಾರೆ ಎಲ್ಲವನ್ನೂ C.B.I. ಗೆ refer ಮಾಡಿ. I request you to register a case and sent it to C.B.I. for enquiry. Let us see.

(ಅಡಚಣೆ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ಮಾನ್ಯ ಎಂ.ಪಿ. ವೆಂಕಟೇಶ್‌ರವರು ತಮ್ಮಲ್ಲಿರುವಂಥ ಅಪಾರವಾದಂಥ ಏನು documents ಇವೆ, ಅವನ್ನು Assembly ಯಲ್ಲಿ ಇಟ್ಟಿದ್ದಾರೆ, ಪ್ರದರ್ಶನ ಮಾಡಿದ್ದಾರೆ. ತಾವು ದಯವಿಟ್ಟು ಅವರಿಗೆ ಅನುಮತಿ ಕೊಟ್ಟು ಅವರು ಏನು ಹೇಳುತ್ತಾರೋ ಅದನ್ನು ಹೇಳಲಿ. ತಮ್ಮ ವಶಕ್ಕೆ ಅವರು ಕೊಡುವ ಡಾಕ್ಯೂಮೆಂಟ್ಸ್ ತೆಗೆದುಕೊಳ್ಳಿ, ಈ ವಿಚಾರವನ್ನು ಮುಂದಕ್ಕೆ ಹಾಕಿ. ಆನಂತರ ನಾವು ಮಾತನಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ವೆಂಕಟೇಶ್‌ರವರು ಹಿರಿಯ ಸದಸ್ಯರು. ಅವರ ಕಡೆ ನಿಜವಾಗಿಯೂ ದಾಖಲೆಗಳನ್ನು ಈಗಾಗಲೇ ಸಭೆಗೆ ತೋರಿಸಿದ್ದಾರೆ. ಸದನಕ್ಕೆ photo ವನ್ನೂ ತೋರಿಸಿದ್ದಾರೆ. ನಾವು ನೋಡಿದ್ದೇವೆ ಮುಖ್ಯ ಮಂತ್ರಿಗಳು ಎಲ್ಲಾ ನೋಡಿದ್ದಾರೆ. ಅದು ಸದನದ ಆಸ್ತಿಯಾಗಿದೆ. ನೀವು ತೆಗೆದುಕೊಳ್ಳಿ. ಅವರು ಏನು ಹೇಳುತ್ತಾರೆ ಅದನ್ನು ಕೇಳಿ. ನಾನು ಸಮಾಧಾನದಿಂದ ಕೇಳುತ್ತೇವೆ. ಅವರು ಹೇಳಿದ್ದು convince ಆದರೆ ತಕ್ಷಣ C.B.I. ಗೆ hand over ಮಾಡಿ enquiry ಗೆ orders ಮಾಡಿಸಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದು ಬಹಳ ಅವಶ್ಯಕವಾದದ್ದಾಗಿದೆ. ಜೊತೆಗೆ ರಾಜ್ಯದಲ್ಲಿ ಎಷ್ಟೆಷ್ಟು scandal ಆಗಿದೆ ಎಲ್ಲವನ್ನೂ C.B.I. ಗೆ refer ಮಾಡಿ.

1.30 ಪಿ.ಎಂ.

ಅಧ್ಯಕ್ಷರು : ನಿಮಗೆ ಏನಾದರೂ ಗೌರವ ಇದೆಯೇ? ನೀವು ಇಲ್ಲಿಗೆ ಏತಕ್ಕೆ ಬಂದಿದ್ದೀರಿ? ಜನರು ನಿಮ್ಮನ್ನು ಏತಕೆ ಆರಿಸಿ ಕಳುಹಿಸಿದೆವು ಎಂದು ಕೇಳುತ್ತಿದ್ದಾರೆ. ನಾಯಕರು ಮಾತನಾಡುತ್ತಿದ್ದಾರೆ. ಕೇಳಿ.

(ಅಡಚಣೆ)

ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರತಕ್ಕಂಥದ್ದು ಕಳೆದ ಮೂರು ತಿಂಗಳ ಹಿಂದೆ ನನ್ನ ಮೇಲೆ ಏನು ಆರೋಪ ಮಾಡಿದ್ದಾರೆ ಎಂದು ಹೇಳಿ ಸದನದಲ್ಲಿ ಸುದೀರ್ಘವಾಗಿ ಚರ್ಚೆ ಆಗಿದೆ. ಈಗಾಗಲೇ Judicial enquiry ನಾವು order ಮಾಡಿದ್ದೇವೆ. ಇವತ್ತು ಯಾವುದೋ ಒಂದು ದಾಖಲಾತಿಯನ್ನು ಮಾನ್ಯ ವೆಂಕಟೇಶ್‌ರವರು ತೋರಿಸಿದ ತಕ್ಷಣ ಇಲ್ಲಿ ಕುಳಿತಿರುವಂಥ ಎಲ್ಲಾ ಹಿರಿಯ ಸದಸ್ಯರು ಉದ್ವೇಗಕ್ಕೆ ಒಳಗಾಗಿ ಉದ್ವೇಗದಿಂದ C.B.I. ಗೆ ಕಳುಹಿಸಿ ಎಂದು ಹೇಳುತ್ತಿದ್ದಾರೆ. ಅವರ ಮಾತಿನ ಝೇಂಕಾರವನ್ನು ಅವರು ಉದ್ವೇಗಕ್ಕೆ ಒಳಗಾಗಿರುವುದು ನಾನು ಈಗ ನೋಡಿದೆ. ಮೂರು ತಿಂಗಳಿನಿಂದ ಈ ರಾಜ್ಯದಲ್ಲಿ ಸತತವಾಗಿ ನನ್ನ ಮೇಲೆ ಭ್ರಷ್ಟಾಚಾರದ ಆರೋಪವನ್ನು ಹೊರಿಸಿ ಸತತವಾಗಿ ವಾಗ್ದಾಳಿ ಮಾಡಿದ್ದಾರೆ. ನಾನು ಎಲ್ಲೂ ಉದ್ವೇಗಕ್ಕೆ ಒಳಗಾಗಿಲ್ಲ. ತಾಳ್ಮೆಯನ್ನು ಕಳೆದುಕೊಂಡಿಲ್ಲ. ಕಾಯುತ್ತಿದ್ದೇನೆ. ನಿಮಗೆ ಏತಕ್ಕಾಗಿ ಸಿ.ಬಿ.ಐ. ತನಿಖೆ ಬೇಕು. ಜ್ಯುಡಿಷಿಯಲ್ ಎನ್‌ಕ್ವೈರಿಗೆ ಹೋಗಿ. ನಿಮಗೆ ಸಿ.ಬಿ.ಐ ತನಿಖೆ ಏತಕ್ಕೆ ಬೇಕು? ನನಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

(ಅಡಚಣೆ)

(ಈ ಹಂತದಲ್ಲಿ ಕಾಂಗ್ರೆಸ್ ಹಿರಿಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

(ಅಡಚಣೆ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳಿ?

ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ ಅಧ್ಯಕ್ಷರೇ? ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರು ಎಲ್ಲರೂ ಮಾತನಾಡುತ್ತಿದ್ದಾರೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ. ಅವರು ಪೂರ್ಣವಾಗಿ ಮಾತನಾಡಲಿ, ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

(ಅಡಚಣೆ)

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ, ಸುಮ್ಮನೆ ಏಕೆ ಒದರುತ್ತೀರಿ? ಸಭಾನಾಯಕರು ವಿರೋಧಪಕ್ಷದ ನಾಯಕರು ಕಾಂಗ್ರೆಸ್ ಪಕ್ಷದ

ನಾಯಕರು ಮಾತನಾಡುವಾಗ ಗೌರವದಿಂದ ಎಲ್ಲರೂ ಕೇಳುವುದನ್ನು ಕಲಿತುಕೊಳ್ಳಬೇಕು. ನಿಮಗೆ ಸಭಾ ನಿಯಮಗಳನ್ನು ನಾವು ಪದೇ ಪದೇ ಹೇಳಿಕೊಡಬೇಕು? ರಾಜಕೀಯ ಏರಿಳಿತ ಮೇಲಾಟಗಳು ಇರುತ್ತದೆ. ಯಾರು ಆಗಿ ಇಲ್ಲಿಯೇ ಗೂಢ ಹೊಡೆದುಕೊಂಡು ಕುಳಿತಿರುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ಚೆನ್ನಾಗಿ ನಡೆಯಬೇಕಾದರೆ ನೀವು ಗೌರವದಿಂದ ನಡೆದುಕೊಳ್ಳಬೇಕು. ನೀವೆಲ್ಲಾ ಏಕೆ ಹೀಗೆ ಮಾಡುತ್ತೀರಿ? ನನಗೆ ಅರ್ಥ ಆಗುತ್ತಿಲ್ಲ. ಬೆಳಗಾವಿಗೆ ಬಂದ ಮೇಲೆ ಯಾವುದಾದರೂ ಇಡ್ಲಿ ಏನಾದರೂ ಕೊಟ್ಟಿದ್ದಾರೆಯೇ? ಏಕೆ ಈ ತರಹ ಆಡುತ್ತಿದ್ದೀರಿ. ದಯಮಾಡಿ ಕುಳಿತುಕೊಳ್ಳಿ. ಹೊರಗಡೆ ಜನ ನೋಡುತ್ತಿದ್ದಾರೆ. ನಾನು ನಿಂತುಕೊಂಡಿದ್ದೇನೆ. ಆದರೂ ನೀವೆಲ್ಲಾ ನಿಂತಿದ್ದೀರಿ. ಏಕೆ ಈ ರೀತಿ ಮಾಡುತ್ತಿದ್ದೀರಿ?

(ಅಡಚಣೆ)

ಶ್ರೀ ಹೆಚ್. ಆಂಜನೇಯ : ಸಭಾನಾಯಕರು ಮಾತನಾಡಲಿ, ಅವರಿಗೆ ಅವಕಾಶವನ್ನು ಕೊಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲಿಕ್ಕೆ ಒಂದು ನಿಮಿಷ ಅವಕಾಶವನ್ನು ಕೊಡಿ.

(ಅಡಚಣೆ)

ಅಧ್ಯಕ್ಷರು : ಆಯಿತು, ಈಗ ರಮೇಶ್‌ಕುಮಾರ್‌ರವರೇ, ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ, ಸಭಾನಾಯಕರು ಮಾತನಾಡುತ್ತಿದ್ದಾರೆ.

(ಅಡಚಣೆ)

ಅಧ್ಯಕ್ಷರು : ಸಭಾನಾಯಕರು ಮಾತನಾಡಲಿಕ್ಕೆ ಅವಕಾಶ ಕೊಡಿ.

(ಅಡಚಣೆ)

ಶ್ರೀ ಹೆಚ್. ಆಂಜನೇಯ : ಸಭಾನಾಯಕರು ಮಾತನಾಡಲಿ, ಆಮೇಲೆ ವಿರೋಧಪಕ್ಷದ ನಾಯಕರು ಮಾತನಾಡಲಿ

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿಕ್ಕೆ ನಾನು ಅಡ್ಡ ಬರುವುದಿಲ್ಲ. ಅವರಿಗೂ ಅವಕಾಶವನ್ನು ಕೊಡಿ, ತಮ್ಮವರನ್ನು ಸುಮ್ಮನೆ ಕೂರಿಸಿದರೆ ನಂತರ ನಾನು ಒಂದು ನಿಮಿಷ ಮಾತನಾಡುತ್ತೇನೆ.

(ಅಡಚಣೆ)

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರು ನನ್ನ ಹತ್ತಿರ ಏನೋ ಮಾತನಾಡಲಿಕ್ಕೆ ಎದ್ದು ನಿಂತಿದ್ದಾರೆ. ಅವರು ಮಾತನಾಡಲಿ, ಅವರಿಗೆ ಅವಕಾಶವನ್ನು ಕೊಡಿ, ದಯಮಾಡಿ ಕುಳಿತುಕೊಳ್ಳಿ, ನಂತರ ಸಭಾನಾಯಕರು ಮಾತನಾಡುತ್ತಾರೆ

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಗೌರವಾನ್ವಿತ ಸದಸ್ಯರಾದ ಶ್ರೀಮಾನ್ ವೆಂಕಟೇಶ್‌ರವರು ತಮ್ಮಲ್ಲಿ ಯಾವುದೋ

ಒಂದು ಫೋಟೋವನ್ನು ಇಟ್ಟುಕೊಂಡಿದ್ದಾರೆ. ಅವರು ಅದನ್ನು ತೆಗೆದು ಪದೇ ಪದೇ ಪ್ರತಿಪಕ್ಷದ ನಾಯಕರಾದ ಶ್ರೀ ಧರ್ಮಸಿಂಗ್‌ರವರನ್ನು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಾಗೂ ಹಿರಿಯ ಸದಸ್ಯರಾದಂತಹ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರನ್ನು ಕುರಿತು ನಿಮ್ಮ ಬಂಡವಾಳ ಇಲ್ಲಿದೆ. ಇಂತಹವರ ಜೊತೆಯಲ್ಲಿದ್ದೀರಿ ಅಂತ ಅಲ್ಲಿಂದ ಆರೋಪವನ್ನು ಮಾಡುತ್ತಿದ್ದಾರೆ. ಅವರು ಅದನ್ನು ಹೊರಗೆ ತೆಗೆಯದೇ ಇದ್ದಿದ್ದರೆ ಆ ಮಾತು ಬೇರೆಯಾಗುತ್ತಿತ್ತು. ತೆಗೆದ ಮೇಲೆ ಅವರು ಉಳಿದದ್ದನ್ನು ಮಾತನಾಡದೆ ತಮ್ಮ ಅನುಮತಿಯನ್ನು ಪಡೆದು ಸ್ಪಷ್ಟ ಆರೋಪವನ್ನು ಮಾಡಿ, ತಮ್ಮ ಆರೋಪ ಏನೆಂಬುದನ್ನು ಸಾಬೀತುಪಡಿಸುವುದಕ್ಕೆ ಪುಷ್ಠಿಗೊಳಿಸುವುದಕ್ಕೆ ಆ ದಾಖಲೆ ತಮಗೆ ಸಲ್ಲಿಸಬೇಕಾಗಿತ್ತು. ಅನಂತರ ಮುಂದಿನ ಕ್ರಮ ತಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ನಾನು ಆ ದಾಖಲೆಗಳನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ದಯಮಾಡಿ ಕೇಳಬೇಕು, ತಾವು ಎರಡು ನಿಮಿಷ, ಅವರು ಆ ಫೋಟೋಗಳನ್ನು ಒಳಗೆ ಹೊರಗೆ ಮಾಡಿ ಇದೆಯೆಂದು ಸದನದಲ್ಲಿ ತೋರಿಸಿದಾಗ it amounts to blackmailing. That offence is committed in your presence in the House. It is a cognisable offence. ಇಲ್ಲ, ನಾನು ತಮ್ಮಲ್ಲಿ ವಿನಂತಿಸುತ್ತೇನೆ, ದಯಮಾಡಿ ಅವರಿಗೆ ಮುಕ್ತ ಅವಕಾಶವನ್ನು ಕೊಟ್ಟು, ಅವರೂ ಏನು ಹೇಳುತ್ತಾರೋ ಅದನ್ನು ಇಡೀ ಸದನ ಗಂಭೀರವಾಗಿ ಕೇಳುತ್ತೇವೆ. ನಂತರ ನಿಮ್ಮ ವಿವೇಚನೆಗೆ ಬಿಟ್ಟಿದ್ದು, ಇಲ್ಲದೇ ಹೋದರೆ You as presiding Officer have to get the case registered against him and take further action. Otherwise Sir, it would be a default on your part. As a Presiding Officer, you would be allowing a crime to be committed in the House.

(ಅಡಚಣೆ)

ಅಧ್ಯಕ್ಷರು : ಮಾನ್ಯ ವೆಂಕಟೇಶ್‌ರವರೇ, ನಿಮ್ಮ ಬಳಿಯಿರುವ ದಾಖಲೆಗಳನ್ನು ಏನಿದೆಯೆಲ್ಲಾ, ಆ ದಾಖಲೆಗಳನ್ನು ನನಗೆ ಕೊಡಿ, ಆ ದಾಖಲೆಗಳನ್ನು ನೋಡಿದ ಮೇಲೆ ಮುಂದಿನ ಕಥೆ, ಮೊದಲು ನನಗೆ ಆ ದಾಖಲೆಗಳನ್ನೆಲ್ಲಾ ಕೊಡಿ.

(ಅಡಚಣೆ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ, ಸಭಾನಾಯರು ಮಾತನಾಡುತ್ತಾರೆ, ಏಕೆ ಹೀಗೆ ಗಲಾಟೆ ಮಾಡುತ್ತೀರಿ? ನಾನು ಏನು ಹೇಳಬೇಕೋ ಹೇಳಿದ್ದೇನೆ, ದಯಮಾಡಿ ಕುಳಿತುಕೊಳ್ಳಿ, ಈ ತರಹ ಎಲ್ಲಾ ಮಾತನಾಡುವುದು ಸರಿಯಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಪದೇಪದೇ ಈ ರೀತಿ ಗಲಭೆ ಮಾಡುವುದು ಸರಿಯಲ್ಲ. ಮಾನ್ಯ ರೇವಣ್ಣನವರು ಹೇಳಿ.

(ಅಡಚಣೆ)

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಆ ಕಾಗದಪತ್ರಗಳನ್ನು ನೀವು ಜರೂರಾಗಿ ಮಾರ್ಷಲ್ ಕಡೆಯಿಂದ ಅದರ ಬಗ್ಗೆ ನಿಮ್ಮ ವಿವೇಚನೆಗೆ ಬಿಟ್ಟಂತಹ ಕ್ರಮವನ್ನು ತತ್‌ಕ್ಷಣ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು : ಆಯಿತು,

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ನಾನು ಸಂಪೂರ್ಣವಾಗಿ ತಮಗೆ ಕೊಡಬೇಕಾದ ದಾಖಲೆಗಳನ್ನು ತಮ್ಮ ಛೇಂಬರ್‌ಗೆ ಬಂದು, ನಿಮಗೆ ವಿವರಣೆ ಕೊಟ್ಟು ನಾನೇ ಆ ದಾಖಲೆಗಳನ್ನು ಒದಗಿಸುತ್ತೇನೆ.

(ಅಡಚಣೆ)

ಅಧ್ಯಕ್ಷರು : ಮಾನ್ಯ ವೆಂಕಟೇಶ್‌ರವರು ಕೊಡುತ್ತೇನೆಂದು ಹೇಳಿದ್ದಾರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಮಾನ್ಯ ಅಧ್ಯಕ್ಷರೆ, ಇಡೀ ಸದನವನ್ನು ಕುತೂಹಲವಾದಂಥ ವಾತಾವರಣದಲ್ಲಿ ಇವತ್ತು ತಂದಾಗಿದೆ, ಅದೇನೆಂಬುದು ತಿಳಿದುಕೊಳ್ಳಲಿಕ್ಕೆ ನಮಗೂ ಕೂಡ ಆಸಕ್ತಿಯಿದೆ. ನಾವು ಆ ದಾಖಲಾತಿಯನ್ನು ನೋಡಬೇಕಾಗಿದೆ. He should not have disclosed it in the House without your permission. ಈಗ ಮಾಡಿದ್ದಾರೆಂದ ಮೇಲೆ ಆ ದಾಖಲೆಗಳನ್ನು ತರಿಸಿಕೊಂಡು ನಮಗೆಲ್ಲಾ ಕೂಡ ನೀವು circulate ಮಾಡಬೇಕು. ನೀವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ಈಗ circulate ಮಾಡಬೇಕು, ಬಿಡಬೇಕು ಎನ್ನುವುದು ನನ್ನ ವಿವೇಚನೆಗೆ ಬಿಟ್ಟಿದ್ದು. ನಾನು ಆ ದಾಖಲೆಗಳನ್ನು ಕೊಡಲಿಕ್ಕೆ ಹೇಳಿದ್ದೇನೆ.

(ಅಡಚಣೆ)

SRI C.S. NADAGOWDA APPAJI : No. that question does not arise, ವಿವೇಚನೆ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. circulate ಮಾಡಬೇಕು. ವಿವೇಚನೆ ಪ್ರಶ್ನೆಯೇ ಬರುವುದಿಲ್ಲ. No ತಾವು ದಯವಿಟ್ಟು ತಪ್ಪು ಭಾವಿಸಬೇಡಿ. ನಿಮ್ಮ closed door ನಲ್ಲಿ door ಕೊಟ್ಟು ನಿಮಗೆ ಆ ದಾಖಲಾತಿಗಳನ್ನು ಕೊಟ್ಟಿದ್ದರೆ, ನಿಮ್ಮ ವಿವೇಚನೆಗೆ ಒಳಗಾಗುತ್ತಿತ್ತು. ಸದನದಲ್ಲಿ ಬಹಿರಂಗವಾಗಿ ಕೊಟ್ಟ ಮೇಲೆ ಇದು ತಮ್ಮ ವಿವೇಚನೆಗೆ ಒಳಗಾಗುವುದಿಲ್ಲ. It becomes a property of this House.

ಅಧ್ಯಕ್ಷರು : ಆಯಿತು, ವಿವೇಚನೆಗೆ ಬಿಟ್ಟಿದ್ದೋ, ಇಲ್ಲವೋ ಅದೇನು ಮಾಡಬೇಕೋ ಅದನ್ನು ನಿಯಮಗಳ ಪ್ರಕಾರ ಮಾಡುತ್ತೇನೆ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಲ್ಲಿ ಹೆಚ್.ಕೆ. ಪಾಟೀಲ್‌ರವರು ಮಂಡಿಸಿದ್ದಾರೆ, ಅಲ್ಲೇನು ತೀರ್ಮಾನವಾಗಿದೆ. ಏನೇನು ಮಾಡಿದ್ದಾರೆ, ಅದನ್ನು ಈ ಸದನದಲ್ಲಿ ತಂದಿರಿಸ. ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ,

(ಅಡಚಣೆ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ನಾವು ಇಲ್ಲಿ ವಾದ ವಿವಾದ ಮಾಡಲಿಕ್ಕೆ ತಯಾರಿಲ್ಲ. ತಾವು ಈಗ ಮುಕ್ತವಾದ ನಿರ್ಣಯವನ್ನು ನೀಡಿ, ಆ ದಾಖಲೆಗಳನ್ನು ತರಿಸಿಕೊಂಡು circulate ಮಾಡಬೇಕು.

ಅಧ್ಯಕ್ಷರು : ನಿಮಗೆ ಯಾರಿಗೂ ಸಹ ನಿಯಮಾವಳಿಗಳ ಪ್ರಕಾರ ಕೆಲವು ತೀರ್ಮಾನಗಳು ಆಗುವುದು ಬೇಕಿಲ್ಲ. ಎಲ್ಲಾ ರಾಜಕೀಯ ಮೇಲಾಟಗಳಾಗಿವೆ. ಈಗ ನಾನೇನು ಹೇಳಿದೆ, ಅವರಿಗೆ ತೋರಿಸುವುದು ಮಾಡುವುದು ಮಾಡಿದ ಮೇಲೆ ನಾನು ನನಗೆ ಕಳುಹಿಸಿರಿ ಎಂದು ಹೇಳಿದೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅದು ಮುಂದೆ ಏನು ಮಾಡಬೇಕು ಎನ್ನುವುದು ನನ್ನ ವಿವೇಚನೆಗೆ ಬಿಟ್ಟಿದ್ದು. ಕುಳಿತುಕೊಳ್ಳಿ ಎಂದರೆ ಅದನ್ನೇ ಮುಂದುವರಿಸಿದರೆ ಏನು ಪ್ರಯೋಜನ ಸಭಾನಾಯಕರು ಮಾತನಾಡುತ್ತಾರೆ ದಯಮಾಡಿ ಕುಳಿತುಕೊಳ್ಳಿ.

ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗ ಸನ್ಮಾನ್ಯ ವೆಂಕಟೇಶ್‌ರವರು ಆಪಾದನೆ ಮಾಡಿಲ್ಲ, ಒಂದು ನಿಮಿಷ ನಾನು ಮಾತನಾಡುವವರೆಗೆ ದಯುವಿಟ್ಟು ಕೇಳಬೇಕು. ಇವತ್ತೇನು ಮಾನ್ಯ ರಮೇಶ್‌ಕುಮಾರ್‌ರವರು ನಿಮ್ಮ ಜವಾಬ್ದಾರಿ ಬಗ್ಗೆ ಹೇಳಿದ್ದಾರೆ. ಇವರು ನನ್ನ ಮೇಲಿರುವ ಆಪಾದನೆಯನ್ನು ಇವರೇನು ಮಾಡಿದ್ದಾರೆ, ಯಾವ ಸಾಕ್ಷಾಧಾರದ ಮೇಲೆ ಮಾಡಿದ್ದಾರೆ? ವಿಧಾನಪರಿಷತ್ತಿನ ಸದಸ್ಯರೊಬ್ಬರು ನನ್ನ ಮೇಲೆ ಆಪಾದನೆ ಮಾಡಿದಂಥ ಸನ್ನಿವೇಶದಲ್ಲಿ ವಿಧಾನಪರಿಷತ್ತಿನಲ್ಲಿ ಸಭಾಪತಿಗಳ ಅನುಮತಿಯಿಲ್ಲದೆ ಅಲ್ಲೇನು ಅವರು ಚರ್ಚೆಯನ್ನು ಮಾಡಿದರು, ಯಾವುದೇ ದಾಖಲಾತಿಗಳನ್ನು ಸಭಾಪತಿಗಳಿಗೆ ಸಲ್ಲಿಸದೆ, ಹೊರಗಡೆ ಬಂದಂಥ ಕೆಲವು ವ್ಯಕ್ತಿಗಳೂ ಹೇಳಿದ್ದು ಪತ್ರಿಕೆಗಳಲ್ಲಿ ಬಂದಿವೆ. Operation Success. ಯಾವ operation? ಪತ್ರಿಕೆಗಳಲ್ಲೇ Operation Success. ಎಂದು ಬಂದಿದೆ. ಅಲ್ಲಿ ವಿಧಾನಪರಿಷತ್ತಿನಲ್ಲಿ ಆ ವ್ಯಕ್ತಿ ಹೇಳಿದ ತಕ್ಷಣ. ಇವತ್ತು ಸಿ.ಡಿ.ಗಳ ಬಗ್ಗೆ ಚರ್ಚೆಯನ್ನು ಮಾಡುವ ಮೂಲಕ, ಆ ಸಿ.ಡಿ.ಯ ಆಧಾರದ ಮೇಲೆ ನನ್ನ ಮೇಲೆ ಪದೇ ಪದೇ ಇವರು ಆಪಾದನೆಯನ್ನು ಮಾಡುತ್ತಿರುವಂಥಾದ್ದು, ಪತ್ರಿಕೆಗಳಲ್ಲಿ ಇರಬಹುದು, ನಿನ್ನೆ CNNIB ನಲ್ಲಿ ಬಂದಿರುವುದು ಇರಬಹುದು, ಈ ಆಧಾರದ ಮೇಲೆ ನನ್ನ ಮೇಲೆ ಏನು ಆಪಾದನೆಗಳನ್ನು ಇವರು ನನ್ನ ಮೇಲೆ ಮಾಡುತ್ತಿದಾರೆ. ನಾನು ರಾಜೀನಾಮೆ ಕೊಡಬೇಕೆಂದು ಕೇಳಿದ್ದಾರೆ, ಕೊಡುತ್ತೇನೆ, ನಾನು ಯಾವಾಗ ರಾಜೀನಾಮೆ ಕೊಡಬೇಕೆಂಬುದು ನನಗೆ ಗೊತ್ತಿದೆ. ನಿಮ್ಮ ಕೈಯಲ್ಲಿ ಹೇಳಿಸಿಕೊಂಡು ಕೊಡುವುದಿಲ್ಲ, ನೀವು ಹೇಳಿದಿರಿ ಎಂದು ನಾನು ರಾಜೀನಾಮೆ ಕೊಡಲಿಕ್ಕೆ ತಯಾರಾಗಿಲ. ಯಾವ ಆಧಾರದ ಮೇಲೆ ಇವರು ನನ್ನ ರಾಜೀನಾಮೆಯನ್ನು ಕೇಳುತ್ತಿದ್ದಾರೆ. ಯಾವ ಆಧಾರವನ್ನು ಇಟ್ಟುಕೊಂಡು ಇವರು ಸಿ.ಬಿ.ಐ. ಎನ್‌ಕ್ವೈರಿಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಇವತ್ತು ರಾಜ್ಯಪಾಲರು ಏನು ಚರ್ಚೆ ಮಾಡಬೇಕೆಂದು ಹೊರಟಿದ್ದರು,

ಅವರ ಪತ್ರದಲ್ಲಿ ಬರೆದಿರುವಂಥದ್ದು, ಈ ದೇಶದ ರಾಜಕಾರಣದಲ್ಲಿ ಯಾವ ಒಂದು ರೀತಿಯ ಕೀಳು ಮಟ್ಟದ ಕೆಸರಾಟ ನಡೆಯುತ್ತಿದೆ ಎಂಬ ಭಾವನೆಯಿಂದ ಅವರು ಬರೆದಿರುವಂಥದ್ದು, ಅವರೇನೂ ದೊಡ್ಡ ಈ ಸರ್ಕಾರದ ಮೇಳೆ ಆಪಾದನೆಯನ್ನು ಮಾಡಿಲ್ಲ. ಒಂದು ನಿಮಿಷ ವಿರೋಧಪಕ್ಷದ ನಾಯಕರುಗಳು ದಯವಿಟ್ಟು ತಾಳ್ಮೆಯಿಂದ ಕೇಳಬೇಕು. ನಾನು ನಿಮ್ಮ ಮಾತನ್ನೆಲ್ಲಾ ಕೇಳಿದ್ದೇನೆ. ಇವತ್ತು ಮೂರು ತಿಂಗಳುಗಳಿಂದ ಯಾವುದೋ ಒಂದು ಕಾಲ್ಪನಿಕ ಕ್ಯಾಸೆಟ್‌ಗಳನ್ನು, ಯಾರು ಪತ್ರಿಕೆಗಳಿಗೆ ಬಿಡುಗಡೆ ಮಾಡಿದವರು? ಪತ್ರಿಕೆಗಳಿಗೆ ಕೊಟ್ಟಂಥವರಾರು? ಪತ್ರಿಕೆಗಳಲ್ಲಿ ಬರಲಿಕ್ಕೆ ಕಾರಣರಾರು? ಇವತ್ತು ಈ ರೀತಿ ಎಲ್ಲೋ ಸೃಷ್ಟಿ ಮಾಡಿದಂಥ ಸಿ.ಡಿ.ಗಳನ್ನು ಯಾರು ಕೊಟ್ಟವರು, ಇವತ್ತು ಆ ಸಿ.ಡಿ.ಗಳನ್ನು ನನ್ನ ಮುಂದೆ ಇಡಲಿ, ಈ ರೀತಿ ಸದನದ ಸಮಯವನ್ನು ದುರುಪಯೋಗ ಪಡಿಸಿಕೊಳ್ಳವಂಥ ಕೆಲಸ ನಡೆಯುತ್ತಿದೆ. ಇವತ್ತು ವಿರೋಧಪಕ್ಷದ ನಾಯಕರುಗಳಿಗೂ ಅಷ್ಟೇ ಜವಾಬ್ದಾರಿ ಇದೆ, ಈ ವಿಷಯಗಳನ್ನು ಚರ್ಚೆ ಮಾಡಬೇಕಾದರೆ ಈ ರೀತಿಯ ಕಾಲ್ಪನಿಕ ಕಥೆಗಳನ್ನು ತಂದು ಇಲ್ಲಿಟ್ಟು ರಾಜೀನಾಮೆ ಕೇಳುವುದು, ಇದರ ಬಗ್ಗೆ ಚರ್ಚೆ ಮಾಡುವಂಥಾದ್ದು ಅನಾವಶ್ಯಕ. ನನ್ನ ಸರ್ಕಾರ ಇವತ್ತು ಭೂಮಿಯ ವಿಷಯದಲ್ಲಿ ಒಂದು ನಿರ್ಧಾರ ಮಾಡಿರುವಂಥಾದ್ದು, ನಾನು ಯಾರ ಜೊತೆಯಾದರೂ ಚರ್ಚೆಯನ್ನು ಮಾಡಿರುವುದು, ಇವೆಲ್ಲಾ ಹೊರಗೆ ಸಧ್ಯಕ್ಕೆ ಬರುತ್ತದೆ. ಇವತ್ತು ಸದನದ ಸಮಿತಿಯನ್ನು ಮಾಡಿದ್ದೇವೆ. ಇವರ ಹತ್ತಿರ ಯಾವುದಾದರೂ ದಾಖಲಾತಿಗಳಿದ್ದರೆ, ಸದನದ ಸಮಿತಿಯ ಮುಂದೆ ಇಡಲಿ, ಭೂಮಿಯ ಹಗರಣದ ಬಗ್ಗೆ ಏನು ಚರ್ಚೆ ನಡೆಯುತ್ತಿದೆ. ಸದನದ ಸಮಿತಿಗೆ ಕಳುಹಿಸಲಿ, ನಾನು ತಯಾರಾಗಿದ್ದೇನೆ. ಈ ರೀತಿ ನನ್ನ ರಾಜೀನಾಮೆ ಕೇಳಬೇಕಾದರೆ, ನೀವು ಮೂರು ತಿಂಗಳುಗಳಿಂದ ಪತ್ರಿಕೆಗಳಲ್ಲಿ ಸಾರ್ವಜನಿಕ ವ್ಯವಸ್ಥೆಯಲ್ಲಿ ನನ್ನ ಪ್ರತಿಕೃತಿ ದಹನ ಮಾಡಿಸುವುದು. ಚಪ್ಪಲಿ ಹಾರ ಹಾಕಿಸುವಂಥ ಕೀಳುಮಟ್ಟದ ರಾಜಕಾರಣ ಮಾಡುವುದ ಯಾವುದೋ ಒಂದು ಸುಳ್ಳು ದಾಖಲೆಗಳನ್ನು ಇಟ್ಟುಕೊಂಡು ಮಾಡುತ್ತಿರುವುದು ಇದರಲ್ಲಿ ನಡೆಯುತ್ತಿದೆ ಯಾವುದೇ ಸಾಕ್ಷ್ಯಾಧಾರ ಇಲ್ಲ. ಆದರೂ ನಾನು ತಾಳ್ಮೆಯಿಂದ ಕಾದುಕೊಂಡು ಬಂದಿದ್ದೇನೆ. ಇವತ್ತು ನೀವು ಯಾವರೀತಿ ಈ ದೇಶದಲ್ಲಿ ಕಾಲ್ಪನಿಕವಾಗಿ ಏನು ಬೇಕಾದರೂ ಸೃಷ್ಟಿ ಮಾಡಬಹುದು ಎಂದು ಹೇಳುವುದಕ್ಕೆ ಹೊರಟ ತಕ್ಷಣ ನೀವೆಲ್ಲರೂ ಉದ್ವೇಗಕ್ಕೆ ಒಳಗಾದಿರಿ. ನಾನು ಮುರು ತಿಂಗಳಿನಿಂದ ತಾಳ್ಮೆಯಿಂದ ಇದ್ದೇನೆ, ಎಲ್ಲಾ ರೀತಿಯ ನೋವನ್ನು ನಾನು ಅನುಭವಿಸಿದ್ದೇನೆ, ಅವತ್ತು 150 ಕೋಟಿ ರೂ. ಹಗರಣ, ಇವತ್ತು 750 ಕೋಟಿ ರೂ ಹಗರಣ, ಇದರ ಬಗ್ಗೆ ಏನಾದರೂ ಸಣ್ಣ ಸಾಕ್ಷ್ಯಾಧಾರ ಇದ್ದರೆ ಇಡಲಿ. ಯಾವುದೋ ಸೃಷ್ಟಿಗಳನ್ನು ಮಾಡಿ ಈ ರೀತಿ ಸಿ.ಬಿ.ಐ.ಗೆ ಕೊಡಿ. ಅಂದರೆ.............................

ಅಧ್ಯಕ್ಷರು : 150 ಕೋಟಿ ರೂ. ಸರಿ, 750 ಕೋಟಿ ರೂಪಾಯಿಗಳದ್ದು ಏನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈಗಾಗಲೇ ಅದು ಭಟ್ ಕಮಿಷನ್ ಮುಂದಿದೆ, ಇದು 750 ಕೋಟಿ ರೂಪಾಯಿಯಂತೆ. ಈಗ ಅವರು 67ನೇ ನಿಯಮಾವಳಿಯಲ್ಲಿ ತಂದಿರತಕ್ಕಂಥದ್ದು, ಯಾರೋ CNNIB ನಲ್ಲಿ ಪ್ರಸ್ತಾಪ ಮಾಡಿದರಂತೆ, ಅದನ್ನು ಇವತ್ತು ಸದನದ ಮುಂದೆ ತಂದಿದ್ದಾರೆ. ಈ ಆಧಾರ ಬಿಟ್ಟರೆ ಏನು ಆಧಾರವಿದೆ. ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿದ್ದೇನೆ. ಆ CNNIB ನಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಂಪೂರ್ಣವಾಗಿ ಇಲ್ಲಿ ತರಿಸಿದ್ದೇನೆ, ಇದರಲ್ಲಿ ನನ್ನ ಪಾತ್ರವೇನಿದೆ, ನಾನು ರಾಜೀನಾಮೆ ಕೊಡಲಿಕ್ಕೆ? ಇವತ್ತು ಅವರೇ ಹೇಳುತ್ತಾರೆ. Gowda, it seems assures prospective buyers that the deal has the Chief Minister's blessing. ಇದೇನು ಅಧ್ಯಕ್ಷರೇ, ಇಂಥದ್ದನ್ನೆಲ್ಲಾ ತಂದು ಇಲ್ಲಿ ಚರ್ಚೆ ಮಾಡಲಿಕ್ಕೆ ತಂದಿದ್ದಾರೆ.

ಅಧ್ಯಕ್ಷರು : ನಾನು ನಿಲುವಳಿ ಸೂಚನೆ ತೆಗೆದುಕೊಂಡಿಲ್ಲ. ಅದರ ಬಗ್ಗೆ ನೀವು details ಗೆ ಹೋಗಬೇಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಆಯಿತು, ಅಧ್ಯಕ್ಷರೆ, ಇವತ್ತು ನಾನು ಹೇಳುವಂಥಾದ್ದು ಈ ರೀತಿ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಸಿ.ಡಿ.ಗಳನ್ನು ಸೃಷ್ಟಿ ಮಾಡಿಕೊಂಡು ಇವತ್ತೇನು ನಡೆಯುತ್ತಿದೆ ಈ ದೇಶದಲ್ಲಿ, ಇದರ ಆಧಾರದ ಮೇಲೆ ಚರ್ಚೆ ಮಾಡುವುದು ಇಲ್ಲಿ ಅನಾವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಎರಡು ನಿಮಿಷ ಮಾನ್ಯ ಖರ್ಗೆಯವರೇ, ಯೀಲ್ಡ್ ಆಗಿ. ಮಾನ್ಯ ವಿರೋಧಪಕ್ಷದ ನಾಯಕರು ನಮ್ಮ ಮಾನ್ಯ ಹಿರಿಯ ನಾಯಕರಾದಂಥ ಮಲ್ಲಿಕಾರ್ಜುನ ಖರ್ಗೆಯವರು ದೇಶಪಾಂಡೆಯವರು ಇದ್ದಾರೆ, ರಮೇಶ್‌ಕುಮಾರ್‌ರವರು ಇದ್ದಾರೆ, ಬೇಕಾದರೆ ಭ್ರಷ್ಟಾಚಾರದ ಬಗ್ಗೆ ಈ ಸದನದಲ್ಲಿ ಒಂದು ದಿವಸ ಚರ್ಚೆ ಮಾಡೋಣ ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ 40 ವರ್ಷ ಆಡಳಿತ ನಡೆಸಿದೆ. ನಮ್ಮ ಪಕ್ಷವೂ ಆಡಳಿತ ನಡೆಸಿದೆ. ಎಳೆಎಳೆಯಾಗಿ ಬೇಕಾದರೆ ಚರ್ಚೆ ಮಾಡೋಣ. ಯಾವ ಯಾವ ರಾಜಕಾರಣಿಗಳು ಏನೇನು ಭ್ರಷ್ಟಾಚಾರ ಮಾಡಿದ್ದಾರೆ, ಮಹಾತ್ಮರು, ಎಲ್ಲಾ ಇಲ್ಲಿ ಸತ್ಯಹರಿಶ್ಚಂದ್ರರು, ಏನೇನು ಇದೆಯೋ ಎಳೆಎಳೆಯಾಗಿ ಬಿಡಿಸೋಣ, ದೇವೇಗೌಡರ familyದು, ಕುಮಾರಸ್ವಾಮಿ, ನನ್ನದು ಎಲ್ಲಾ ಬೇಕಾದರೆ ಎಳೆಎಳೆಯಾಗಿ ಬಿಡಿಸೋಣ, ಅದಕ್ಕೆಲ್ಲಾ, ನಾನು ಹೇಳುವುದು ಇವತ್ತು ವಿರೋಧಪಕ್ಷದ ನಾಯಕರು

ಹಿರಿಯರಿದ್ದಾರೆ, ಕಳೆದ ಮುರು ತಿಂಗಳಿನಿಂದ ಏನು ನಡೆಯುತ್ತಿದೆ, ಅದು ಡೆಲ್ಲಿಯವರೆಗೆ ಹೋಗಿ ವಾಪಸ್ಸ ಡೆಲ್ಲಿಯಿಂದ ಫೈಲ್ return back ಆಗಿದೆ. ಈಗ ಏನು ದೆಹಲಿ ದೊರೆಗಳಿಗೆ ದೂರು ತೆಗೆದುಕೊಂಡು ಕೊಟ್ಟರು, ಅವರು return back ಹಾಕಿ ಇದನ್ನು Reject ಮಾಡಿದ್ದಾರೆ. ಅಂತಹ ಕಡತವನ್ನು ಮಂಡಿಸುವುದು ಬೇಡವೆಂದು ಹೇಳುತ್ತಿದ್ದೇನೆ ಅಷ್ಟೇ.

ಅಧ್ಯಕ್ಷರು : ಮಾನ್ಯ ಖರ್ಗೆಯವರು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕೇಸಿನ ಬಗ್ಗೆ ಸಮರ್ಥನೆ ಮಾಡಿಕೊಂಡಿದ್ದಾರೆ. ನನ್ನ ಪ್ರಶ್ನೆ ಇಷ್ಟೇ, ನಿಮ್ಮ ಮುಂದೆ ವಿಶೇಷವಾಗಿ ಈಗಿರತಕ್ಕಂಥ ಹಗರಣದ ಬಗ್ಗೆ ನಾವು ಎತ್ತಬಾರದು, ಚರ್ಚೆ ಮಾಡಬಾರದು ಎಂದು ಹೇಳಿ ನಮ್ಮ ಬಾಯನ್ನು ಮುಚ್ಚಿಸಬೇಕು, ಹೆದರಿಸಬೇಕು, ಬ್ಲಾಕ್‌ಮೇಲ್ ಮಾಡಬೇಕೆಂದು ಹೇಳಿ, ಒಂದು ಕುತಂತ್ರವನ್ನು ಮಾಡಿ ತೋರಿಸುವಂಥದ್ದು, ಇಲ್ಲಿ ನಮ್ಮಲ್ಲಿ ಫೋಟೋ ಇದೆ ಎನ್ನುವುದು, ಇದನ್ನು ನಾನು ಸ್ವಾಗತಿಸುತ್ತೇನೆ. ಅವರು ಯಾರು ತಮಗೆ ಫೋಟೋ ತೋರಿಸಬೇಕು ಎಂದು ತಮಗೆ ಕೇಳಿಕೊಂಡಿದ್ದಾರೆ, ಅವರ statement ತೆಗೆದುಕೊಂಡು ಫೋಟೋ ತೆಗೆದುಕೊಂಡು ನೇರವಾಗಿ C.B.I. ಗೆ ನಾನು enquiry ಗೆ ಒಳಗೆ ಹೋಗಲಿಕ್ಕೆ ತಯಾರಾಗಿದ್ದೇನೆ. ನಾನು ಹೆದರುವುದಿಲ್ಲ. ಅವರು ಹೇಳಿದರು, ಕಾಲ್ಪನಿಕವಾಗಿ ಸೃಷ್ಟಿ ಮಾಡಿರುವಂಥದ್ದು ಎಂದು ನಿಜವೇ ಇರಬಹುದು, ನಾನು ಹೇಳುವುದಿಲ್ಲ, ನೀವು ಅದನ್ನು ರೆಫರ್ ಮಾಡಿ. ನಮ್ಮ ಮೇಲೆ ಅಲಿಗೇಷನ್ ಮಾಡಿಲ್ಲ. ಏನೊಂದು ಕಾಲ್ಪನಿಕವಾಗಿ ಇಂತಹವು ನಡೆಯುತ್ತವೆ, ನನಗೆ ಮೂರು ತಿಂಗಳಿನಿಂದ ಮಾನಸಿಕವಾಗಿ ಬೇಜಾರಾಗಿದೆ. ಅದಕ್ಕೆ ಇದು ಒಂದು ತಂತ್ರ ಅನ್ನುವಂಥ ರೂಪದಲ್ಲಿ ಅವರು ಹೇಳಿದರು. ನಾನು ಕೇಳುತ್ತೇನೆ. ನಾವು ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರ ಮೇಲೆ ನೇರವಾಗಿ ಎಂದೂ ಆಪಾದನೆಯನ್ನು ಮಾಡಲಿಲ್ಲ. ಆಪಾದನೆ ಮಾಡಿದವರು ಯಾರು? ಯಾರ ಹತ್ತಿರ ಎವಿಡೆನ್ಸ್ ಇದೆ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಯಾವ ಜನಾರ್ಧನ ರೆಡ್ಡಿಯವರ.....

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಎಲ್ಲಿದೆ ಎವಿಡೆನ್ಸ್, ಇದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಅನಾವಶ್ಯಕ. ಮಾತಿಮಾತಿಗೆ ಪದೇಪದೇ ಬ್ಲಾಕ್‌ಮೇಲ್ ತಂತ್ರ ಎಂದು ಹೇಳುತ್ತೀರಿ. ನನಗೆ ನೀವೆಲ್ಲಾ ಸೇರಿ ಬ್ಲಾಕ್‌ಮೇಲ್ ಮಾಡುತ್ತಿದ್ದೀರಿ.

SRI MALLIKARJUNA KARGE : No, No, ನಿಮಗೆ ನಾವು ಬ್ಲಾಕ್‌ಮೇಲ್ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮ ಸದನದಲ್ಲಿ ಮಾನ್ಯ ಪ್ರಕಾಶ್‌ರವರು ಇದ್ದಾರೆ, ಬೇಜವಾಬ್ದಾರಿಯಾದ ಅಲಿಗೇಷನ್ ಅನ್ನು ನಾನು ನನ್ನ 34 ವರ್ಷಗಳ ರಾಜಕೀಯ ಜೀವನದಲ್ಲಿ ಮಾಡಿಲ್ಲ. ಡೆಪ್ಯುಟಿ ಲೀಡರ್ ಆಗಿ 5 ವರ್ಷ ಕೆಲಸ

ಮಾಡಿದ್ದೇನೆ, ಅಪೋಸಿಷನ್ ಲೀಡರ್ ಆಗಿ 5 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ, ಎಂದೂ ಕೂಡ ಬೇಜವಾಬ್ದಾರಿಯಿಂದ ಅಲಿಗೇಷನ್ ಮಾಡಿ ಯಾರದಾದರೂ ಒಂದು ಭವಿಷ್ಯ ಹಾಳು ಮಾಡುವಂಥ, ಒಬ್ಬರ ಇಮೇಜನ್ನು ಟಾರ್ನಿಷ್ ಮಾಡುವಂಥದ್ದು ಮಾಡಿಲ್ಲ, ನಾವು ಮಾಡಿದ್ದು ಯಾವಾಗೆಂದರೆ, ಇಡೀ ಪ್ರಪಂಚದಲ್ಲಿ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ, ಸದನದಲ್ಲಿ ನೇರವಾಗಿ ನಿಮ್ಮನ್ನು ಚಾಲೆಂಜ್ ಮಾಡಿ ನನ್ನ ಹತ್ತಿರ ಕೆಲವು ಎವಿಡೆನ್ಸ್ ಇವೆ, ಅದನ್ನು ನೀವು ಸಿ.ಬಿ.ಐ.ಗೆ ರೆಫರ್ ಮಾಡಿ ನಾನು ಸಾಬೀತುಪಡಿಸುತ್ತೇನೆಂದು ಒಬ್ಬ ಸದಸ್ಯರು ಹೇಳಿದ ಮೇಲೆ ಅದನ್ನು ನಿಮ್ಮ coalition partner ಹೇಳಿದ ಮೇಲೆ ನಮ್ಮ ವಿರೋಧ ಪಕ್ಷದವರು ಹೀಗೆ ಕಣ್ಣು ಮುಚ್ಚಿಕೊಂಡು ಕೂತು, ಕೈಕಟ್ಟಿಕೊಂಡು ಕಿವಿ ಮುಚ್ಚಿಕೊಂಡು ಕೂಡಿ ಎಂದು ತಾವು ಹೇಳಿದರೆ ಅದು ಸರಿಯಲ್ಲ.

ಶ್ರೀ ಎಸ್. ಚೆಲುವರಾಯಸ್ವಾಮಿ : ದಯಮಾಡಿ ದಾಖಲಾತಿಗಳನ್ನು ಸ್ಪೀಕರ್ ಸಾಹೇಬರಿಗೆ ಕೊಡಿ, ಚರ್ಚೆ ಇವತ್ತು ನಾಳೆಯೂ ನಡೆಯಲಿ ಬೇಕಾದರೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬೇಡ ಅಂದರೆ ನಾವೇನು ಮಾಡುವುದಕ್ಕೆ ಆಗುತ್ತೆ? ಅದೇ ಚರ್ಚೆ ಇನ್ನೂ 4 ದಿವಸ ನಡೆಯಲಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಇದು ನಾವಾಗಿ ಅಲಿಗೇಶನ್ ಮಾಡಿದ್ದಲ್ಲ. ಅಥವಾ ನಾವಾಗಿ ಹೀಗೆ evidence ಇದೆ ಅದಕ್ಕಾಗಿ ಮಾಡಿ ಅಂತಲೂ ಹೇಳಿಲ್ಲ. ನಾವು ಹೇಳುತ್ತಿರುವುದು. ಅವರ ಹತ್ತಿರ ದಾಖಲಾತಿಗಳಿವೆ, ಅವನ್ನು ಅವರು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದಾರೋ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೋ ಎಲ್ಲರಿಗೂ ಕೂಡ ಕೊಟ್ಟಿದ್ದಾರೋ ಅದರ ಆಧಾರದ ಮೇಲೆ ನಾವು ಕೇಳಿದ್ದೇವೆ, refer ಮಾಡಿ ಅಂತ ಹೇಳಿದ್ದೇವೆ. ಯಾಕೆ ಕೇಳಿದ್ದೇವೆ? ಅದರ ಸತ್ಯಾಂಶ ಗೊತ್ತಾಗಲಿ, ಅದಕ್ಕಾಗಿ ನಾವು CBI ಕೇಳಿರುವುದು ನೀವು CBI ಯನ್ನೇ ಯಾಕೆ ಕೇಳುತ್ತೀರಿ ಅನ್ನುತ್ತಿದ್ದಿರಿ, ಈಗ ನನ್ನದೂ ಹೇಳುತ್ತೀದ್ದೇನಲ್ಲಾ. ನಾನೇನು ಬೇಡ ಅಂದೆನಾ ಎರಡನ್ನೂ refer ಮಾಡಿ, ಸುಳ್ಳೋ ನಿಜವೋ ಅಲ್ಲಿ ತೀರ್ಮಾನವಾಗಲಿ, ಆದರೆ ನಿಮ್ಮಲ್ಲೇ ನ್ಯೂನತೆ ಇಟ್ಟುಕೊಂಡು ನಿಮ್ಮವರೇ ಅದನ್ನು ಪದೇ ಪದೇ ಛೇಡಿಸುವಾಗ ನಾವು ವಿರೋಧ ಪಕ್ಷದಲ್ಲಿ ಕೈಕಟ್ಟಿಕೊಂಡು ಕೂರಬೇಕಾ? ಇದರ ಬಗ್ಗೆ ಮಾತಾಡಬಾರದೆ? ಇದರ ಬಗ್ಗೆ ಪ್ರಸ್ತಾಪಮಾಡಬಾರದಾ?

ಶ್ರೀ ಎಸ್. ಚೆಲುವರಾಯಸ್ವಾಮಿ : ನೀವು COD ಕೇಳಿದರೆ, CODಗೆ ಕೊಡಬೇಕು, CBI ಕೇಳಿದರೆ CBI ಕೊಡಬೇಕು, ಸರ್ಕಾರ ನಡೆಸುವವರಿಗೂ ಗೊತ್ತಿದೆ ಯಾವರೀತಿ ಮಾಡಬೇಕು ಅಂತ. ತಾವು ಅಭಿಪ್ರಾಯ ಕೊಡಬೇಕು ಅಷ್ಟೆ, ನೀವು ಕೇಳಿದ್ದನ್ನೇ ಮಾಡಬೇಕು ಅಂತ ಅಲ್ಲಿ ಕಾನೂನು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೇಳುವುದು, ರಾಜ್ಯದ ಜನತೆ ಮುಂದೆ ತರುವುದು ನಮ್ಮ ಕರ್ತವ್ಯ. ಮಾಧ್ಯಮದ ಮುಂದೆ ತರುವುದೂ ನಮ್ಮ ಕರ್ತವ್ಯ.

ಆದರೆ ಇದು ಸತ್ಯಕ್ಕೆ ದೂರ ಅಂತ ನೀವು ಯಾವಾಗ ಹೇಳಬಹುದು, ನಾನೇ ನೇರವಾಗಿ ನಿಮಗೆ ತಂದುಕೊಟ್ಟಂಥ document ಆಗಿದ್ದರೆ, ಆದರೆ ಸಾಬೀತುಪಡಿಸಲು ಜನ ಇವತ್ತು ಸಿದ್ಧರಿದ್ದಾರೆ. ಅವರು ಅವಕಾಶ ಕೇಳುತ್ತಿದ್ದಾರೆ, ಕೊಡಿ.

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದನ್ನು ಪದೇ ಪದೇ ಹೇಳಬೇಡಿ ಅಂತ ಅವರಿಗೆ ಹೇಳಿ, ಸಾಬೀತುಪಡಿಸಲಿ ಅವರು. ಒಂದು ಕಡೆ High Court ನಲ್ಲಿದೆ ಇನ್ನೊಂದು judicial enquiry ಇದೆ. ಇಲ್ಲಿ ಸದನ ಇದೆ, ಇಲ್ಲಿ ಸಾಬೀತುಪಡಿಸಲು ನಾವು ತಯಾರು ಇದ್ದೇವೆ ಉತ್ತರ ಕೊಡುವುದಕ್ಕೆ. ಸಾಬೀತುಪಡಿಸಲು ತಯಾರಿದ್ದಾರೆ ಎಂದು ಮಾಧ್ಯಮಕ್ಕೆ ತಪ್ಪು ಮಾಹಿತಿ ಕೊಡುವುದು ಬೇಡ. ಮಾಹಿತಿ ಇರುವವರು ಇವತ್ತೇ ಬಂದು ಕೊಡಲಿ, ನಾವು ತಯಾರಿದ್ದೇವೆ, ಸದನ ಇನ್ನೂ 4 ದಿವಸ ಮುಂದುವರೆಯಲಿ ಅನ್ನುತ್ತಾರೆ ಮುಖ್ಯಮಂತ್ರಿಗಳು. ಆದ್ದರಿಂದ ಸಾಬೀತುಪಡಿಸಲು ತಯಾರಿದ್ದೇವೆ ಎಂಬ ಮಾತನ್ನು ಅವರು ವಾಪಸ್ ಪಡೆದು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಎರಡನೆಯದಾಗಿ ನಾವು ಇದನ್ನು ಹೇಳಿದ ಕೂಡಲೇ ಏನಾಯಿತು? ಮಾನ್ಯ ಮುಖ್ಯಮಂತ್ರಿಗಳು ಕೂಡ ಅಷ್ಟೇ emotion ನಲ್ಲಿ ಬಂದು ನೀವು ಅಲ್ಲಿ ಹೋಗಿದ್ದೀರಿ ಇಲ್ಲಿ ಹೋಗಿದ್ದೀರಿ. ಅಂದರು ಹೌದು, ದೆಹಲಿಯಲ್ಲಿ AICC ಇದೆ, ನಮ್ಮ ಕೆಲಸಗಳೂ ಇರುತ್ತವೆ. ಬೇರೆ ಮಂತ್ರಿಗಳಿಗೂ ಭೇಟಿಯಾಗುತ್ತೇವೆ. ಅದರರ್ಥ ಬೇರೆ ಏನೂ ಕೆಲಸ ಇಲ್ಲ, ಇದೊಂದೇ ಕೆಲಸ ಅಂತ ಇಲ್ಲ. ನೇರವಾಗಿ ನಾವು ಕೇಳಿದ್ದೇವೆ. Governorನ್ನು ಕೇಳಿದ್ದೇವೆ. ಪತ್ರಿಕೆಯಲ್ಲಿದೆ, ಬಹಿರಂಗವಾಗಿ .C.B.I. Enquiry ಕೇಳಿರುವುದು ಇದೆ. ಮುಚ್ಚಿಡುವುದೇನಿದೆ ಅದರೊಳಗೆ, ಅವಶ್ಯಕತೇನೇ ಇಲ್ಲ. ಇವತ್ತು ನಾನು ಅವರನ್ನು ಕೇಳುವುದಿಷ್ಟೇ: ಇವತ್ತು ನೀವೇ ಹೇಳಿಕೊಂಡಿರಿ, ನೀವೆ judge ಅದಿರಿ, ನೀವೇ judgment ಆದಿರಿ, ನೀವೇ prosecutor ಸಹ ಕೊಟ್ಟಿರಿ. ಎಲ್ಲಾನೂ ಕೂಡ ನೀವೇ ಅಂದಮೇಲೆ ಮತ್ತೆ ನಾವು ಯಾರನ್ನು ಕೇಳುವುದು? Bhat Commission ಮುಂದೆ ಏನು ಹೇಳುವುದು? ಅದನ್ನು ಸಾಬೀತುಪಡಿಸಲು ಇನ್ನೊಂದು ದಾರಿ ಹುಡುಕಿದ್ದರೆ ಅದು ಬೇರೆ ವಿಚಾರ. ಆದರೆ ನೀವು judicial probe ಹಿಡಿದುಕೊಂಡು ಕೂತಿದ್ದೀರಿ. ನಾವು CBI ಹಿಡಿದುಕೊಂಡು ಕೂತಿದ್ದೇವೆ. ಯಾಕೆ ಕೂತಿದ್ದೇವೆ ಅಂದರೆ ಇದರಲ್ಲಿ prosecution ಮಾಡುವುದಕ್ಕೆ investigation ಮಾಡುವುದಕ್ಕೆ ಅವಕಾಶ ಇದೆ. ಅದರಲ್ಲಿ ಇಲ್ಲ ಎಂಬ ದೃಷ್ಟಿಯಿಂದಲೇ ನಾವು ಎನ್‌ಕ್ವೈರಿ ಅದಕ್ಕಾಗಿ ನಾವು ಪದೇ ಪದೇ ಕೇಳಿದ್ದೇವೆ: Naturally ಮುಖ್ಯಮಂತ್ರಿಗಳು ಹೊಸದಾಗಿ ಆಗಿದ್ದಾರೆ, ಆರೇಳು ತಿಂಗಳಾಯಿತು, ನನ್ನ ಮೇಲೆ ಇವರೆಲ್ಲಾ ಕಾಡುತ್ತಿದ್ದಾರೆ ಅಂತ ಸಿಟ್ಟಿರಬಹುದು. ಆ ಸಿಟ್ಟಿನ ಭರಾಟೆಯಲ್ಲಿ ಇನ್ನೊಂದು ತಪ್ಪು ಮಾಡುವುದು, ಇನ್ನೊಬ್ಬರಿಗೆ ಪ್ರಚೋದನೆ ಮಾಡಿ ಅದರ ತೇಜೋ ವಧೆ ಮಾಡಲು ನೀವು ಪ್ರಯತ್ನ ಮಾಡಿದರೆ, ನಾವು ಏನು ಹೇಳಬೇಕು ಅಧ್ಯಕ್ಷರೇ? Alright, if you hae

got proof give it. ತಾವು ತೆಗೆದುಕೊಂಡು ಕೇಸ್ register ಮಾಡಿ, ಹೇಗೋ ವಿಧಾನಸೌಧ police station ಇಲ್ಲೇ ಇದೆ. ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ: ಅವರ statement record ಮಾಡಿಕೊಂಡು ಆ photo ಗಳ ಸಹಿತ police station ನಲ್ಲಿ case register ಮಾಡಿ, ನೇರವಾಗಿ CBI ಗೆ ಕಳಿಸಿ. ಯಾಕೆ CBI ಗೆ ಕಳುಹಿಸಿ ಅಂತ ನೆಂದರೆ ಇಡೀ ದೇಶಕ್ಕೆ ಸಂಬಂಧಪಟ್ಟ ವಿಚಾರಗಳು ಅದರಲ್ಲಿ ಬರಬಹುದು, ಆದ್ದರಿಂದ ವೆಂಕಟೇಶ್ ಹತ್ತಿರವಿರುವ ಮಾಹಿತಿ ಪಡೆದು ದೇಶದ ಜನರಿಗೆ ಉಪಕಾರ ಮಾಡಬೇಕು ಅಂತ ನಿಮಗೆ ಕೇಳಿಕೊಳ್ಳುತ್ತೇನೆ: ಇಲ್ಲದಿದ್ದರೆ ಇದು blackmail ಆಗುತ್ತದೆ. ಅವರಿಗೆ ಛೀಮಾರಿ ಹಾಕಿಸಿ apology ಕೇಳಿಸಿ, ಇಲ್ಲ ಅಂದರೆ ಕೇಸ್ ರಿಜಿಸ್ಟರ್ ಮಾಡಿ. ದಯವಿಟ್ಟು ಈ ಕೆಲಸವನ್ನು ಮಾಡಿ.

ಶ್ರೀ ಎನ್. ಚೆಲುವರಾಯಸ್ವಾಮಿ : ಇವತ್ತು ವೆಂಕಟೇಶ್ ಹೇಳಿದ್ದಕ್ಕೆ ದಾಖಲಾತಿ ಕೇಳುತ್ತಿದ್ದಾರೆ. ಹಿಂದೆ ಮಾಡಿದ ಆಪಾದನೆಗಳಿಗೆ ದಾಖಲಾತಿ ಕೊಡಲಿ

(ಅಡಚಣೆ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಇಷ್ಟೇ ಕೇಳುವುದು: ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆಯವರು ಹಿರಿಯರಿದ್ದಾರೆ, ತಿಳಿವಳಿಕೆ ಇದೆ, 40 ವರ್ಷದ ರಾಜಕೀಯದ ಅನುಭವವೂ ಇದೆ. ಮೂರು ತಿಂಗಳಿಂದ ಇದು ಚರ್ಚೆ ಆಗುತ್ತಿರುವುದು ಜನಸಾಮಾನ್ಯರಿಗೆ ಗೊತ್ತು. ಒಂದು ಕಡೆ Bhat Commission ನೇಮಕವಾಗಿದೆ, ಇನ್ನೊಂದು ಕಡೆ High Courtಗೆ ಹೋಗಿದ್ದಾರೆ. High Courtನಲ್ಲಿ ಕೇಸ್ ನಡೆಯುತ್ತಿರುವ ಸಂದರ್ಭದಲ್ಲಿ ಚರ್ಚೆ ಮಾಡುವುದು ಸರಿಯೇ ಅಂತ ತಾವು ruling ಕೊಡಬೇಕು ಅಂತ ಮನವಿ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಾವೀಗ ನಿಲುವಳಿ ಸೂಚನೆ ತಂದಿದ್ದೇವೆ. ಈಗಾಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ, ಪತ್ರಿಕೆಯಲ್ಲಿ ಬಂದಿದೆ, CNN ನಲ್ಲಿ ಬಂದಿದೆ, ನನ್ನ ಮೇಲೆ ಆರೋಪ ಮಾಡುವುದರಲ್ಲಿ ಕಾಂಗ್ರೆಸ್ ಪಕ್ಷದ ಸಂಚಿದೆ ಅಂದಿದ್ದಾರೆ. ಈಗಾಗಲೇ ಮಾನ್ಯ ಖರ್ಗೆಯವರೂ ಸ್ಪಷ್ಟಪಡಿಸಿದ್ದಾರೆ. ಇವತ್ತೊಂದೇ ಸಲ ಅಲ್ಲ, 36 ವರ್ಷಗಳ ಕಾಲ ಜನರಿಂದ ಆರಿಸಿ ಬಂದಿದ್ದೇವೆ. ನಾವು ಮೊದಲು ಏನು ಹೇಳಿದ್ದೇವೆ ಅಂದರೆ ಬೆಂಗಳೂರಿನಲ್ಲಿ ನಡೆಯುವ ಅಧಿವೇಶನದಲ್ಲಿ ನೇರವಾಗಿ ನಾವು ಆಪಾದನೆ ಮಾಡಲಿಲ್ಲ. ನಾವು ವಿರೋಧ ಪಕ್ಷದಲ್ಲಿದ್ದೇವೆ. 150 ಕೋಟಿ ಆಪಾದನೆಯ ಬಗ್ಗೆ ಮಿತ್ರಪಕ್ಷ ಬಿಜೆಪಿ ಅಧ್ಯಕ್ಷರನ್ನು ಕೇಳಿ. ಸದಾನಂದಗೌಡರು ಹೇಳುತ್ತಾರೆ. Bhat Commission ನಲ್ಲಿ 150 ಕೋಟಿ ರೂಪಾಯಿ ಆಪಾದನೆ ಸಾಬೀತಾಗದೇ ಹೋದರೆ ನಾವು ಅದಕ್ಕೆ ಒಪ್ಪುವುದಿಲ್ಲ ಅಂತ. ಇವೆಲ್ಲಾ ವಿಷಯಗಳನ್ನೂ ಇವತ್ತು ಸಭೆ ನಡೆಯುವ ಕಾಲದಲ್ಲಿ ಇಟ್ಟಾಗ Bhat Commission ಮಾಡಿದ್ದೀರಿ, You have omitted Rs. 150 crores, ನೇರವಾದ ಅಪಾದನೆ ಇದೆ, ಅವರು ಹೇಳಿದರು ವಿರೋಧ ಪಕ್ಷದ

ನಾಯಕರು lawyer ಬಳಿ ಹೋಗಲಿ ಅಂತ. ನಾವು lawyer ಬಳಿ ಹೋಗುವಂಥದ್ದಲ್ಲ. Corruption charges ನ್ನು ನೀವಲ್ಲಿ ನಮೂದಿಸಿದ್ದಿದ್ದರೆ, ನೇರವಾಗಿ 150 ಕೋಟಿ ರೂ. ಲಂಚ ತೆಗೆದುಕೊಂಡಿರುವುದನ್ನು ಅದರಲ್ಲಿ ನೀವು ಸೇರಿಸಿಲ್ಲ. ಅದಕ್ಕೆ ನಾವು ಹೇಳಿದ್ದೇವೆ. ಆದ್ದರಿಂದ Bhat Commission ಮುಂದೆ ಇವೆಲ್ಲಾ ಸರಿಯಾದ ರೀತಿ ನಡೆಯುತ್ತಾ ಇಲ್ಲ. ಇವತ್ತು ಏನು ಮಾಡುತ್ತಿದ್ದೀರಿ ನೀವು? ನೆನ್ನೆ ಏನಾಗಿದೆ, media ಪತ್ರಿಕೆಗಳಲ್ಲಿ ಬಂದಿದೆ, ಇವತ್ತು ನಿಮ್ಮ ನಾರಾಯಣ ಗೌಡರು ನಾನು ಮುಖ್ಯಮಂತ್ರಿಗಳಿಗೆ ಇಷ್ಟು ಹಣ ಕೊಡುತ್ತೇವೆ ಅಂತ ಹೇಳಿದ್ದಾರೆ. Forest land ಬಗ್ಗೆ ಹೇಳಿದ್ದಾರೆ. ಇವತ್ತು ಸದನ ನಡೀತಿದೆ. ಆಗ ನೀವೇನು ಮಾಡಿದ್ದೀರಿ? ವೆಂಕಟೇಶರವರ ಅಪ್ಪ ಪೀರಣ್ಣ ನಮಗೆ ಬಹಳ ದೋಸ್ತ್. ವೆಂಕಟೇಶ್‌ರವರು ಮೊನ್ನೆ ಮುಖ್ಯಮಂತ್ರಿಯಾದ ಮೇಲೆ ನಿಮಗೆ ಪರಿಚಯವಾಗಿರಬೇಕು. ಆದರೆ ವೆಂಕಟೇಶ್ ಹಿಂದೇನೆ ಒಂದು ಸಲ ವಿಧಾನಸಭೆ ಸದಸ್ಯರಾಗಿದ್ದರು. ನಿಮ್ಮಲ್ಲೇನೋ ಇದೆ ಅಂಥ ಜೇಬಿನಿಂದ ತೆಗೆದುತೋರಿಸಿದರೆ ಯಾರು ಹೆದರಿಕೊಳ್ಳುವುದಿಲ್ಲ. ನಾವು ಮುಖ್ಯಮಂತ್ರಿಗಳಿಗೆ ಹೆದರುವುದಿಲ್ಲ, ಯಾರಿಗೂ ಹೆದರುವುದಿಲ್ಲ. ಇವತ್ತು ವೆಂಕಟೇಶ್ ಹೇಳಿಕೆ ಕೊಡಲಿ, ನಮ್ಮ ಮೇಲೆ ಆಪಾದನೆ ಮಾಡಲಿ. ಅಧ್ಯಕ್ಷರೇ, ತಮ್ಮಲ್ಲಿ ನಾವು ಏನಂತಿ ಮಾಡಿಕೊಳ್ಳುತ್ತಿದ್ದೇವೆ: ಮಾನ್ಯ ಖರ್ಗೆಯವರು ಹೇಳಿದಂತೆ ನಾವು CBI ತನಿಖೆಗೆ ತಯಾರಾಗಿದ್ದೇವೆ. ನೈಸ್ ವಿಚಾರದಲ್ಲಾಗಲೀ ಜನಾರ್ಧನ ರೆಡ್ಡಿ ಮಾಡಿದ ಆಪಾದನೆ ಬಗ್ಗೇನೂ CBI enquiry ಆಗಬೇಕಂತ ನಾವು ಹೇಳಿದ್ದೇವೆ. ಹೌದು, ನಮ್ಮ ರಾಷ್ಟ್ರೀಯ ಪಕ್ಷ, high command ನ್ನು ಭೇಟಿಯಾಗಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ನಡೆಯತಕ್ಕಂಥ ವಿದ್ಯಮಾನಗಳ ಬಗ್ಗೆ ಹೇಳಿದ್ದೇವೆ. ನಾವು ಸಿಬಿಐ ತನಿಖೆಯಾಗಬೇಕೆಂದು ಹೇಳಿದ್ದೇವೆ. ಇವೊತ್ತಿನ ದಿವಸ ಸಿಬಿಐ ತನಿಖೆ ಆಗಬೇಕೆನ್ನುವ ರೀತಿಯಲ್ಲಿ ಏನು ನಮ್ಮ ಪ್ರಸ್ತಾಪ ಇದೆ, ನಮ್ಮ ಏನು ಒಂದು ಭಾವನೆ ಇದೆ. ಅದಕ್ಕೆ ಸ್ಪಂದಿಸುತ್ತಿದ್ದಾರೆ. ಅದಕ್ಕೆ ನಾವೇನೂ ಅಂಜುವುದಿಲ್ಲ. ಸಿಬಿಐ ತನಿಖೆಗೆ ಅಂಜಿದ್ದೀರಿ, ಎಂದು ಇವೊತ್ತು ಕಾಂಗ್ರೆಸ್ ಪಕ್ಷ ನನ್ನ ಮೇಲೆ ಮತ್ತು ಖರ್ಗೆಯವರ ಮೇಲೆ ಏನು ಫೋಟೋ ತೋರಿಸುವುದಕ್ಕೆ ಹೊರಟಿದ್ದಾರೆ. ಈ ಸೆಷನ್‌ನಲ್ಲಿ ಮಾನ್ಯ ರಾಮಚಂದ್ರಗೌಡರು ಮರೆಯುತ್ತಿದ್ದಾರೆ. ತೆಲಗಿ ಅಡ್ವಾಣಿಯವರ ಜೊತೆಯಲ್ಲಿ, ಜಾರ್ಜ್ ಫರ್ನಾಂಡಿಸ್ ಜೊತೆಯಲ್ಲಿ ಕುಳಿತು ಊಟ ಮಾಡತಕ್ಕಂಥ ಫೋಟೋ ಇದೆ. ಕೇಸ್ ರಿಜಿಸ್ಟರ್ ಮಾಡಿಸಿ ಮತ್ತು ಸಿಬಿಐ ತನಿಖೆಗೆ ಒಪ್ಪಿಸಿ ಎಂದು ಹೇಳುತ್ತಿದ್ದೇವೆ. ಅದಕ್ಕೆ ಮಾನ್ಯ ಪ್ರಕಾಶ್‌ರವರೆ, ನಿಮ್ಮ ಸಮ್ಮಿಶ್ರ ಸರ್ಕಾರ, ಪಬ್ಲಿಕ ಒಪಿನಿಯನ್ ಏನಿದೆ, ಇದನ್ನೆಲ್ಲಾ ನೋಡಿದ್ದೇವೆ. ಇವೊತ್ತು ಚುನಾವಣೆಗೆ ಸಿದ್ಧರಾಗಿ, ನಾನೂ ಕೂಡ ಸಿದ್ಧನಾಗಿದ್ದೇನೆ, ಜನಾಭಿಪ್ರಾಯ ಕೂಡ ಬರುತ್ತದೆ. ನೀವು ಅಧಿಕಾರಕ್ಕೋಸ್ಕರ ಬಿಟ್ಟುಕೊಡತಕ್ಕಂಥಾದ್ದು ಇಲ್ಲ, ನಮಗೆ ಗೊತ್ತಿದೆ. ಇವೊತ್ತಿನ ದಿವಸ ಈ ತರಹ ನೀವು ಏನು ಸಂಚು

ಹೂಡಿದ್ದೇವೆಂದು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಇದಕ್ಕೆ ನಾವು ಅಂಜುವುದಿಲ್ಲ. ಇದರ ಮೇಲೆ ಸಿಬಿಐ ತನಿಖೆಯಾಗಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸಾರಿಗೆ ಆಯುಕ್ತರಾದ ನಾರಾಯಣಗೌಡರು ದುಡ್ಡನ್ನು ಮುಖ್ಯಮಂತ್ರಿಗೆ ಕೊಡಬೇಕೆಂದು ಹೇಳಿದ್ದಾರೆಂದು ಏನು ಆಪಾದನೆ ಮಾಡುತ್ತಿದ್ದಾರೆ,...

ಒಬ್ಬ ಮಾನ್ಯ ಸದಸ್ಯರು : ಪತ್ರಿಕೆಯಲ್ಲಿ ಹೇಳಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಪತ್ರಿಕೆಯಲ್ಲಿ ಹೇಳಿದ್ದರೆ ಇಲ್ಯಾಕೆ ತರುತ್ತೀರಿ? ನನಗೂ ಸ್ವಲ್ಪ ಅರ್ಥವಾಗುತ್ತದೆ. ಈಗ ಅವರು ಹೇಳತಕ್ಕಂಥಾದ್ದು, ಅವರು ಮಾತನಾಡುವಾಗ, ನಾರಾಯಣಗೌಡರು ಮುಖ್ಯಮಂತ್ರಿಗಳ ಹೆಸರಿನಲ್ಲಿ ಹಣ ಕೇಳಿದ್ದಾರೆಂದು ಹೇಳಿದರು. ಇವೊತ್ತು ನೀವೇ ಸಿ.ಡಿ. ಕ್ಯಾಸೆಟ್ ತರಿಸಿ ಅಲ್ಲಿ ಏನಿದೆ ಎಂದು ನೋಡಿ. ಯಾವ ರೀತಿ ಸಿ.ಡಿ.ಯಲ್ಲಿರುವ ಸತ್ಯಾಸತ್ಯತೆ ಬಗ್ಗೆ ನಿಮಗೆ ಮನವರಿಕೆಯಾದರೆ, ಆ ವಿಷಯದಲ್ಲಿ ನಿಮ್ಮ ತೀರ್ಮಾನಕ್ಕೆ ಬಿಡುವುದಕ್ಕೆ ಸಿದ್ಧರಿದ್ದೇವೆ. ನಾವು ಅಂಜಿಕೊಂಡು ಹೋಗುತ್ತಿಲ್ಲ. ಅವರ್‍ಯಾಕೆ ಸಿಬಿಐ ತನಿಖೆಗೆ ಇನ್‌ಸಿಸ್ಟ್ ಮಾಡುತ್ತಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಭಟ್ ಕಮೀಷನ್‌ನಲ್ಲಿ 150 ಕೋಟಿ ರೂ ಹಗರಣದ ವಿಷಯವನ್ನು ಸೇರಿಸಿಲ್ಲವೆಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಆ ಭಟ್ ಕಮೀಷನ್‌ಗೆ ಸಂಬಂಧಿಸಿದಂತೆ ನಾವು ಏನು ಆರ್ಡರ್ ಮಾಡಿದ್ದೇವೆ, ಅವರು ಎಲ್ಲಿಂದ, ಏನು ಕಾರ್ಯಕ್ರಮ ಶುರು ಮಾಡುತ್ತಾರೆ, ಅಲ್ಲಿಂದ ನಾನು ಈ ಗಣಿಗಾರಿಕೆ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸ್ವಜನಪಕ್ಷಪಾತ ಇರಬಹುದು, ಭ್ರಷ್ಟಾಚಾರ ಇರಬಹುದು, ಇದನ್ನೆಲ್ಲವನ್ನೂ ನಾನು ಆ ತನಿಖೆ ವ್ಯಾಪ್ತಿಗೆ ತಂದಿದ್ದೇನೆ, 150 ಕೋಟಿ ರೂ. ಹಗರಣವೂ ಅದರಲ್ಲಿದೆ, ಅದನ್ನೂ ತಂದಿದ್ದೇವೆ, ಇದರಲ್ಲಿ ಮುಚ್ಚುಮರೆ ಇಲ್ಲ. 150 ಕೋಟಿ ರೂ ಹಗರಣದ ಬಗ್ಗೆ ಬೀದಿ-ಬೀದಿಗಳಲ್ಲಿ ಏನು ಚರ್ಚೆ ಮಾಡುತ್ತಿದ್ದಾರೆ. ಇವರ ಹತ್ತಿರ ಮಾಹಿತಿಗಳಿದ್ದರೆ, ಹೋಗಿ ಎನ್‌ಕ್ವೈರಿ ಕಮಿಷನ್ ಮುಂದೆ ಸಬ್‌ಮಿಟ್ ಮಾಡಲಿ, ಅಲ್ಲಿ ಪ್ರೂವ್ ಮಾಡಿ. ನಂತರ ಸಿಬಿಐಗೆ ಕೊಡೋಣ. ಸಿಬಿಐ ಎಂದು ಆ ತರಹ ಏಕೆ ಇವೊತ್ತು ಅದರ ಬಗ್ಗೆ ಚರ್ಚೆ ಮಾಡುತ್ತಾರೆ? 3 ವರ್ಷವಾಗಿದೆ, 30 ಸಾವಿರ ಕೋಟಿ ರೂಪಾಯಿಗಳ ಹಗರಣವನ್ನು ಪತ್ತೆ ಹಚ್ಚಿದ್ದೇವೆಂದು ಕಾಂಗ್ರೆಸ್ ಸರ್ಕಾರದವರು ಏನು ಹೇಳುತ್ತಾರೆ, ಸಿಬಿಐ ಎನ್‌ಕ್ವೈರಿಗೆ ಹೋಗೋಣ. 3 ವರ್ಷದಿಂದ ಏನು ಮಾಡಿದ್ದಾರೆ? ಹಲವಾರು ಸಿಬಿಐ ಪ್ರಕರಣಗಳು ಏನಾಗಿವೆ? ಜ್ಯುಡಿಷಿಯಲ್ ಎನ್‌ಕ್ವೈರಿ ಆರ್ಡರ್ ಮಾಡಿದ್ದೇವೆ. ಭೂಮಿ ವಿಷಯದಲ್ಲಿ ಹೌಸ್ ಕಮಿಟಿ ಇದೆ. ಅದನ್ನು ತಾವೇ ರಚಿಸಿದ್ದೀರಿ. ಈ ಭೂಮಿ ಹಗರಣ ಕುರಿತು ಹೊಸದಾಗಿ ಏನು ಹೇಳುವುದಕ್ಕೆ ಹೊರಟಿದ್ದಾರೆ. ದಾಖಲಾತಿ ಇದ್ದರೆ, ಹೌಸು ಕಮಿಟಿ ಮುಂದೆ ಕೊಡಲಿ, ಫೈಂಡಿಂಗ್ಸ್ ಕೊಟ್ಟ ನಂತರ ಏನು ತೀರ್ಮಾನ ಕೊಡುತ್ತಾರೆ, ಅದಕ್ಕೆ ತಲೆಬಾಗಲು ಸಿದ್ಧರಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ವಿಷಯ ಬೇರೆ ಬೇರೆ ಕಡೆಗಳಿಗೆ ಹೊರಟು ಹೋಗುತ್ತಿದೆ. ಈಗ ಒಂದು ಆಪಾದನೆ ಮಾಡಿದ ಸಂದರ್ಭದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟರು. ಆ ತರಹದ ದಾಖಲೆಗಳನ್ನು ಸೃಷ್ಟಿಸುವುದಕ್ಕೆ ಸಾಧ್ಯತೆ ಇದೆಯೆಂದು ಪ್ರದರ್ಶನ ಮಾಡಿದ್ದಾರೆ. ವೆಂಕಟೇಶ್‌ರವರು ಹೇಳಿದ ತಕ್ಷಣ ಹಿರಿಯರಾದ ತಾವಿಬ್ಬರೂ ಬಹಳ ಭಾವೋದ್ವೇಗಕ್ಕೆ ಒಳಗಾದರೆ, ಅದು ಸಹಜವಾದ ಮಾನವ ಸ್ವಭಾವ ಕೂಡ, ನಿರಪರಾಧಿಗಳ ಮೇಲೆ ಆಪಾದನೆಗಳು ಬಂದಾಗ ಆಗ ಭಾವೋದ್ವೇಗಕ್ಕೆ ಒಳಗಾಗುವುದು ಸಹಜ, ಆದರೆ, ಈ ಮಾತನ್ನು ಹೇಳುತ್ತಾ, ವೆಂಕಟೇಶ್‌ರವರು ಪೋಟೋ ತೋರಿಸಿದ ತಕ್ಷಣ ಅದನ್ನು ನೀವು ತೆಗೆದುಕೊಳ್ಳಬೇಕು, ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಬೇಕೆಂದು ಪ್ರತಿಪಾದಿಸುತ್ತೀರಿ. ಅದೇ ಮಾತನ್ನು ಮೇಲ್ಮನೆಯಲ್ಲಿ ಒಬ್ಬ ಸದಸ್ಯರು, ನನ್ನ ಹತ್ತಿರ ದಾಖಲೆಗಳಿವೆ, ಅದನ್ನು ತೋರಿಸುತ್ತೇನೆಂದು ಹೇಳಿದಾಗ, ನಿಮಗೆ ನಾನು ಅದನ್ನು ಒದಗಿಸಿಕೊಡುವುದಿಲ್ಲ ಅಥವಾ ಅದನ್ನು ಸಂಬಂಧಪಟ್ಟಿರತಕ್ಕಂಥ ಇಲಾಖೆಯ ವಿಚಾರಣಾಧಿಕಾರಿಗಳ ಕೈಗೂ ಕೊಡುವುದಿಲ್ಲ. ಮತ್ತು ಅದಕ್ಕಾಗಿಯೇ ನೇಮಕ ಮಾಡಿರುವ ಸಮಿತಿ ಮುಂದೆಯೂ ನಾನು ಪ್ರಮಾಣಪತ್ರವನ್ನೂ ಸಲ್ಲಿಸುವುದಿಲ್ಲ. ಸಿಬಿಐ ತನಿಖೆಗೆ ಆದೇಶ ಮಾಡಿದಾಗ ಮಾತ್ರ ನಾನು ಅದನ್ನು ಕೊಡುತ್ತೇನೆಂದು ಹೇಳಿದಾಗ, ತಾವು ಯಾವ ರೀತಿ ಪ್ರತಿಕ್ರಿಯಿಸಿದಿರಿ? ಯಾವ ರೀತಿಯಾಗಿ ಒತ್ತಡ ತಂದಿರಿ? ಆಗ ಒಂದು ಸಂದರ್ಭಕ್ಕೆ ಒಂದು ತರಹದ ವಾದ, ಮತ್ತೊಂದು ಸಂದರ್ಭಕ್ಕೆ ಮತ್ತೊಂದು ತರಹದ ವಾದ ಮಾಡತಕ್ಕಂಥಾದ್ದು ಸತ್ಯಕ್ಕೆ ಅಪಚಾರ ಮಾಡಿದಂತೆ. 'Man is the greatest truth' ಎಂದು ಮಹಾಭಾರತದಲ್ಲಿ ಹೇಳುತ್ತಾರೆ. ಮನುಷ್ಯನೇ ನಿಜವಾದ ಸತ್ಯ. ಈಗ ಆ ಮನುಷ್ಯನೇ ಆಗಿರುವುದರಿಂದ ಆ ವಿಚಾರಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದರ ಬಗ್ಗೆ ಏನೆಲ್ಲಾ ಕುತಂತ್ರಗಳನ್ನು ಮಾಡಬಹುದು. ಅದರ ಸತ್ಯಾಸತ್ಯತೆ, ಮತ್ತೊಂದು ಹಗರಣ, ಈ ಹಗರಣದಲ್ಲಿ ಆಗಿರುವುದು, ಇದೆಲ್ಲದರ ಜೊತೆಗೆ ಈಗಾಗಲೇ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಹೇಳಿ ಸಂಬಂಧಪಟ್ಟಿರತಕ್ಕಂಥ ದಾಖಲೆಗಳು ಇದೆಯೆಂದು ಹೇಳಿಕೊಂಡಿರತಕ್ಕಂಥವರು ಅಲ್ಲಿ ಶ್ರೇಷ್ಠ ನ್ಯಾಯಾಲಯದಲ್ಲಿ ಒಂದು ಅರ್ಜಿ ಹಾಕಿದ್ದಾರೆ. ಶ್ರೇಷ್ಠ ನ್ಯಾಯಾಲಯದವರು ಅದರ ಬಗ್ಗೆ ನಿರ್ಧರಿಸುವುದಕ್ಕೆ ಆಜ್ಞೆಯನ್ನು ಕಾದಿಟ್ಟಿದ್ದಾರೆ. ಆದೇಶ, ತೀರ್ಪು ಕೊಡುವುದನ್ನು ಕಾದಿಟ್ಟಿದ್ದಾರೆ. ಅದು ಸಬ್‌ಜುಡೀಸ್ ಆಗುವುದು, ಎರಡನೆಯದಾಗಿ, ಇಲ್ಲಿ ನಿಯಮ 60ರ ಕೆಳಗೆ ಕೊಟ್ಟಿರುವ ಇಲ್ಲಿ ನಾವು ಚರ್ಚೆ ಮಾಡುವ ವಿಷಯಕ್ಕೆ ಯಾವುದೆ ತರಹದ ಸಂಬಂಧವಿಲ್ಲ. ಹಾಗೆ ಸಂಬಂಧ ಇದ್ದಿದ್ದರೆ, ನಿಲುವಳಿ ಸೂಚನೆ ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ

2.00 ಪಿ.ಎಂ

ಮುಂದೆ ವಿಚಾರಣೆಯಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕದ್ದು ಅಲ್ಲವೆಂದು ನಮ್ಮ ನಿಯಮಾವಳಿ ಸಂಖ್ಯೆ 60ರಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿಷಯವೇ ಇನ್ನೂ ಬಂದಿಲ್ಲ. We have not yet come to adjourment Motion.

ಶ್ರೀ ಎಂ.ಪಿ. ಪ್ರಕಾಶ್ : ನಾನು ಹೇಳುತ್ತೇನೆ. ಇನ್ನು ಏನೂ ಪ್ರಶ್ನೆ ಇಲ್ಲ. ಈ ತರಹದಲ್ಲಿ ಇದ್ದಾಗ ನಾವು ನಿಲುವಳಿ ಸೂಚನೆಗೆ ಸಂಬಂಧಪಡತಕ್ಕಂಥಾದ್ದು ಬಿಟ್ಟು ಅನ್ಯ ವಿಚಾರಗಳಿಗೆ ಸಂಬಂಧಪಟ್ಟಿರುವುದೆಲ್ಲವೂ ಈಗ ಹಾದುಹೋಯಿತು. ಈ ತರಹದ ತಂತ್ರಗಳನ್ನೂ ನಾವು ಮಾಡುತ್ತೇವೆ, ಅಸತ್ಯವಾದ ವಿಷಯಗಳನ್ನು ಪದೇ ಪದೇ ನೂರು ಬಾರಿ ಹೇಳಿದರೆ, ಅದು ಸತ್ಯವಾಗಬಹುದೆಂದು ಕೆಲವು ಸಲ ಭಾವಿಸಿಕೊಳ್ಳುತ್ತೇವೆ. ಕೆಲವರನ್ನು ಎಲ್ಲಾ ಕಾಲದಲ್ಲೂ ಮೋಸ ಮಾಡಬಹುದು, ಎಲ್ಲಾ ಜನರನ್ನು ಸ್ವಲ್ಪ ಕಾಲ ಮೋಸ ಮಾಡಬಹುದು. ಆದರೆ, ಎಲ್ಲಾ ಜನರನ್ನು ಎಲ್ಲಾ ಕಾಲದಲ್ಲೂ ಮೋಸ ಮಾಡುವುದಕ್ಕಾಗುವುದಿಲ್ಲ. ನನ್ನ ಮಗ ಮತ್ತೊಬ್ಬ ಶಾಸಕರು ಅಲ್ಲಿದ್ದಂತಹ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರ ವರ್ಗಾವಣೆಯಲ್ಲಿ ಪಾತ್ರ ವಹಿಸಿದ್ದಾನೆ. ಗಣಿ ವಿಚಾರದಲ್ಲಿ ಆಪಾದನೆ ಮಾಡಿದರು. ನೀವು ಮಾಡಿಲ್ಲ. 'ಆಪಾದನೆ ಮಾಡಿದರು' ಎಂದು ಹೇಳಿದೆ. ನೀವು ಮಾಡಿದಿರಿ ಎಂದು ಹೇಳಲಿಲ್ಲ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಸಂಬಂಧವಿಲ್ಲದಿರುವ ವಿಷಯದ ಬಗ್ಗೆ ಮಾತನಾಡಬೇಡಿರೆಂದು ತಾವೇ ಈಗ ಹೇಳಿದಿರಿ. ಈಗ ಆ ವಿಷಯ ನಮ್ಮ ಮುಂದೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಏಕೆಂದರೆ, ಇದಕ್ಕೆ ನೇರವಾದ ಉದಾಹರಣೆ......

ಶ್ರೀ ಕೆ.ಆರ್. ರಮೇಶ್‌ಕುಮಾರ್ : ದಯವಿಟ್ಟು ತಾವು ಬಹಳ ಹಿರಿಯರಿದ್ದೀರಿ. You have made out two issues, ಒಂದು, ಜನಾರ್ಧನ ರೆಡ್ಡಿಯವರು ಮೇಲ್ಮನೆ ಸದಸ್ಯರೆಂದು ಹೇಳಿ ಅದಕ್ಕೂ ನಮಗೂ ಸಂಬಂಧವಿಲ್ಲವೆಂದೂ, ಏಕೆ ಆ ತರಹ ವರ್ತಿಸಿದರು, ಸಂಬಂಧವಿಲ್ಲ ಕ್ರಮ ಜರುಗಿಸುವ ಅಧಿಕಾರ ಇದೆ, ಜರುಗಿಸಿ, ಅವರ ಹತ್ತಿರವಿರುವ ಡಾಕ್ಯುಮೆಂಟ್ ವಿಚಾರಕ್ಕೆ ತಾವು ಏನು ಹೇಳಿದಿರಿ, you agree that, it is a frictions agreement ಎಂದು.....

ಶ್ರೀ ಎಂ.ಪಿ. ಪ್ರಕಾಶ್ : ತಾವು ಹಿರಿಯರಿದ್ದೀರಿ. ನಾನು ಹೇಳುವುದೇನೆಂದರೆ, ನಾನು ವಯಸ್ಸಿನಲ್ಲಿ ರಮೇಶ್ ಕುಮಾರ್ ಅವರಿಗಿಂತಲೂ ಹಿರಿಯನಿದ್ದೇನೆ. ಅವರ ಬುದ್ಧಿಮತ್ತೆ ಅವರ ಅನುಭವದ ಹಿನ್ನೆಲೆಯಲ್ಲಿ ನಾನು ಇನ್ನೂ ಸಣ್ಣವನಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆ ವ್ಯಂಗ್ಯ ಎಲ್ಲವೂ ಗೊತ್ತಿದೆ. ನೇರವಾಗಿ ಮಾತನಾಡಿ. ನಿಮ್ಮ ಜೊತೆ ಬಹಳ ದಿವಸಗಳ ಕಾಲ ಕಳೆದಿದ್ದೇನೆ. Please come to the fact.

ಶ್ರೀ ಎಂ.ಪಿ. ಪ್ರಕಾಶ್ : ಏಕೆ ಸಿಟ್ಟಿಗೆ ಹೋಗುತ್ತೀರಿ? ತಾವು ಹಿರಿಯರಾದಂತವಹರು, 'ತನುವಿನ ಕೋಪ ಹಿರಿತನದ ಕೇಡು' ಎಂದು ವಚನದಲ್ಲಿ ಬರುತ್ತದೆ. ನಮ್ಮ ಕೋಪ ನಮ್ಮ ಹಿರಿತನಕ್ಕೆ ಕೇಡಾಗುತ್ತದೆ.
ಆದುದರಿಂದ ಇವತ್ತು ಅವರೂ ಕೂಡ ಏನು ಉಪದೇಶ ಮಾಡುತ್ತಾರೋ ಅದರಂತೆ ನೀವು ಪ್ರತಿಯೊಂದು ವಿಷಯಕ್ಕೆ ಇಷ್ಟೊಂದು ಭಾವೋದ್ರೇಗಕ್ಕೆ ಒಳಗಾಗಬೇಕಾಗಿಲ್ಲ. ನಮಗೆ ಬೇಕಾದಷ್ಟು ಆಪಾದನೆಗಳು ಬಂದಿದೆ. ಕಾನೂನಿನ ಪ್ರಕಾರ ಅದನ್ನು ಎದುರಿಸುತ್ತೇವೆ. ಇಲ್ಲಿ ಬಂದಿರತಕ್ಕಂಥದ್ದೇನೆಂದರೆ ನಿಯಮ 60ಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಯ ಬಗ್ಗೆ ಮಾತನಾಡಬೇಕೇ ವಿನಹ ಬೇರೆ ವಿಚಾರವನ್ನು ಪ್ರಸ್ತಾಪ ಮಾಡಬಾರದು. ಬೇರೆ ವಿಚಾರದಲ್ಲಿ ಸಿ.ಬಿ.ಐ. ಗೆ ಕೊಡಬೇಕೆಂದು ಒತ್ತಡವನ್ನು ತಂದರೆ ಸಿ.ಬಿ.ಐ.ಗೆ ಕೊಡಬೇಕಾಗಿಲ್ಲವೆಂದು ತಾವೇ ನಿಲುವನ್ನು ತೆಗೆದುಕೊಂಡಿದ್ದೀರಿ. ವೀರಪ್ಪನ್ ಪ್ರಕರಣದಲ್ಲಿ ಸಿ.ಬಿ.ಐ. ತನಿಖೆ ಮಾಡಬೇಕಾಗಿಲ್ಲ. ಅಗತ್ಯವಿಲ್ಲವೆಂದು ಹೇಳಿದ್ದೀರಿ. ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಸಿ.ಬಿ.ಐ. ಸಿ.ಒ.ಡಿ. ಅಥವಾ ನ್ಯಾಯಂಗ ತನಿಖೆಗೆ ಕೊಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸಿ.ಬಿ.ಐ. ತನಿಖೆ ಮಾಡಬೇಕೆಂದು ಕೇಳಿದಾಗ ಕೇಂದ್ರ ಸರ್ಕಾರದಿಂದ ಏನು ಬಂತು ಎಂಬ ಬಗ್ಗೆ ಕೊನೆಯ ಪಕ್ಷ ತಮ್ಮ ಹತ್ತಿರ ಇರತಕ್ಕ ದಾಖಲೆಯನ್ನು ತೆಗೆಸಿ ನೋಡಿ. ಕೇಂದ್ರ ಸರ್ಕಾರದ ಗೃಹ ಸಚಿವಾಲಯದವರು ಏನು ಬರೆದರು ಅಂದರೆ, ನೀವೇ ಮಾಡತಕ್ಕ ವಿಚಾರಣೆ ಒಳ್ಳೆಯದಾಗಿದೆ ಅದನ್ನೆ ಮುಂದುವರೆಸಿ we are grateful to you ಎನ್ನತಕ್ಕ ಮಾತು ಸಹ ಅಲ್ಲಿಂದ ಬಂದಿದೆ, ಆದ್ದರಿಂದ ಒಳ್ಳೆಯ ಕೆಲಸವನ್ನು ಮಾಡಿದರೆ ಶಹಬಾಸ್‌ಗಿರಿ ಕೊಡಿಸಿ, ಕೆಟ್ಟ ಕೆಲಸವನ್ನು ಮಾಡಿದರೆ ಕೆಟ್ಟ ಕೆಲಸ ಎಂದು ಹೇಳಿ. ಅದನ್ನು ಬಿಟ್ಟು ಸುಮ್ಮನೆ ವಾದ ಮಾಡಿ ಎಷ್ಟು ಸೇವ್ ಮಾಡುತ್ತೀರಿ? ಅದನ್ನು ಬಿಡಿ.

ಶ್ರೀ ಎಂ.ಪಿ. ಪ್ರಕಾಶ್ : ಅದರ ಬಗ್ಗೆ ಅಧಿಕೃತ ದಾಖಲೆ ಬೇಕು ಎಂದರೆ ಕೊಡುತ್ತೇನೆ. ಅಧಿಕೃತ ದಾಖಲೆಯ ಬಗ್ಗೆ ಕೇಂದ್ರ ಸರ್ಕಾರದವರು ಸ್ಟ್ಯಾಫಿಡ್‌ರವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳುವುದರ ಜೊತೆಗೆ ಸಿ.ಬಿ.ಐ. ಜೊತೆಗೆ ಸಮರ್ಥವಾದ ಅಧಿಕಾರಿಗಳು, ಅಂದಿನ ಮುಖ್ಯಮಂತ್ರಿಯವರು, ಗೃಹ ಸಚಿವರಾದ ಖರ್ಗೆಯವರು ಕರ್ನಾಟಕ ಸರ್ಕಾರದಲ್ಲೇ ಸಮರ್ಥವಾದ ಅಧಿಕಾರಿಗಳು ಇದ್ದಾರೆ, ಕರ್ನಾಟಕ ರಾಜ್ಯದಲ್ಲಿ ಸಮರ್ಥವಾದ ಪೋಲೀಸ್ ಅಧಿಕಾರಿಗಳು ಇರುವಾಗ ಮತ್ತೆ ಇದನ್ನು ಸಿ.ಬಿ.ಐ. ಗೆ ಕೊಡಬೇಕಾದ ಅಗತ್ಯವಿಲ್ಲ ಎಂದು ಹೇಳಿರುವುದು ಸಹ ದಾಖಲೆಯಲ್ಲಿದೆ. ಆ ರೀತಿಯಾಗಿ ನಮ್ಮ ಸರ್ಕಾರ ಬಂದಮೇಲೆ ನಮ್ಮಲ್ಲಿದ್ದ ಸಮರ್ಥ ಪೋಲೀಸ್ ಅಧಿಕಾರಿಗಳು ಹೋಗಿಬಿಟ್ಟರೆ? ಈಗ ಸಮರ್ಥವಾದ ಪೋಲೀಸ್ ಅಧಿಕಾರಿಗಳು ಇಲ್ಲವೆ? ಅವತ್ತು ಸ್ಟ್ಯಾಂಪಿಡ್ ವಿಚಾರದಲ್ಲಿ ಪ್ರಸ್ತಾಪ ಮಾಡಿರತಕ್ಕದ್ದು,

ಈವತ್ತು ನಮ್ಮ ಪೊಲೀಸ್ ಇಲಾಖೆಯಲ್ಲಿ ಸಮರ್ಥ ಅಧಿಕಾರಿಗಳು ಇದ್ದಾರೆ. ಆದ್ದರಿಂದ ನಮ್ಮ ಪೊಲೀಸ್ ಇಲಾಖೆಯಿಂದ ವಿಚಾರಣೆ ಮಾಡಿ ಎಂದು ಹೇಳತಕ್ಕ ಸೌಜನ್ಯವನ್ನು ತೋರಿಸಬೇಕಾಗಿತ್ತು. ಸಮರ್ಥವಾದ ಅಧಿಕಾರಿಗಳು ನಮ್ಮಲ್ಲಿ ಸಹ ಇದ್ದಾರೆ. ಈ ಎಲ್ಲಾ ಕಾರಣಗಳ ಹಿನ್ನಲೆಯಲ್ಲಿ ಸೀಮಿತವಾಗಿರತಕ್ಕ ವಿಚಾರಕ್ಕೆ ಸಂಬಂಧಪಟ್ಟಿರತಕ್ಕದ್ದು ಆಗಬೇಕು. ಈಗ ನೆನಪು ಮಾಡಬೇಕೆಂದರೆ ದಯಮಾಡಿ ಮಾನ್ಯ ರಮೇಶ್ ಕುಮಾರ್‌ರವರಿಗೆ ಸಿಟ್ಟು ಬರುವುದಿಲ್ಲವೆಂದರೆ ಹೇಳುತ್ತೇನೆ. ಹಿಂದೆ ಇದೇ ಸದನದಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಬಗ್ಗೆ ಹಿಂದೆ ಸಿ.ಎಂ. ಅವರ ಬಗ್ಗೆ ಮಾತನಾಡಿದ್ದ ಸಂದರ್ಭದಲ್ಲಿ, ಕ್ಯಾಸೆಟ್ ನನ್ನ ಹತ್ತಿರ ಇದೆ, ತೋರಿಸುತ್ತೇನೆ ಎಂದು 1984–85ನೇ ಇಸವಿಯಲ್ಲಿ ತಾವು ಮಾತನಾಡಿರತಕ್ಕದ್ದು, ಆ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಮಾತನಾಡಿರತಕ್ಕದ್ದು, ಕ್ಯಾಸೆಟ್ ದಾಖಲೆ ನನ್ನ ಹತ್ತಿರ ಇದೆ, ತೋರಿಸುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ ತಕ್ಷಣ ಅದು ಕೇಸ್ ಆಗುವುದಿಲ್ಲ. ಆ ವಿಚಾರವನ್ನು ತಮ್ಮ ಕಡತದಲ್ಲಿ ಹೋಗತಕ್ಕದ್ದು ಆಗಬೇಕು.

SRI K.R. RAMESH KUMAR : We should also have the courage to come out with all the facts. ಮಾನ್ಯ ಬಣಕಾರ್‌ರವರು ಅಧ್ಯಕ್ಷರಾಗಿದ್ದಾಗ ನಾನು ಸದಸ್ಯನಾಗಿದ್ದೆ. ತಾವು ಮಂತ್ರಿಗಳಾಗಿದ್ದಿರಿ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಈ ವಿಚಾರವನ್ನು ಮಾನ್ಯ ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದರು. ನೇರವಾಗಿ ಇದನ್ನು ಹೇಳಬೇಕು. cover ಮಾಡುವ ಅಗತ್ಯವಿಲ್ಲ. ಅವತ್ತು ಅಧ್ಯಕ್ಷರೂ ಕೂಡ ನನ್ನನ್ನು ಏನೂ ಕೇಳಲಿಲ್ಲ. ಸಂಬಂಧಪಟ್ಟವರೂ ಕೇಳಲಿಲ್ಲ, ಎಂದಿದ್ದರೆ ನಾನು ಕೊಡಲು ತಯಾರಾಗಿದ್ದೆ. ಅವರು ಸ್ವೀಕಾರ ಮಾಡಲಿಲ್ಲ. ಆದರೆ ಅವತ್ತಿನ ದಿವಸ that was the position. Today's position is different. We are asking him to stand up and make his statement, submit the documents. There is a qualitative difference between the situation then and now.

ಶ್ರೀ ಎಂ.ಪಿ. ಪ್ರಕಾಶ್ : ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ ಎಂದರೆ, ಅವರು ಹೇಳಿರತಕ್ಕದ್ದು ಸಂಪೂರ್ಣವಾಗಿ ಸತ್ಯ. ಈ ದಾಖಲೆಯನ್ನು ನಾವು ತೋರಿಸುತ್ತೇವೆಂದು ಹೇಳಿದ ತಕ್ಷಣ, ಈ ರೀತಿಯ ಗೊಂದಲಮಯ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಯಾವುದಕ್ಕೂ ಹೇಸದ ಜನರು ಇರುತ್ತಾರೆ. ಈ ಸಂದರ್ಭದಲ್ಲಿ ಆ ರೀತಿಯ ಜನರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ಅವರು ಹೇಳಿಕೆಯನ್ನು ಕೊಡಬೇಕು. ಯಾವುದೇ ಕಾರಣವನ್ನು ಕೊಡಿ, ಈ ವಿಚಾರದಲ್ಲಿ ತಾವು ತೆಗೆದುಕೊಳ್ಳತಕ್ಕ ನಿರ್ಣಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರ ಅದರ ಮೇಲೆ ಕೇಸನ್ನು ಹಾಕಬೇಕು ಎನ್ನತಕ್ಕ ವಿಚಾರದಲ್ಲಿ ಅವರ ಮೇಲೆ ಕೇಸನ್ನು ಹಾಕಲು ಕಾನೂನಿನ ಪ್ರಕಾರ ಬರುವುದಿಲ್ಲ. ಏಕೆಂದರೆ ಇದು ಪ್ರಿವಿಲೇಜ್ ಆಗುತ್ತದೆ.

SRI K.R. RAMESH KUMAR : You are a practicing lawyer. If an offence is committed outside the precincts of this House, the concerned person will go to police station and take recourse to under law. If an offence is committed inside the House, ಈ ಸದನದಲ್ಲಿ ಆದಾಗ, ಸಭಾಧ್ಯಕ್ಷರು ಅವರ ಸ್ಥಾನದಲ್ಲಿ ಇದ್ದಾಗ, ಯಾರು ನೊಂದಿದ್ದಾರೆ. aggrieved parties ನನಗೆ ಈ ರೀತಿ ಅಪಮಾನವಾಗಿದೆ ಎಂದು ಸಭಾಧ್ಯಕ್ಷರಲ್ಲಿ ನಿವೇದನೆ ಮಾಡಿಕೊಳ್ಳುತ್ತಾರೆ. ಅದನ್ನು ನಿವಾರಣೆ ಮಾಡಬೇಕಾದರೆ ಅವರಿಗೆ ಇರತಕ್ಕ ಮಾರ್ಗವೇನು? ಅವರು ಹೇಳಿರತಕ್ಕ ಆಪಾದನೆಯನ್ನು ಸಾಬೀತು ಮಾಡಬೇಕಾಗಿದ್ದರೆ ದಾಖಲೆಯನ್ನು ತಮಗೆ ಒದಗಿಸಬೇಕು. ಅನಂತರ ತಾವು ಆಪಾದಿತರಿಗೆ ತಮ್ಮ ಮೇಲೆ ಇಂಥ ಆಪಾದನೆ ಮಾಡಲಾಗಿದೆ ಅದಕ್ಕೆ ಉತ್ತರ ನೀಡಲು ಸಿದ್ಧರಾಗಿರಿ ಎಂದು ತಿಳಿಸಬೇಕಾಗುತ್ತದೆ. Then it becomes a part of the proceedings of the House. ಇದು ಅಫೆನ್ಸ್ ಆಗುವುದಿಲ್ಲ. ಅವರ ಆಪಾದನೆ substantiate ಮಾಡಲು ದಾಖಲೆಗಳನ್ನು ಒದಗಿಸಬೇಕು. ಇಲ್ಲದಿದ್ದರೆ ಅದು ಬ್ಲಾಕ್‌ಮೇಲಿಂಗ್ ಆಗುತ್ತದೆ, ಆದ್ದರಿಂದ ಸಭಾಧ್ಯಕ್ಷರು ಸ್ವತಃ ಕ್ರಮ ತೆಗೆದುಕೊಂಡರೆ ಸಂತೋಷ, ಇಲ್ಲದಿದ್ದರೆ ಅವರನ್ನು ಸಾಕ್ಷಿ ಮಾಡಿ ವಿಧಾನಸೌಧದ ಪೊಲೀಸ್ ಠಾಣೆಯಲ್ಲಿ ದೂರು ಕೊಡಬೇಕಾಗುತ್ತದೆ. This is the position of law.

ಶ್ರೀ ಎಂ.ಪಿ. ಪ್ರಕಾಶ್ : ನಾನು 1983ರಿಂದ ವಕೀಲಿ ವೃತ್ತಿ ಮಾಡುವುದನ್ನು ಬಿಟ್ಟಿದಿದ್ದೇನೆ. ಈವತ್ತು ಅವರು ಹೇಳಿರತಕ್ಕ ಮಾತು ನಿಜ. ಯಾವ ಸದಸ್ಯರ ಮೇಲೆ ಆಪಾದನೆ ಮಾಡತಕ್ಕ ಸಂದರ್ಭದಲ್ಲಿ, ನನ್ನ ಮೇಲೆ ಆಪಾದನೆಯಾದಾಗ ಅಧ್ಯಕ್ಷರಿಗೆ ದೂರನ್ನು ಕೊಡಬೇಕು. ಅದಕ್ಕೂ ಪೂರ್ವದಲ್ಲಿ ಯಾರು ಆಪಾದಿರತರಾಗಿದ್ದಾರೆ ಅವರಿಗೂ ತಿಳಿಸಬೇಕು. ಇದಾದಮೇಲೆ ನಮ್ಮ ಒಪ್ಪಿಗೆ ಕೊಡಬೇಕಾದರೆ, It is covered under the privileges. ಇಲ್ಲಿ ಪ್ರಿವಿಲೇಜಸ್‌ನಲ್ಲಿ ಕವರ್ ಆಗುತ್ತದೆ. ಇದೇ ಮಾತನ್ನು ಈ ಸದನದ ಹೊರಗೆ ಹೇಳಿದಾಗ ಅವರಿಗೆ ಸವಾಲು ಹಾಕಬೇಕಾಗುತ್ತದೆ. ಈ ವಿಚಾರದಲ್ಲಿ ಅತ್ಯಂತ ವಿನಯವಾಗಿ ಕೇಳಿಕೊಳ್ಳುವುದೇನೆಂದರೆ ನಮ್ಮ ನಮ್ಮಲ್ಲೇ ಆಪಾದನೆಗಳು ಬಂದಾಗ, ನಾವು ಸಭಾಧ್ಯಕ್ಷರಿಗೆ ಯಾವುದೇ ವಿಚಾರವನ್ನು ಕೊಡದೇ ಯಾರೋ ಮಾಡಿರತಕ್ಕ ಆಪಾದನೆಯ ಬಗ್ಗೆ ನಾವೆಲ್ಲರೂ ಬಹಳ ಸಂತೋಷದಿಂದ ಬೀಗಿ ದೊಡ್ಡದಾಗಿ ಎಲ್ಲಾ ರೀತಿಯ ಹೇಳಿಕೆಯನ್ನು ಕೊಟ್ಟು ಸಿ.ಬಿ.ಐ. ತನಿಖೆಯಾಗುತ್ತದೆ ಎಂದರೆ ಅವರ ಚಾರಿತ್ರೆ ವಧೆಯಾಗುತ್ತದೆ ಎಂದು ಯೋಚನೆ ಮಾಡಬೇಕಾಗುತ್ತದೆ. ನಾನು

ಯಾರದೋ sympathyಗಾಗಿ ಇದನ್ನು ಹೇಳುತ್ತಿಲ್ಲ. ಮನುಷ್ಯನೇ ಸತ್ಯ. Because man is the greatest truth.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಯಾವುದೇ ವ್ಯಕ್ತಿ mercy, sympathyಗೆ ಒಳಗಾಗುವ ಸ್ಥಿತಿ ಬರುವುದಾದರೆ, ಯಾವುದೇ ಸ್ವಾಭಿಮಾನವಿರತಕ್ಕ ಮನುಷ್ಯ Marker, Victor ರೀತಿ ಇರಬೇಕಾಗುತ್ತದೆ. Nobody should get reduced to that condition. Character assassination weaponಅನ್ನು ಬಳಸಬಾರದು. we share your consensus ಈಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸದನದಲ್ಲಿ ಈಗ ನಡೆದಿರತಕ್ಕ ಘಟನೆಗೆ ಸೀಮಿತವಾಗಿ ಅಭಿಪ್ರಾಯವನ್ನು ಕೊಡಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ(ವೇಮಗಲ್) : ಮಾನ್ಯ ಅಧ್ಯಕ್ಷರೆ, ನಾವು ಯಾರೂ ವಿಷಯವನ್ನು ಮಂಡನೆ ಮಾಡಿಲ್ಲ. ಸದನದಲ್ಲಿ ಈಗ ಅವರೇ file ತೆಗೆದುಕೊಂಡು ಕೆಲವೊಂದು ದಾಖಲಾತಿಗಳನ್ನು ತಮ್ಮ ಮುಂದೆ ಪ್ರದರ್ಶಿಸಿದ್ದಾರೆ, ನಮ್ಮೆಲ್ಲರ ಮುಂದೆ ಪ್ರದರ್ಶಿಸಿದ್ದಾರೆ. ಸದಸ್ಯರು ಮಾತನಾಡುವುದನ್ನು ಕುಂಠಿತ ಮಾಡುವುದು ಸರಿಯಲ್ಲ. ನಮ್ಮ ಅಭಿಪ್ರಾಯವೇನು? ಅದರಲ್ಲಿ ಮೂಲಭೂತ ದಾಖಲಾತಿಗಳಿವೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಏನೂ ಇಲ್ಲವೆಂದು ಅವರು ಹೇಳಲಿ. ಅವರು ತೋರಿಸಿದ ಹಾವಭಾವವನ್ನು ನೋಡಿದಾಗ ಅವರಲ್ಲಿ ಏನೋ ಒಂದು ಗಂಭೀರವಾದ ದಾಖಲೆ ಇದೆ ಎಂಬ ಅಭಿಪ್ರಾಯವನ್ನು ಅವರು ಇಡೀ ಸದನಕ್ಕೆ ಕೊಟ್ಟಿದ್ದಾರೆ. ಟಿವಿ ಮುಖಾಂತರ ಅದು ಇಡೀ ರಾಜ್ಯಕ್ಕೆ ಹೋಗುತ್ತದೆ. ಬೇರೆಯವರು ಅವರ ಹಾವಭಾವ ನೋಡಿ ಇನ್ನೊಂದು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು. ಮಾನ್ಯ ವೆಂಕಟೇಶ್‌ರವರೇ ಎದ್ದು ನಿಂತು ತಮ್ಮ ಬಳಿ ಇರುವುದನ್ನು ಈ ಸದನಕ್ಕೆ ಮಂಡನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ತಮ್ಮ ತಮ್ಮ ಅರ್ಥಗಳನ್ನು ಅರ್ಥೈಸಿಕೊಂಡು ರಾಜ್ಯದ ಜನತೆ ಇನ್ನೊಂದು ರೀತಿಯಲ್ಲಿ ಅರ್ಥೈಸಿಕೊಳ್ಳತಕ್ಕದ್ದು ಸರಿಯಲ್ಲ. ಅವರು ತೋರಿಸಿದ್ದು ನೋಡಿದರೆ ನಿಜವಾಗಿಯೂ ಅವರಲ್ಲಿ ದಾಖಲಾತಿ ಇದೆ ಎಂಬ ಅಭಿಪ್ರಾಯ ನಮಗೆಲ್ಲರಿಗೂ ಬಂದಿದೆ. ಅದು ಏನೇ ಇರಲಿ, ಆ ಬಗ್ಗೆ ಅವರು ಹೇಳಬೇಕಾಗುತ್ತದೆ. ಈ ರೀತಿ ಸೃಷ್ಟಿ ಮಾಡಲಿಕ್ಕೆ ಸಾಧ್ಯವಿದೆ ಎಂದು ಅವರು ಸಾಬೀತು ಮಾಡಲಿ. ಇಲ್ಲದಿದ್ದರೆ ಸುಮ್ಮನೆ ನಾವು ಆ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಭ್ರಷ್ಟಾಚಾರದ ವಿಷಯಗಳನ್ನು ನಾವು ಇಷ್ಟು ಹಗುರವಾಗಿ ಪರಿಗಣಿಸಬಾರದು ಎಂಬುದು ನಮ್ಮ

ಅಭಿಪ್ರಾಯ. ಅವರು ಏನು ಬೇಕಾದರೂ ಹೇಳಲಿ. ಇದು ನಿಜ ಎಂದಾದರೂ ಹೇಳಲಿ ಅಥವಾ ಸುಳ್ಳು ಎಂದಾದರೂ ಹೇಳಿದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಅವರು ಅದು ನಿಜ ಎಂದು ಹೇಳಿದರೆ ನಮ್ಮ ನಾಯಕರು ಹೇಳಿದಂತೆ ಅವರು ಯಾವುದೇ ತನಿಖೆಗೂ ಸಿದ್ಧರಾಗಿದ್ದಾರೆ. ನಾವೆಲ್ಲರೂ ಅದಕ್ಕೆ ತಯಾರಾಗಿದ್ದೇವೆ.

ಶ್ರೀ ಹೆಚ್. ಆಂಜನೇಯ : ಬೆಳಗಾವಿಯಲ್ಲಿ ನಡೆಯುತ್ತಿರತಕ್ಕ ವಿಶೇಷ ಅಧಿವೇಶನಕ್ಕೆ ಹಲವಾರು ಅಡ್ಡಿ ಆತಂಕಗಳಾಗುತ್ತಿದೆ. ಯಾವ ಉದ್ದೇಶವನ್ನು ಇಟ್ಟುಕೊಂಡು ಇದರಲ್ಲಿ ಹೇಳಲಿಕ್ಕೆ ಬಂದಿದ್ದಾರೆ........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ವಿಷಯ ಮುಗಿದ ಮೇಲೆ ಬೇಕಾದರೆ ತಾವು ಅದರ ಬಗ್ಗೆ ಮಾತನಾಡಿ. ಆ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಪ್ರಕಾಶ್‌ರವರು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಕ್ಷಮೆ ಕೇಳುತ್ತೇನೆ. ಈ ತರಹ ನಿಮ್ಮ ಮೇಲೆ ಆಪಾದನೆಗಳನ್ನು ಮಾಡುವಂತಹ ಅಗತ್ಯತೆ ಇಲ್ಲ. ನಿಮ್ಮ ಮನಸ್ಸಿಗೆ ನೋವಾಗಿದ್ದರೆ ನಾನು ಅದಕ್ಕೆ ವಿಷಾದಿಸುತ್ತೇನೆ.

(ಅಡಚಣೆ)

SRI MALLIKARJUNA KHARGE : Let him apologize.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಎರಡು ಕಡೆ ವಾದ ಪ್ರತಿವಾದ ನಡೆದಿದೆ. ಮಾನ್ಯ ಸಚಿವರಾದ ಪ್ರಕಾಶ್‌ರವರು ಈ ವಿಷಯದ ಬಗ್ಗೆ ಮಾತನಾಡುತ್ತಾ ಅದನ್ನು ಮುಚ್ಚಿ ಹಾಕುವ, ತೇಪೆ ಹಾಕುವ ಪ್ರಯತ್ನ ಮಾಡಿದ್ದಾರೆ. ಸಹಜವಾಗಿ ಆಳುವ ಪಕ್ಷದ ನೇರವಾಗಿ ಮಾತನಾಡಿದ್ದಾರೆ. ಆದರೆ ಇಲ್ಲಿ ಮನಸ್ಸಿಗೆ ನೋವಾಗಿದೆ ಮತ್ತು ವ್ಯಕ್ತಿತ್ವಕ್ಕೆ ಧಕ್ಕೆಯಾಗಿದೆ. ಈ ಸದನದ custodian ಆದ ತಾವು ಹಿರಿಯರು. ಯಾರಿಗಾದರೂ ಇಲ್ಲಿ ನೋವಾಗಿದ್ದರೆ, ಅಭಿಪ್ರಾಯ ವ್ಯತ್ಯಾಸಗಳಾಗಿದ್ದರೆ ಅದನ್ನು ಇತ್ಯರ್ಥ ಮಾಡುವಂತಹ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ಈಗೇನು ಆರೋಪ ಮಾಡಿದ್ದಾರೆ. ಅದರ ಬಗ್ಗೆ ಬೇಗ ಮುಗಿಸಿ. ಅವರು ಎಲ್ಲಾ ದಾಖಲಾತಿಗಳನ್ನು ತಮಗೆ ಕೊಡಬೇಕು. ದಲಿತ ವರ್ಗದಿಂದ ಬಂದ ಖರ್ಗೆಯವರು ಮತ್ತು ಹಿಂದುಳಿದ ವರ್ಗದಿಂದ ಬಂದ ಧರ್ಮಸಿಂಗ್‌ರವರು ತಾವು ಯಾವುದೇ ತನಿಖೆಗೂ ಸಿದ್ಧ ಎಂದು ಹೇಳಿದ್ದಾರೆ. ಇದು ಬೇಗ ಇತ್ಯರ್ಥವಾಗಬೇಕು. ಇಲ್ಲದಿದ್ದರೆ ಮಾನ್ಯ ವೆಂಕಟೇಶ್‌ರವರು ಈ ಸದನದ ಕ್ಷಮಾಪಣೆ

ಕೇಳಬೇಕು. ಈ ರೀತಿ allegation ಮಾಡಿ, ಸದನದ ಸಮಯವನ್ನು ಹಾಳು ಮಾಡಿ ಯಾರದೋ ವ್ಯಕ್ತಿತ್ವಕ್ಕೆ ಧಕ್ಕೆ ಮಾಡುವಂತಹ ಕೆಲಸವನ್ನು ಸದನದಲ್ಲಿ ಮಾಡಬಾರದು. ಅಧ್ಯಕ್ಷರು ಅದ್ಕಕೆ ಅವಕಾಶ ಮಾಡಿಕೊಡಬಾರದು ಎಂದು ಆಗ್ರಹಿಸುತ್ತೇನೆ. ಇದನ್ನು ಬೇಗನೇ ಇತ್ಯರ್ಥ ಮಾಡಿ. ಇನ್ನೂ ಹಲವಾರು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಉತ್ತರ ಕರ್ನಾಟಕದ ಹಲವಾರು ಸಮಸ್ಯೆಗಳನ್ನು ಕುರಿತು ಇಲ್ಲಿ ಚರ್ಚಿಸಬೇಕಾಗಿದೆ. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ರಾಯಬಾಗ್ ಸಕ್ಕರೆ ಕಾರ್ಖಾನೆ ಸಂಬಂಧ ಕಬ್ಬು ಬೆಳೆಗಾರರು ಧರಣಿ ಕುಳಿತಿದ್ದಾರೆ. ಇಲ್ಲಿಯ ರಸ್ತೆಗಳು ಹಾಳಾಗಿದೆ. ಹೀಗೆ ಚರ್ಚಿಸಬೇಕಾದಂತಹ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಯನ್ನು ಮಾನ್ಯ ವೆಂಕಟೇಶ್‌ರವರು ಉದ್ಭವ ಮಾಡಿದ್ದಾರೆ. ಇದಕ್ಕೆ ಬೇಗ ಇತಿಶ್ರೀ ಹಾಡಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿ ಎರಡು ಹಾದಿ ಬಿಟ್ಟು ಬೇರೆ ಏನೂ ಮಾರ್ಗಗಳಿಲ್ಲ. ನಮ್ಮ ಚಾರಿತ್ರ್ಯವಧೆ ಮಾಡಿರುವಂತಹ allegations ಬಗ್ಗೆ ಅವರ statement ತೆಗೆದುಕೊಂಡು, ನಿಮ್ಮನ್ನು witness ಮಾಡಿ Case Register ಮಾಡಿಸಬೇಕು. ಇಲ್ಲದಿದ್ದರೆ ಅವರು ಆ ಬಗ್ಗೆ apology ಕೇಳಬೇಕು. ನಮ್ಮ ಮೇಲೆ ಇಂತಹ ದೊಡ್ಡ ಆಪಾದನೆ ಇಟ್ಟುಕೊಂಡು ನಾವು ಹೋಗತಕ್ಕದ್ದು ಸರಿಯಲ್ಲ. ಅದಕ್ಕಾಗಿ ಈ ಬಗ್ಗೆ ಯಾವುದಾದರೂ ಒಂದು ನಿರ್ಣಯ ಆಗಲೇಬೇಕು....

(ಅಡಚಣೆ)

ಅಧ್ಯಕ್ಷರು : ಮಾನ್ಯ ವೆಂಕಟೇಶ್‌ರವರು ನನ್ನ ಛೇಂಬರ್‌ಗೆ voluntary ಆಗಿ ಬಂದು ಏನು ದಾಖಲಾತಿಗಳಿವೆಯೋ ಅದನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಓಪನ್ ಆಗಿ ನಮ್ಮ ಮರ್ಯಾದೆ ಹರಾಜು ಹಾಕಿ ಈಗ ನಿಮ್ಮ ಛೇಂಬರ್‌ಗೆ ಬಂದು ದಾಖಲಾತಿ ಕೊಡುವುದೆಂದರೆ ಏನು?

(ಅಡಚಣೆ)

ಅಧ್ಯಕ್ಷರು : ಅವರು ದಾಖಲಾತಿಗಳನ್ನು ನನಗೆ ಕೊಡಲಿ. ಅವುಗಳನ್ನು ನೋಡಿ ನಾನು ಅ ಬಗ್ಗೆ ತೀರ್ಮಾನ ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ : ಸದನದಲ್ಲಿ ಅವರು ಬಹಳ ಗಂಭೀರವಾದ ಆರೋಪವನ್ನು ಮಾಡಿದ್ದಾರೆ. ಆದ್ದರಿಂದ ಅವರು ದಾಖಲೆಗಳನ್ನು ಸದನದಲ್ಲೇ ಕೊಡಬೇಕು. ಈ ಬಗ್ಗೆ ಸದನದಲ್ಲೇ ಇತ್ಯರ್ಥವಾಗಬೇಕು ಇಲ್ಲದಿದ್ದರೆ ಅವರು apology ಕೇಳಬೇಕು. ಇದು ನಿಮ್ಮ ಛೇಂಬರ್‌ನಲ್ಲಿ ಇತ್ಯರ್ಥವಾಗಬೇಕಾದ ವಿಷಯವಲ್ಲ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಅವರು on his own statement ಮಾಡಿದ್ದಾರೆ. ಆದ್ದರಿಂದ ಅವರು ದಾಖಲೆಗಳನ್ನು ಇಲ್ಲಿಯೇ ಕೊಡಬೇಕು.

ಶ್ರೀ ಎಂ.ಪಿ. ವೆಂಕಟೇಶ್ : ನಾನು ಈ ಸದನದಲ್ಲಿ ಯಾವ ವಿಚಾರವನ್ನೂ ಮಾತನಾಡಲೇ ಇಲ್ಲ. ಇವರು ಇಷ್ಟಕ್ಕೆ ಇಷ್ಟು ಗಾಬರಿಯಾದರೆ ನಾನು ವಿಚಾರಗಳನ್ನು ಹೇಳಿದ್ದರೆ ಅವರು ಇನ್ನೆಷ್ಟು ಗಾಬರಿಯಾಗುತ್ತಿದ್ದರು? ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಹಲವಾರು ಆಪಾದನೆಗಳನ್ನು ಮಾಡಿದ್ದಾರೆ, ಆದರೆ ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ. ನಾನೇನು ಇಲ್ಲಿ ಮಾತನಾಡಿದ್ದೇನೆ ಎಂದು ಕಡತ ತರಿಸಿ ನೋಡಿ. ನಾನೇನು ಮಾತನಾಡಿದ್ದೇನೆ ಎಂದು ಇಲ್ಲಿ ಕ್ಷಮೆ ಕೇಳಲಿ...........

(ಅಡಚಣೆ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ವೆಂಕಟೇಶ್‌ರವರು ಮಾತನಾಡಲಿಕ್ಕೆ ಅವಕಾಶ ಕೊಡಿ.

(ಅಡಚಣೆ)

ಅಧ್ಯಕ್ಷರು : ಮಾನ್ಯ ವೆಂಕಟೇಶ್‌ರವರು ಏನು ಹೇಳುತ್ತಾರೋ ಕೇಳಿ.

(ಅಡಚಣೆ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಖರ್ಗೆಯವರ ಮನಸ್ಸಿಗೆ ನೋವಾಗಿದ್ದರೆ, ಆ ಬಗ್ಗೆ ಬಿ.ಆರ್. ಪಾಟೀಲ್‌ರು ಏಕೆ ಮಾತನಾಡುತ್ತಾರೋ ಗೊತ್ತಿಲ್ಲ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ನಾನು ಇಲ್ಲಿ ಏನನ್ನೂ ಮಾತನಾಡಿಯೇ ಇಲ್ಲ. ಯಾವ ವಿಚಾರವನ್ನೂ ಹೇಳಲೇ ಇಲ್ಲ. ನಾನು ಫೋಟೋ ತೋರಿಸಿದ್ದಕ್ಕೆ ಅವರು ಇಷ್ಟು ಗಾಬರಿಯಾದರೆ ನಾನೇನು ಮಾಡಲಿಕ್ಕಾಗುತ್ತದೆ?

ಶ್ರೀ ಎಂ.ಪಿ. ವೆಂಕಟೇಶ್ : ನಿನ್ನೆ ಸದನಕ್ಕೆ ಬಂದಿಲ್ಲ ಈಗ ಬಂದು ಮಾಡುತ್ತಾರೆ.

(ಅಡಚಣೆ)

ಅಧ್ಯಕ್ಷರು : ಮೊದಲು ಮಾನ್ಯ ವೆಂಕಟೇಶ್ ಮಾತನಾಡಲು ಅವಕಾಶ ಮಾಡಿಕೊಡಿ. ಮೊದಲು ಅವರು ಏನೇನು ಹೇಳುತ್ತಾರೋ ಅದನ್ನು ಹೇಳಲಿ.

(ಅಡಚಣೆ)

ಅಧ್ಯಕ್ಷರು : ಮಾನ್ಯ ನರೇಂದ್ರಬಾಬುರವರೆ, ತಾವು ಕುಳಿತುಕೊಳ್ಳಿ, ಮಾನ್ಯ ವೆಂಕಟೇಶ್ ತಾವು ಮಾತನಾಡಿ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮುಂಭಾಗದಲ್ಲಿ ಕುಳಿತಿರುವವರು ನಿಮ್ಮ ಹತ್ತಿರ ದಾಖಲೆ ಇದ್ದರೆ ತೆಗೆದುಕೊಂಡು ಇಲ್ಲಿ ಇಡಿ. ಸ್ಟೇಟ್‌ಮೆಂಟ್ ಮಾಡಿ ಎನ್ನುತ್ತಿದ್ದಾರೆ. ಎಲ್ಲವೂ ಚರ್ಚೆಯಾಗಲಿ ಎನ್ನುತ್ತಿದ್ದಾರೆ. ತಮ್ಮ ಹತ್ತಿರ ದಾಖಲೆಗಳನ್ನು ಕೊಡುತ್ತೇನೆ. ತಾವು ಏನು ಹೇಳುತ್ತೀರೋ ಆ ಪ್ರಕಾರ ನಡೆದುಕೊಳ್ಳುತ್ತೇನೆ. ತಾವು ಹೇಳಿದ್ದನ್ನು ಪರಿಪಾಲನೆ ಮಾಡುತ್ತೇನೆಯೇ ಹೊರತು ಬೇರೆಯವರು ಹೇಳಿದ್ದನ್ನು ಕೇಳುವುದಿಲ್ಲ. ಅಧ್ಯಕ್ಷರೆ, ಈಗಾಗಲೇ ತಾವು ದಾಖಲೆಗಳನ್ನು ನಿಮಗೆ ಕೊಡುವಂತೆ ನನಗೆ ಸದನದಲ್ಲಿ ಹೇಳಿದ್ದೀರಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ದಾಖಲಾತಿಗಳನ್ನು ತೋರಿಸಿ. ಇವೊತ್ತು ಯಾವ ಮಾತುಗಳನ್ನು ವೆಂಕಟೇಶ್ ರವರು ಹೇಳಿದ್ದಾರೆ ಆ ಪ್ರಕಾರ ನಡೆದುಕೊಂಡು ಅವರು ಮಾಡಿರುವ ಆರೋಪಗಳಿಗೆ ಏನೇನು ಚಿತ್ರಗಳಿವೆಯೋ ಅದನ್ನು ಸದನದಲ್ಲಿ ತೋರಿಸಲಿ. ಇವೊತ್ತು ಅದರ ಬಗ್ಗೆ ಚರ್ಚೆ ಆಗಬೇಕು. ಅಧ್ಯಕ್ಷರೆ, ತಾವು ಕೂಡ ನಿರ್ಣಯ ತೆಗೆದುಕೊಳ್ಳಬೇಕು. ಅದೇನು ರಹಸ್ಯವಿದೆಯೋ ಅದು ಬರಲಿ, ಒಂದು ರೀತಿಯಾಗಿ ಈ ರೀತಿ ಬ್ಲ್ಯಾಕ್‌ಮೇಲ್ ಮಾಡುವ ತಂತ್ರ, ಈ ರೀತಿ ಬ್ಲ್ಯಾಕ್‌ಮೇಲ್ ಮಾಡತಕ್ಕಂಥ ರೀತಿಯಲ್ಲಿ ಆರೋಪ ಮಾಡಿರುವಂತೆಯೇ ಈ ಸದನವನ್ನು ಮುಂದುವರೆಸುವುದಕ್ಕೆ ಸಾಧ್ಯವಿಲ್ಲ. ಆರೋಪ ಮಾಡಿರುವುದಕ್ಕೆ ದಾಖಲಾತಿಗಳು ಇದ್ದರೆ ಅದನ್ನು ಹೇಳಿ ತೋರಿಸಲಿ. ಆ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕು. ಇದರ ಬಗ್ಗೆ ತೀರ್ಮಾನ ಆಗಲೇಬೇಕು. ಅಲ್ಲಿಯವರೆಗೂ ನಾವು ಧರಣಿ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಅಧ್ಯಕ್ಷರು : ಮಾನ್ಯ ಸಮಾಜ ಕಲ್ಯಾಣ ಸಚಿವರು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಭೋಜನವನ್ನು ಏರ್ಪಾಡು ಮಾಡಿದ್ದಾರೆ. ಆದಕಾರಣ ಎಲ್ಲರೂ ಭೋಜನ ಕೂಟದಲ್ಲಿ ಭಾಗವಹಿಸಬೇಕೆಂದು ಹೇಳುತ್ತಾ ಈಗ ಸದನವನ್ನು ಮಧ್ಯಾಹ್ನ 3.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.23ಕ್ಕೆ ಮುಂದೂಡಿಲ್ಪಟ್ಟು ಮತ್ತೆ ಮಧ್ಯಾಹ್ನ 3.30 ಕ್ಕೆ ಪುನರ್ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು).

(ಸದನವು ಪುನಃ ಸಾಯಂಕಾಲ 4.03 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

7(ಎ) **ವಿಷಯ:** ಮಾನ್ಯ ಶ್ರೀ ವೆಂಕಟೇಶ್‌ರವರು ಮಾಡಿರುವ ಅಪಾದನೆ ಬಗ್ಗೆ ಚರ್ಚೆ ಮುಂದುವರಿದುದು

(ಕಾಂಗ್ರೆಸ್‌ನ ಕೆಲವು ಸದಸ್ಯರು ಸದನದ ಬಾವಿಯಲ್ಲಿದ್ದರು)

ಅಧ್ಯಕ್ಷರು: ಈಗ ಸದಸ್ಯರು ದಯಮಾಡಿ ಅವರವರ ಸ್ಥಾನಗಳಿಗೆ ಹೋಗಿ.

(ಅಡಚಣೆ)

ಅಧ್ಯಕ್ಷರು: ಮಾನ್ಯ ವೆಂಕಟೇಶ್‌ರವರು ಇದ್ದಾರೆಯೇ?

(ಅಡಚಣೆ)

ಅಧ್ಯಕ್ಷರು: ಈಗ ಮಾನ್ಯ ವೆಂಕಟೇಶ್‌ರವರನ್ನು ಮಾತನಾಡುವುದಕ್ಕೆ ಕರೆಯುತ್ತೇನೆ. ಅವರು ಮಾತನಾಡುತ್ತಾರೆ. ನಿಮ್ಮ ಸೀಟ್‌ಗಳಿಗೆ ಹೋಗಿ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು: ಪ್ರತಿ ಜಿಲ್ಲೆಯಿಂದ ಶಾಸಕರು ಬಂದಿದ್ದಾರೆ. ಅವರೂ ಸ್ವಲ್ಪ ಅವರವರ ಜಿಲ್ಲೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಅಡಚಣೆ)

ಅಧ್ಯಕ್ಷರು: ಈಗ ದಯಮಾಡಿ, ನೀವೆಲ್ಲಾ ನಿಮ್ಮ ಆಸನಗಳಿಗೆ ಹೋಗಬೇಕು. ನಾನೀಗ ಮಾನ್ಯ ವೆಂಕಟೇಶ್‌ರವರನ್ನು ಮಾತನಾಡುವುದಕ್ಕೆ ಹೇಳಿದ್ದೇನೆ. ಅವರು ಮಾತನಾಡುತ್ತಾರೆ. ಆನಂತರ, ಏನಾದರೂ ಕೇಳಿ, ದಯಮಾಡಿ, ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಅಡಚಣೆ)

ಅಧ್ಯಕ್ಷರು: ನಿಮ್ಮ ಆಸನಗಳಿಗೆ ಹೋಗಿ, ಅದು ಹೇಗೆ? ಇದು ಹೇಗೆ ಎಂದು ಪ್ರಶ್ನೆ ಮಾಡುತ್ತಾ ಕುಳಿತುಕೊಂಡರೆ ಪರಿಹಾರ ಆಗುತ್ತದೆಯೇನು? ಅವರು ಏನು ಯುಕ್ತವಾದ statement ಮಾಡಬೇಕು, ಅದನ್ನು ಮಾಡಬೇಕಾಗುತ್ತದೆಂದು ಹೇಳಿದ್ದೇನೆ. ಅದು ಹೇಳಿಕೆ ಆಯಿತು. ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರ್, ತಾವು ನಮಗಾದರೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಈಗ ನೀವು ವೆಂಕಟೇಶ್‌ರವರನ್ನು ಇಲ್ಲ ಇದಕ್ಕೆ stand ಆಗುತ್ತಾರೆಯೇ? ಅವರು ಕೊಟ್ಟಿರುವ ದಾಖಲೆಯನ್ನು ತಮಗೆ ಕೊಟ್ಟು ಅದರ ಮೇಲೆ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳಬೇಕು.

ಅಧ್ಯಕ್ಷರು: ಅದನ್ನೇ ಈಗ ಅವರಿಗೆ ಹೇಳಿದ್ದೇನೆ. ಈಗ ಮಾತನಾಡುವುದಕ್ಕೆ ಕರೆಯುತ್ತೇನೆ. ಅವರು ಮಾತನಾಡಿದ ಮೇಲೆ ಏನಾದರೂ ಇದ್ದರೆ ನೀವು ಹೇಳುವಿರಂತೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಅಲ್ಲಗಳೆದಿಲ್ಲ. ಅವರು ಕ್ಷಮಾಪಣೆ ಕೇಳಲಿಕ್ಕೆ ರಾಜೀಯಾಗಿಲ್ಲ. Ask him to stand by his leg. ಅವರು ಹೇಳಲಿ. ಅವರು ತಮ್ಮ ಮಾತನ್ನು ಸಮರ್ಥನೆ ಮಾಡಿಕೊಳ್ಳಲಿಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್: ಈಗ ತಮ್ಮಲ್ಲಿ ಒಂದು ಕಳಕಳಿಯ ಮನವಿ ಎಂದರೆ, ಈಗ ನಡೆಯಬೇಕಾದಂಥ ಸಭೆ ಏನೆಂದರೆ, ಮೊದಲು ವೆಂಕಟೇಶ್‌ರವರದ್ದು ಏನು ಅನ್ನುವುದನ್ನು ತಾವು ಕೇಳಿಬಿಡಿ. ಅವರು ಅವರ ಮಾತಿಗೆ ನಿಲ್ಲುತ್ತಾರೆಯೇ? ಏನೆಂದು ತೀರ್ಮಾನವಾಗಲಿ.

ಅಧ್ಯಕ್ಷರು: ಈಗ ನೀವು ನಿಮ್ಮ ಆಸನಗಳಿಗೆ ಹೋಗಿ. ನಾನು ಅವರನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅವರು ಹೇಳಲಿ.

ಅಧ್ಯಕ್ಷರು: ಇವರು ಇಲ್ಲಿ ನಿಂತುಕೊಂಡು ಹೇಳಲಿ ಎಂದರೆ ಹೇಗೆ? ಅವಕಾಶ ಕೊಡುತ್ತೇನೆ. ನಿಮ್ಮ ನಿಮ್ಮ ಆಸನಗಳಿಗೆ ಹೋಗಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ವೆಂಕಟೇಶ್‌ರವರು ಏನಾದರೂ ಹೇಳಬೇಕು. ಸುಮ್ಮನೆ ಕುಳಿತಿದ್ದರೆ ಹೇಗೆ?

ಅಧ್ಯಕ್ಷರು: ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವೆಂಕಟೇಶ್‌ರವರೆ, ತಾವು ಈ ಸದನದಲ್ಲಿ ಹೇಳಬೇಕು.

ಅಧ್ಯಕ್ಷರು: ಅವರು ಹೇಳುತ್ತಾರೆ. ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಅವರನ್ನು ಹೊರಗಡೆ ಹೋಗಿ ಎಂದರೆ ಅವರು ಹೋಗುವುದಿಲ್ಲ. ಅವರೇನು ಹೇಳುತ್ತಾರೆ ಹೇಳಲಿ. ಅದಕ್ಕೆ ಅವಕಾಶ ಕೊಡಿ. ಅವರು ಮೊದಲು ಮಾತನಾಡಲಿ.

(ಅಡಚಣೆ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ದಯವಿಟ್ಟು, ನೀವು ಈ ಕಡೆ ಗಮಗ ಕೊಡಿ. ಅವರಿಗೆ ಮಾತನಾಡಲಿಕ್ಕೆ ಹೇಳಿ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ಅವರು ಧರಣಿಯಲ್ಲಿದ್ದಾಗ ಸದನ orderನಲ್ಲಿರುವುದಿಲ್ಲ. ಹಾಗಾಗಿ, ಅವರೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹೋಗಲಿ.

(ಅಡಚಣೆ)

ಅಧ್ಯಕ್ಷರು: ಅವರು ಮಾತನಾಡುತ್ತಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವು ವೆಂಕಟೇಶ್‌ರವರಿಗೆ ಮಾತನಾಡಲಿಕ್ಕೆ ಹೇಳಿ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ಎಲ್ಲರೂ ಅವರವರ ಸ್ಥಾನಕ್ಕೆ ಕುಳಿತುಕೊಳ್ಳಲಿ. ನಾನು ಎಲ್ಲ ವಿಚಾರವನ್ನೂ ಹೇಳುತ್ತೇನೆ.

(ಅಡಚಣೆ)

ಅಧ್ಯಕ್ಷರು: ಇಲ್ಲಿ ಕೇಳಿ. ಬಾವಿಗೆ ಬಂದಿರುವ ಸದಸ್ಯರಿಗೆ ನಾನು ಒಂದೇ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಈ ತರಹ ಮಾಡುವುದು ಸರಿಯಲ್ಲ. ದಯಮಾಡಿ, ನಿಮ್ಮ ಆಸನಗಳಿಗೆ ಹೋಗಿ. Let him stand if he has got any documents. ಇಲ್ಲದಿದ್ದರೆ, let him apoligize. ಆದ್ದರಿಂದ, ನೀವೆಲ್ಲಾ ನಿಮ್ಮ ಜಾಗಗಳಿಗೆ ಹೋಗಿ. ಇದನ್ನು ಮುಗಿಸೋಣ. Either this way or that way. ಏನು ಹೇಳುತ್ತಾರೆ, ಕೇಳೋಣ. ನಾನು ಅವರಿಗೆ ಹೇಳಿದ್ದೇನೆ. ದಯಮಾಡಿ, ನಿಮ್ಮ ಆಸನಗಳಿಗೆ ಹೋಗಿ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ದಯವಿಟ್ಟು, ಅವರು ಹೊರಗೆ ಬರಲಿ, ಬಾವಿಗೆ ಬಿದ್ದು ಒದ್ದಾಡುವುದು ಒಳ್ಳೆಯದಲ್ಲ. ಬಹಳ ಹಿರಿಯರೆಲ್ಲಾ ಇದ್ದಾರೆ.

(ಅಡಚಣೆ)

ಅಧ್ಯಕ್ಷರು: ನಾನು ಹೇಳುತ್ತೇನೆ. ನನ್ನ ಜೊತೆ ಏನು ಹೇಳಿದ್ದಾರೆ, ಅದೆಲ್ಲಾ ಹೇಳಿದರೆ ಪ್ರಯೋಜನವಿಲ್ಲ. ಅವರು ಹೇಳುತ್ತಾರೆ. ದಯಮಾಡಿ, ನೀವು ನಿಮ್ಮ ಆಸನಗಳಿಗೆ ಹೋಗಿ.

(ಅಡಚಣೆ)

ಅಧ್ಯಕ್ಷರು: ನನಗೆ ತೋರಿಸಿದ್ದಾರೆ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ಇವರು ಹೊರಗೆ ಬಂದ ಮೇಲೆ ಮಾನ್ಯ ವೆಂಕಟೇಶ್‌ರವರು ಮಾತನಾಡುತ್ತಾರೆ. ಅದು close ಆಗುತ್ತದೆ. ಒಂದು ಒಳ್ಳೆಯ debate ಆಗಲಿ.

ಅಧ್ಯಕ್ಷರು: ಈಗ ಅವರು ಮಾತನಾಡುತ್ತಾರೆ.

(ಅಡಚಣೆ)

ಅಧ್ಯಕ್ಷರು: ಸಮಾಧಾನಕರವಾಗಿ ತೀರ್ಮಾನವಾಗಬೇಕು. ನೀವು ನಿಮ್ಮ ನಿಮ್ಮ ಆಸನಗಳಿಗೆ ಹೋದರೆ, ಅವರು statement ಮಾಡುತ್ತಾರೆ.

(ಅಡಚಣೆ)

ಅಧ್ಯಕ್ಷರು: ನೀವು ಹೋಗಿ. ಈಗ ನಾನು ಅವರನ್ನು ಕರೆದಿದ್ದೇನೆ. ಅವರು statement ಮಾಡುತ್ತಾರೆ. ನೀವು ಹೋಗಿ ಎಂದರೆ, ನೀವೂ ಅಡ್ಡಿ ಮಾಡುತ್ತಿದ್ದೀರಲ್ಲಾ. ನೀವು ನಿಮ್ಮ ಆಸನಗಳಿಗೆ ಹೋಗಬೇಕು. Apoligise

ಮಾಡಿಕೊಳ್ಳಬೇಕು ಅಥವಾ he should stand by his statement. ಆದ್ದರಿಂದ, ಅವರು ಮಾಡುತ್ತಾರೆ. ನೀವು ಹೋಗಿ.

(ಅಡಚಣೆ)

ಅಧ್ಯಕ್ಷರು: ಅವರು ಹೇಳುತ್ತಾರೆ ನೀವು ನಿಮ್ಮ ನಿಮ್ಮ ಆಸನಗಳಿಗೆ ಹೋಗಿ.

ಶ್ರೀ ಆರಗ ಜ್ಞಾನೇಂದ್ರ: ಅವರೆಲ್ಲರೂ ಬಾವಿಯಲ್ಲಿದ್ದರೆ ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರನ್ನು ಹೊರಗಡೆ ಹೋಗಿ ಎಂದರೆ ಹೋಗುವುದಿಲ್ಲ, ಆದುದರಿಂದ ಅವರೇನು ಹೇಳುತ್ತಾರೆ ಹೇಳಲಿ, ಅದಕ್ಕೆ ಅವಕಾಶ ಕೊಡಿ.

ಶ್ರೀ ಬಿ.ಸಿ. ಪಾಟೀಲ್: ಹೌಸ್ ಆರ್ಡರ್‌ನಲ್ಲಿ ಇಲ್ಲ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದಯವಿಟ್ಟು ನೀವು ಈ ಕಡೆ ಗಮನ ಕೊಡಲಿಕ್ಕೆ ಹೇಳಿ ಅವರಿಗೆ ಮಾತನಾಡಲಿಕ್ಕೆ ಹೇಳಿ.

ಶ್ರೀ ಆರಗ ಜ್ಞಾನೇಂದ್ರ: ಅವರು ಧರಣಿಯಲ್ಲಿ ಇದ್ದಾಗ ಸಭೆ ಆರ್ಡರ್‌ನಲ್ಲಿ ಇರುವುದಿಲ್ಲ. ಹಾಗಾಗಿ ಅವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವೆಂಕಟೇಶ್‌ರವರು ನಿಂತಿದ್ದಾರೆ ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಂ.ವಿ. ವೆಂಟಕೇಶ್: ಎಲ್ಲರೂ ಅವರವರ ಸ್ಥಾನಗಳಿಗೆ ಹೋಗಲಿ ನಾನು ಎಲ್ಲಾ ವಿಚಾರವನ್ನು ಹೇಳುತ್ತೇನೆ. ದಯಮಾಡಿ ಎಲ್ಲರೂ ಅವರವರ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

ಅಧ್ಯಕ್ಷರು: ಈಗ ಎಲ್ಲರೂ ಇಲ್ಲಿ ಕೇಳಿ, ಬಾವಿಯಲ್ಲಿ ಬಂದಂಥ ಸದಸ್ಯರಿಗೆ ನಾನು ಒಂದೇ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಈ ತರಹ ಮಾಡುವುದು ಸರಿಯಿಲ್ಲ, ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ, ಅವರು ಏನೆಂದರೆ, let him stand if he has got any documents. ಇಲ್ಲದಿದ್ದರೆ let him apoligise. ಅದ್ದರಿಂದ ನೀವು ತಮ್ಮ ಜಾಗಕ್ಕೆ ಹೋಗಿ ಅದನ್ನು ಮುಗಿಸೋಣ, either this way or that way. ಅವರು ಏನು ಹೇಳುತ್ತಾರೆ ಕೇಳೋಣ. ದಯಮಾಡಿ ನೀವು ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಆರಗ ಜ್ಞಾನೇಂದ್ರ: ನೀವು ಹೇಳಿದ್ದು ಒಳ್ಳೆಯ ಸಲಹೆ. ದಯವಿಟ್ಟು ಅವರೆಲ್ಲ ಬಾವಿಯಿಂದ ಹೊರಗಡೆ ಬರಲಿ. ಇವರು ಬಾವಿಯಲ್ಲಿ ಬಿದ್ದು ಒದ್ದಾಡುವುದು ಒಳ್ಳೆಯದಲ್ಲ. ಬಹಳ ಹಿರಿಯರೆಲ್ಲಾ ಇದ್ದಾರೆ.

(ಅಡಚಣೆ)

ಅಧ್ಯಕ್ಷರು: ಅವರು ಹೇಳಿದ ಮೇಲೆ ನಾನು ಹೇಳುತ್ತೇನೆ. ಅವರು ನನ್ನ ಜೊತೆಯಲ್ಲಿ ಏನು ಹೇಳಿದ್ದಾರೆ ಅದನ್ನು ಹೇಳಿದರೆ ಪ್ರಯೋಜನವಿಲ್ಲ. ಅವರು ಹೇಳುತ್ತಾರೆ. ನೀವು ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ. ಅವರು ನನಗೆ ತೋರಿಸಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಇವರು ಬಾವಿಯಿಂದ ಹೊರಗೆ ಬಂದ ಮೇಲೆ ಮಾನ್ಯ ವೆಂಕಟೇಶ್‌ರವರು ಮಾತನಾಡುತ್ತಾರೆ. ಆ ವಿಚಾರ ಅಲ್ಲಿಗೆ close ಆಗುತ್ತದೆ. ಒಂದು ಒಳ್ಳೆಯ debate ಆಗಲಿ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಲಿ.

(ಅಡಚಣೆ)

ನಾಳೆ ಇಲ್ಲಿ ಅಧಿವೇಶನ ಮಾಡಿದ ಪರಿಣಾಮ ಏನು ಎಂದು ಜನ ಕೇಳುತ್ತಾರೆ. ನೀವು ಏನು ಹೇಳುತ್ತೀರಿ?

ಅಧ್ಯಕ್ಷರು: ಇದು ಸಮಾಧಾನಕರವಾಗಿ ತೀರ್ಮಾನವಾಗಬೇಕು. ನೀವು ನಿಮ್ಮ ನಿಮ್ಮ ಆಸನಕ್ಕೆ ಹೋದರೆ ಅವರು ತಮ್ಮ statement ಮಾಡುತ್ತಾರೆ.

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್: ಈ ಭಾಗದ ಸಮಸ್ಯೆ ಬಗ್ಗೆ ಈ ಭಾಗದ ಸದಸ್ಯರು ಮಾತನಾಡಲು ಇಚ್ಚಿಸಿರುತ್ತಾರೆ. ದಯಮಾಡಿ ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ನಾನು ಅವರನ್ನು ಈಗ ಕರೆದಿದ್ದೇನೆ. ಅವರು statement ಮಾಡುತ್ತಾರೆ. ನೀವು ನಿಮ್ಮ ಸ್ಥಾನಗಳಿಗೆ ಹೋಗಿ ಎಂದರೆ ನೀವೂ ಅಡ್ಡಿ ಮಾಡುತ್ತಿದ್ದೀರಲ್ಲಾ. ನೀವು ನಿಮ್ಮ ಸ್ಥಾನಗಳಿಗೆ ಹೋಗಬೇಕು. ಅವರು ಅಪ್ರೈಸ್ ಮಾಡಿಕೊಳ್ಳಬೇಕು ಅಥವಾ he should stand by his statement. ಆದ್ದರಿಂದ ಅವರು statement ಮಾಡುತ್ತಾರೆ. ನೀವು ನಿಮ್ಮ ಸ್ಥಾನಕ್ಕೆ ಹೋಗಿ.

(ಅಡಚಣೆ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಈಗ ಅವರ ಕಡೆಯಿಂದ ಹೇಳಿಕೆ ಮಾಡಿಸಿಬಿಡಿ.

ಶ್ರೀ ರಾಜೇಂದ್ರವರ್ಮ: ಈ ರೀತಿ ಮಾಡುವುದನ್ನು ನೋಡಿದರೆ ಉತ್ತರ ಕರ್ನಾಟಕದ ಬಗ್ಗೆ ಅವರಿಗೆ ಆಸಕ್ತಿ ಇಲ್ಲವೆಂದು ಕಾಣಿಸುತ್ತದೆ. ಹೀಗಾಗಿ ಇವರು ಧರಣಿ ಮಾಡುತ್ತಿದ್ದಾರೆ.

(ಅಡಚಣೆ)

ದಯಮಾಡಿ ವಿರೋಧ ಪಕ್ಷದ ಶಾಸಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೆ, ಮಾನ್ಯ ವೆಂಕಟೇಶ್‌ರವರು ಮಾತನಾಡಲು ready ಇದ್ದಾರೆ. ಹಾಗೆಯೇ ಮಾತನಾಡಲಿ ಬಿಡಿ.

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್: ಸಭೆ orderನಲ್ಲಿಲ್ಲ. ಅವರು ಹೇಗೆ ಮಾತನಾಡುತ್ತಾರೆ?

(ಅಡಚಣೆ)

ಅಧ್ಯಕ್ಷರು: ನಿಮಗೆ ಎಷ್ಟು ಹೇಳಿದರೂ ನಮ್ಮದೇ ಸರಿ. ನಾವು ಹಿಡಿದ ಮೊಲಕ್ಕೆ ಮೂರು ಕಾಲು ಎನ್ನುವ ಹಾಗೆ ನಡೆದುಕೊಳ್ಳುವುದು ಸರಿಯಿಲ್ಲ. ನಾನು ವೆಂಟಕೇಶ್‌ರವರನ್ನು ಕರೆದಿದ್ದೇನೆ. ಅವರು statement ಮಾಡುತ್ತಾರೆ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅವರು apologize ಮಾಡುತ್ತಾರೆ. ಇಲ್ಲದಿದ್ದರೆ ಅವರು documents ಇದ್ದರೆ ತೋರಿಸುತ್ತಾರೆ. ನೀವು ಸುಮ್ಮನೆ ನಿಮ್ಮ ಸ್ಥಾನಗಳಿಗೆ ಹೋಗಿ ಎಂದರೆ ಹೀಗೆ ಹಠ ಮಾಡುತ್ತಿದ್ದರೆ ಹೇಗೆ?

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್: ಅವರಿಗೆ ಅವಕಾಶ ಕೊಟ್ಟರೆ, ಅವರು ಏನು ಹೇಳುತ್ತಾರೆ ಎಂಬುದು ಗೊತ್ತಾಗುತ್ತದೆ. ಇಲ್ಲದಿದ್ದರೆ ಹೇಗೆ ಗೊತ್ತಾಗುತ್ತದೆ?

ಅಧ್ಯಕ್ಷರು: ಈಗ ನೀವೆಲ್ಲರೂ ಇಲ್ಲಿಯೇ ಇರಬೇಕು ಎನ್ನುವುದಾದರೆ, ಇಲ್ಲಿ ಇರಿ. ನನ್ನದೇನೂ ಅಡ್ಡಿ ಇಲ್ಲ. ನನ್ನದೇನೆಂದರೆ ಸಲೀಸಾಗಿ ಕಲಾಪ ನಡೆಯಬೇಕು. ಅದಕ್ಕೆ ಅವರು ಮೊದಲು statement ಮಾಡಲಿ. ನಿಮ್ಮ ಆಸನಗಳಿಗೆ ಹೋಗಿ ಎಂದರೆ ನೀವು ready ಇಲ್ಲವಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, Houseನಲ್ಲಿ ನಾವು ಶಾಂತ ರೀತಿಯಿಂದ ನಿಂತುಕೊಳ್ಳುತ್ತೇವೆ ಅಥವಾ ಕುಳಿತುಕೊಳ್ಳುತ್ತೇವೆ. ನಾವು ನಿಮಗೆ ಏನೂ ತೊಂದರೆ ಮಾಡುವುದಿಲ್ಲ. ನಿಮಗೆ ಗೊತ್ತಿದ್ದ ಹಾಗೆ Houseನಲ್ಲಿ ಧರಣಿ ಮಾಡತಕ್ಕಂಥ ಎಷ್ಟೋ ಸಂದರ್ಭದಲ್ಲಿ budget pass ಆಗಿದೆ, Bills pass ಆಗಿವೆ. ಅವರೂ statements ಕೊಡುತ್ತಾರೆ. ಅದಕ್ಕೆ ಅವರು ಏನು statement ಮಾಡುತ್ತಾರೋ ಮಾಡಲಿ. ನಾವು ಒಂದು ಚಕಾರ ಶಬ್ದವನ್ನೂ ಎತ್ತುವುದಿಲ್ಲ, ಗಲಾಟೆಯನ್ನೂ ಮಾಡುವುದಿಲ್ಲ, ಹೀಗೆಯೇ ನಿಂತಿರುತ್ತೇವೆ, ಇಲ್ಲ ಕುಳಿತಿರುತ್ತೇವೆ. ದಯವಿಟ್ಟು ಅವರಿಗೆ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಆನಂತರ ಮುಂದೇನು ಮಾತನಾಡಬೇಕೆಂಬುದನ್ನು ನೋಡೋಣ.

ಅಧ್ಯಕ್ಷರು: ಈಗ ತಾವು ತಮ್ಮ ಆಸನಗಳಿಗೆ ಹೋದರೆ ಏನಾಗುತ್ತದೆ ಸ್ವಾಮಿ? ನಿಮ್ಮ ಆಸನಗಳಿಗೆ ನೀವು ಹೋಗಿ ಅವರು statement ಮಾಡುತ್ತಾರೆ. ನಿಮ್ಮ ಆಸನಗಳಿಗೆ ಹೋಗಲಿಕ್ಕೆ ಏನು ತೊಂದರೆ ಆಗುತ್ತದೆ?

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರು ಮಾತನಾಡಲಿ. ನಾವು ಶಾಂತರೀತಿಯಿಂದ ಕೇಳುತ್ತೇವೆ. ನಾವೇನಾದರೂ ಗಲಾಟೆ ಮಾಡಿದರೆ ತಾವು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನೀವು ಏಕೆ ಹಠ ಹಿಡಿಯುತ್ತೀರಿ? ಅವರನ್ನು ಮಾತನಾಡಲಿಕ್ಕೆ ಬಿಡಿ. ನೀವು ಏಕೆ ಹಠ ಮಾಡುತ್ತೀರಿ? ಅವರನ್ನು ಮಾತನಾಡಲಿಕ್ಕೆ ಹೇಳಿ. ಇವರು ಸುಮ್ಮನೆ ಇರುತ್ತಾರೆ.

ಶ್ರೀ ಹೆಚ್. ನಿಂಗಪ್ಪ: ಮಾನ್ಯ ಅಧ್ಯಕ್ಷರೆ, ಸದಸ್ಯರು ಬಾವಿಯಲ್ಲಿದ್ದರೆ ಸದನ ಆರ್ಡರ್‌ನಲ್ಲಿ ಇರುವುದಿಲ್ಲ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರು ಮಾತನಾಡುತ್ತಾರೆ ನೀವು ಹೇಳಿ.

ಅಧ್ಯಕ್ಷರು: ಮಾತನಾಡುತ್ತಾರೆ ಅಂತ ಅಲ್ಲ. ಎಲ್ಲರೂ ಇಲ್ಲಿ ನಿಂತುಕೊಳ್ಳುವ ಅಗತ್ಯತೆ ಏನು? ಹೇಗಿದ್ದರೂ ಅವರು ಮಾತನಾಡುತ್ತಾರೆ.

MR. SPEAKER: I cannot understand. ಇಲ್ಲಿ ನೀವು ಏಕೆ ನಿಂತುಕೊಳ್ಳಬೇಕು? ಅವರು ಮಾತನಾಡದಿದ್ದರೆ ನೀವು ನಿಂತುಕೊಳ್ಳಬೇಕು, ಸುಮ್ಮನೆ ನೀವು ಇಲ್ಲಿ ಏಕೆ ನಿಂತುಕೊಳ್ಳಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಷ್ಟೋ ಸಲ ನಾವು ಧರಣಿ ಕುಳಿತಿರುವಾಗ ಬಿಲ್‌ಗಳನ್ನು ಪಾಸ್ ಮಾಡಿಲ್ಲವೆ?

(ಅಡಚಣೆ)

ಅಧ್ಯಕ್ಷರು: ಅದು ಸರಿ, ನೀವು ಎಲ್ಲಾ ನಿಮ್ಮ ನಿಮ್ಮ ಆಸನಗಳಿಗೆ ಹೋದರೆ ಏನಾಗುತ್ತದೆ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಾವಿಯಲ್ಲಿ ಇದ್ದಂಥ ಸಮಯದಲ್ಲಿ ಎಷ್ಟು ಸಲ ಬಿಲ್‌ಗಳನ್ನು ಪಾಸ್ ಮಾಡಿಲ್ಲ?

ಶ್ರೀ ಆರಗ ಜ್ಞಾನೇಂದ್ರ: ಅವರು ಬರಲಿ ಪ್ರತಿಷ್ಠೆ ಮಾಡಿಕೊಂಡರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲರೂ ಪ್ರತಿಷ್ಠೆ ಮಾಡಿಕೊಂಡರೆ ಸದನ ಹೇಗೆ ನಡೆಯುವುದು? ಅವರು ಪ್ರತಿಷ್ಠೆ ಮಾಡುತ್ತಾರೆ, ನೀವು ಪ್ರತಿಷ್ಠೆ ಮಾಡುತ್ತೀರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಉತ್ತರ ಕರ್ನಾಟಕದ ಹಾಗೂ ಬರ ಪರಿಹಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. (ಅಡಚಣೆ) ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆದಾಗ ಇಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು. ಅದನ್ನು ಬಿಟ್ಟು ಯಾವುದೋ ವಿಷಯ ತಂದು ಇಲ್ಲಿ ಹಾಕಿ ಟೈಂ ಹಾಳು ಮಾಡುತ್ತಿದ್ದಾರೆ. ಒಣ ಪ್ರತಿಷ್ಠೆ ಬಿಟ್ಟು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್: ತಾವು ಇದನ್ನು ಪ್ರತಿಷ್ಠೆ ಪ್ರಶ್ನೆ ಮಾಡಿಕೊಳ್ಳಬೇಡಿ.

ಅಧ್ಯಕ್ಷರು: ಪ್ರತಿಷ್ಠೆ ಮಾಡಿಕೊಳ್ಳಬಾರದು. ನೀವು ಏನೆಂದರೆ, ಬೇಕಾದಾಗ ಒಂದು ತರಹ ಮಾತನಾಡುತ್ತೀರಿ, ಬೇಡವಾದಾಗ ಇನ್ನೊಂದು ತರಹ ಮಾತನಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ಈ ರೀತಿ ಎಷ್ಟು ಸಾರಿ ನಡೆದಿಲ್ಲ? ಧರಣಿ ನಡೆದಾಗ ಎಷ್ಟು ಸಾರಿ ನೀವು ಮಸೂದೆಗಳನ್ನು ಪಾಸ್ ಮಾಡಿ ಹೊರಗಡೆ ಹೋಗಿಲ್ಲವೆ?

ಅಧ್ಯಕ್ಷರು: ಈ ರೀತಿ ಆದರೆ ಹೌಸ್ ನಡೆಸುವುದು ಕಷ್ಟ.

ಶ್ರೀ ವಾಟಾಳ್ ನಾಗರಾಜ್: ಈ ಸದನ ಶಾಂತ ರೀತಿಯಲ್ಲಿ ನಡೆಯಬೇಕು ಎನ್ನುವ ಇಚ್ಛೆ ಇದ್ದರೆ ದಯಮಾಡಿ ಅವರಿಗೆ ಹೇಳಿಕೆ ಕೊಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ವಾಟಾಳ್‌ರವರೆ, ನೀವು ನನಗೆ ಹೇಳುವ ಬದಲು. ಇವರಿಗೆ ಹೇಳಿ, ಏನಾಗಿದೆ ಎಲ್ಲಾ ಪ್ರತಿಷ್ಠೆ ಮಾಡಿಕೊಂಡರೆ, ಸದನ ನಡೆಸುವುದು ಹೇಗೆ? ಪ್ರತಿಯೊಬ್ಬರದ್ದೂ ಪ್ರತಿಷ್ಠೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲರದ್ದೂ ಪ್ರತಿಷ್ಠೆ ಮಾಡುತ್ತಿದ್ದಾರೆ, ಒಬ್ಬರೇನಲ್ಲ,

ಅಧ್ಯಕ್ಷರು: ನಿಮ್ಮ ನಿಮ್ಮ ಆಸನಗಳಿಗೆ ಹೋಗಿ ಅವರು ಹೇಳಿಕೆ ಮಾಡುತ್ತಾರೆಂದರೆ ಅದಕ್ಕೆ ಕೇಳದಿದ್ದರೆ ನಾವು ಏನು ಮಾಡುವುದು? ಹೀಗೆ ಆಗಬೇಕು ಹೀಗೆ ಮಾಡಿ ಎಂದರೆ ಇದಕ್ಕೆ ಏನು ಅರ್ಥ ಇದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲರೂ ಪ್ರತಿಷ್ಠೆ ಮಾಡುತ್ತಿದ್ದಾರೆ ಯಾರು ಏನೂ ಕಡಿಮೆ ಇಲ್ಲ, ಎಲ್ಲರೂ ಪ್ರತಿಷ್ಠೆಗೆ ಕುಳಿತಿದ್ದಿರಿ. ಎಲ್ಲರ ಪ್ರತಿಷ್ಠೆಗೆ ಈ ಸದನ ಬಲಿ ಆಗಬೇಕು.

ಶ್ರೀ ವಾಟಾಳ್ ನಾಗರಾಜ್: ಇದು ಸರಿಯಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾರಿಗೂ ಬೇಕಾಗಿಲ್ಲ, ರೂಲಿಂಗ್ ಪಾರ್ಟಿಯವರಿಗೂ ಬೇಕಾಗಿಲ್ಲ; ನಿಮ್ಮದೇ ಆದ ಪ್ರತಿಷ್ಠೆ, speakerದು ಪ್ರತಿಷ್ಠೆಯಾಗಿ ಬಿಟ್ಟರೆ ಹೇಗೆ?

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನಿಮ್ಮಿಂದ ನಾನು ಕಲಿಯುವ ಅಗತ್ಯವಿಲ್ಲ. ನೀವು ಕುಳಿತುಕೊಳ್ಳಿ. ಇದು ಸಲೀಸಾಗಿ ತೀರ್ಮಾನ ಆಗಬೇಕು. ನೀವೆಲ್ಲಾ ನಿಮ್ಮ ಸ್ಥಾನಗಳಿಗೆ ಹೋಗಿ ಎಂದರೆ ಇದನ್ನೇ ಪ್ರತಿಷ್ಠೆ ಮಾಡಿದರೆ ಹೇಗೆ? (ಅಡಚಣೆ) ಎಲ್ಲಾ ಹೀಗೆ ಆಗಬೇಕು ಹಾಗೆ ಆಗಬೇಕು ಎಂದರೆ ಹೇಗೆ? ಮಾನ್ಯ ವೆಂಕಟೇಶ್‌ರವರೇ, ನಿಮ್ಮ ಹತ್ತಿರ ಇರುವುದನ್ನು ನನ್ನ Chamberಗೆ ಬಂದು ಏನು ತೋರಿಸಿದಿರಿ ಅದನ್ನು ನನ್ನ ಕಡೆಗೆ ಕಳುಹಿಸಿ ಕೊಡಿ. ನೀವು ನಿಮ್ಮ statement ಏನು ಮಾಡುತ್ತೀರಿ ಅದನ್ನು ಮಾಡಿ.

ಶ್ರೀ ಆರಗ ಜ್ಞಾನೇಂದ್ರ: ಸಭೆ orderನಲಲಿ ಇಲ್ಲವಲ್ಲಾ ಸಾರ್.

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್: ಹಿರಿಯ ನಾಯಕರೆಲ್ಲರೂ ನಿಯಮಾವಳಿಯೆಂದು ಹೇಳುತ್ತಾರೆ. ಆ ನಿಯಮಾವಳಿ ಈಗ ಎಲ್ಲಿಗೆ ಹೋಯಿತು? ಈಗ ನಿಯಮಾವಳಿ ಇಲ್ಲವಾ?

(ಅಡಚಣೆ)

ಮಾನ್ಯ ರಮೇಶ್ ಕುಮಾರ್‌ರವರೇ, ನಿಯಮಾವಳಿ ಈಗ ಎಲ್ಲಿಗೆ ಹೋಗಿದೆ ಹೇಳಿ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೇ, ಭ್ರಷ್ಟಾಚಾರದ ಸಲುವಾಗಿಯೇ ಒಂದು ವಿಶೇಷ ಅಧಿವೇಶನ ಕರೆಯಿರಿ. ಅಲ್ಲಿ ಸಂಪೂರ್ಣ ಚರ್ಚೆ ಮಾಡಿ. ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ವಿಶೇಷ ಅಧಿವೇಶನದೊಳಗೆ ಆ ಭ್ರಷ್ಟಾಚಾರದ ಸುದ್ದಿ ಇಲ್ಲಿ ಏಕೆ ತರಬೇಕು? ಅದಕ್ಕಾಗಿಯೇ ಒಂದು ವಿಶೇಷ ಅಧಿವೇಶನ ಕರೆಯಿರಿ. ಈ ರಾಜ್ಯದಲ್ಲಿ ಯಾರು ಯಾರು ಭ್ರಷ್ಟಾಚಾರ ಮಾಡಿದ್ದಾರೆ, ಆ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲಿ.

ಅಧ್ಯಕ್ಷರು: ಈಗ ನಮ್ಮ ದೇಶ ಭ್ರಷ್ಟಾಚಾರದಲ್ಲಿ 13ನೇ ಸ್ಥಾನ. ಪ್ರಪಂಚದಲ್ಲಿ ಭ್ರಷ್ಟಾಚಾರದಲ್ಲಿ ನಾವು 13ನೇಯವರು. ನಾವು ಬಹಳ topನಲ್ಲೇ ಇದ್ದೇವೆ ಏನು ಕೆಳಗೆ ಇಲ್ಲ. ಆದ್ದರಿಂದ ಸಭಾ ನಿಯಮಾವಳಿ ಪ್ರಕಾರ ಅವರು ಏನು ಮಾಡಿದ್ದಾರೆ ಅದಕ್ಕೆ ಅವರು ಹೇಳಿಕೆ ಕೊಡುತ್ತಾರೆ. ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ವೆಂಕಟೇಶ್‌ರವರೇ, ನೀವು ಹೇಳಿಕೆ ಮಾಡಿ. ಅದನ್ನು ನನಗೆ ಕಳುಹಿಸಿಕೊಟ್ಟು ನೀವು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ): ಮಾನ್ಯ ಸದಸ್ಯರೆಲ್ಲಾ ಬಾವಿಯಲ್ಲಿ ನಿಂತಿದ್ದಾರೆ ಹೇಗೆ ಮಾತನಾಡುವುದು?

ಅಧ್ಯಕ್ಷರು: ಆಯಿತು, ಇಲ್ಲಿಯೇ ಅವರು ಶಾಂತಿಯಿಂದ ಕುಳಿತಿದ್ದಾರೆ ಪರವಾಗಿಲ್ಲ ಹೇಳಿ.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಸಭೆ order ನಲ್ಲಿ ಇಲ್ಲದಿದ್ದಾಗ ಮಾತನಾಡುವುದು ಉಚಿತವಲ್ಲ. ಅದು ಸಂಪ್ರದಾಯ ವಿರೋಧಿಯಾಗುತ್ತದೆ.

ಶ್ರೀ ಹೆಚ್.ಎಸ್. ಬಾಲಕೃಷ್ಣ: ಮಾನ್ಯ ರಮೇಶ್ ಕುಮಾರ್‌ರವರು ಈ ಬಗ್ಗೆ ಮಾರ್ಗದರ್ಶನ ಮಾಡಬೇಕು.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ನಾನು ಹೇಳಿಬಿಡುತ್ತೇನೆ. ನಂತರ ತಾವು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಬಿ.ಸಿ. ಪಾಟೀಲ್: ಹಿರಿಯರಾದಂಥ ರಮೇಶ್ ಕುಮಾರ್‌ರವರು ನಮಗೆ ಮಾರ್ಗದರ್ಶನ ಮಾಡಬೇಕು. ನಾವು ಹೊಸಬರಿದ್ದೇವೆ, ಬೇರೆ timeನಲ್ಲಿ ನಿಯಮಾವಳಿಗಳನ್ನು ಹೇಳಿ ಕೊಟ್ಟ ಹಾಗೆ ಈ time ನಲ್ಲಿ ಹೇಳಿ ಕೊಡಿ.

ಅಧ್ಯಕ್ಷರು: ವಿರೋಧ ಪಕ್ಷದ ಕಾಂಗ್ರೆಸ್ ಸದಸ್ಯರು ತಮ್ಮ ಆಸನಗಳಿಗೆ ಹೋಗುವುದಕ್ಕೆ ಸಿದ್ದರಿಲ್ಲ. ಈ ರೀತಿ ಮಾಡುವುದು ಸರಿಯಲ್ಲ. ಮಾನ್ಯ ವೆಂಕಟೇಶ್ ನೀವು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಂಥ ಸಂದರ್ಭಧಲ್ಲಿ photoಗಳನ್ನು, ದಾಖಲೆಗಳನ್ನು ತೋರಿಸುವಂಥ ಸಂದರ್ಭದಲ್ಲಿ ನಾನು ಯಾರ ಬಗ್ಗೆ ಮಾತನಾಡಿಲ್ಲ, ಯಾರ ಹೆಸರೂ ಪ್ರಸ್ತಾಪ ಮಾಡಿಲ್ಲ. ನನ್ನ ಭಾವನೆಗಳನ್ನು ಹೇಳಿಕೊಳ್ಳುವುದಕ್ಕೆ ನಾನು ಪ್ರಯತ್ನಪಟ್ಟು ತಮ್ಮ ಗಮನಕ್ಕೆ ತಂದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್‌ರವರು ಮಾತನಾಡಬೇಕಾದಾಗ ವೆಂಕಟೇಶ್‌ರವರ ತಂದೆ ವೀರಣ್ಣನವರು ನನಗೆ ಬಹಳ ಸ್ನೇಹಿತರು. ವೆಂಕಟೇಶ್‌ರವರು ನಮ್ಮ ಹುಡುಗ ಎನ್ನುವ ಪ್ರೀತಿಯ ಭಾವನೆಯಿಂದ ಅವರು ಮಾತನಾಡಿದ್ದಾರೆ. ಅವರಿಗೆ ಕಳಂಕ ತರಬೇಕೆಂಬ ವಿಚಾರದಲ್ಲಿ ನಾನು ಮಾತನಾಡಿಲ್ಲ. ಅವರು ನನಗೆ 1980ನೇ ಇಸವಿಯಿಂದ ನನಗೆ ಗೊತ್ತಿದೆ, ಮತ್ತೆ ಅವರು ನಾನು ಸಾಕಷ್ಟು ಸಾರಿ ಜೊತೆಯಲ್ಲಿ ಓಡಾಡಿದ್ದೇನೆ. ಮತ್ತೆ ಅವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಮ್ಮ ಮತ್ತು ಕಾಂಗ್ರೆಸ್ ಪಕ್ಷದವರಲ್ಲಿ ಹಲವಾರು ವಿಚಾರದಲ್ಲಿ ಸ್ವಲ್ಪ ಗದ್ದಲ ಉಂಟಾದಾಗ ಸಮಾಧಾನ ಮಾಡಿ ಅವರೇ ಮುಖ್ಯ ಮಂತ್ರಿಯಾಗಿ ಮುಂದುವರಿಯಬೇಕೆಂಬ ಭಾವನೆಯಿಂದ ನಾನು ಬಹಳ ಶ್ರಮ ವಹಿಸಿದ್ದೇನೆ. ಇದು ಅವರಿಗೂ ಕೂಡ ಗೊತ್ತಿದೆ. ಅವರೇ ಮುಖ್ಯ ಮಂತ್ರಿಯಾಗಿ ಮುಂದುವರಿಯಬೇಕೆಂಬ ಭಾವನೆಯಿಂದ ನಾನು ಸತತವಾಗಿ ಹೋರಾಟ ಮಾಡಿದ್ದೇನೆ. ಸದನದಲ್ಲಿಯೂ ಕೂಡ ಒಂದು ಮಾತನ್ನು ಹೇಳಿದ್ದೇನೆ. ಅದೇನೆಂದರೆ, ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳಬೇಕಾದರೆ ಕಾರಣ ನಾವಲ್ಲ, ಕಾಂಗ್ರೆಸ್ ಪಕ್ಷದವರೇ ಕಾರಣರಾಗುತ್ತಾರೆಂದು ನಾನು ಹಲವಾರು ಬಾರಿ ಇದರ ಬಗ್ಗೆ ಹೇಳಿದ್ದೇನೆ. ನಾನು ಎರಡನೇ ಬಾರಿಗೆ ಶಾಸಕನಾಗಿದ್ದೇನೆ. ನಾನು ಓದಿರುವುದು ಬೆಂಗಳೂರಿನಲ್ಲಿ ಮತ್ತೆ 1970 ರಿಂದ ನಾನು ವಿಧಾನಸಭೆಯ ಅಧಿವೇಶನ ನೋಡಿದ್ದೇನೆ. ಆ ಸಂದರ್ಭದಲ್ಲಿ ಎಂತೆಂಥವರು ಮುಖ್ಯ ಮಂತ್ರಿಗಳಾಗಿದ್ದರು ಮತ್ತು ವಿರೋಧ ಪಕ್ಷದ ನಾಯಕರು ಇದ್ದರೆಂಬುದನ್ನು ಮತ್ತು ಇಲ್ಲಿ ನಡೆಯುವಂಥ ಕಾರ್ಯಕಲಾಪಗಳನ್ನು ನೋಡಿದಂಥ ಅನುಭವ ನನಗೆ ಇದೆ. ಈ ಸಿ.ಡಿ. ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳ ಕುಟುಂಬದ ಬಗ್ಗೆ ಹಾಗೂ ಸರ್ಕಾರದ ಬಗ್ಗೆ ಹಲವಾರು ರೀತಿಯಲ್ಲಿ ಪ್ರಸ್ತಾಪಿಸಿ ಅಧಿವೇಶನದಲ್ಲಿ ಗಲಾಟೆ ಆಗುತ್ತಿತ್ತು. ಮತ್ತೆ ಈ ಐತಹಾಸಿಕ ವಿಧಾನಸಭೆ ನಡೆದು ಚರ್ಚೆ ಆಗುವಂಥ ಸಂದರ್ಭದಲ್ಲಿ ಪದೇ ಪದೇ ಕಾಂಗ್ರೆಸ್ ಪಕ್ಷದವರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಇಷ್ಟೆಲ್ಲಾ ಒಳ್ಳೆಯ ಕೆಲಸ ಮಾಡುತ್ತಾ ಇದ್ದರೂ ಸಹ ಯಾರೋ ಒಬ್ಬರು ನಕಲಿ ಸಿ.ಡಿ.ಗಳನ್ನು ತೋರಿಸಿ ಅದನ್ನು ಸ್ಪಷ್ಟವಾಗಿ ಕೊಡದೇ ಈ ರೀತಿಯಾಗಿ ಮಾಡುತ್ತಿದ್ದಾರೆಂದು ತಿಳಿದು ನೆನ್ನೆ ದಿವಸ ವಿಧಾನ ಪರಿಷತ್ತಿನಲ್ಲಿ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಪ್ರದರ್ಶನ ಮಾಡಿ

ದಾಖಲೆಗಳನ್ನು ಕೊಡದೆ, ಇವತ್ತಿನ ದಿವಸ ಒಳ್ಳೆಯ ಕಾರ್ಯಕ್ರಮಗಳು ಬೆಳಗಾವಿಯಲ್ಲಿ ನಡೆಯುತ್ತಿದ್ದರೂ ಅವರು ಪತ್ರಿಕೆಯಲ್ಲಿ ಹೇಳಿಕೆ ನೀಡಿ ನಮ್ಮ ಮುಖ್ಯಮಂತ್ರಿಗಳ ಮೇಲೆ ಇಂಥ ತಪ್ಪು ದಾಖಲೆಗಳನ್ನು ಕೊಡುತ್ತಿದ್ದಾರೆ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ನಾನು ಅವರ ಅಭಿಮಾನಿ ಅವರನ್ನು ಮುಖ್ಯಮಂತ್ರಿ ಮಾಡುವುದಕ್ಕೋಸ್ಕರ ನಾವೆಲ್ಲರೂ ಮತ್ತು ಹಿಂದುಳಿದ ಜನಾಂಗದವರು ಪ್ರಯತ್ನ ಮಾಡಿ ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೇವೆ. ಇಂತಹ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರ ದುಡ್ಡು ಕೊಟ್ಟ ಹಾಗೆ ಸಿ.ಡಿ. ಮಾಡಿಕೊಟ್ಟಿದ್ದಾರೆ. ಎಲ್ಲಾ ರೀತಿಯಾದವೆಲ್ಲವೂ ಕೂಡ ಇದೆ. ನಾನು ಬೆಳಿಗ್ಗೆ ಎದ್ದಂಥ ಸಂದರ್ಭದಲ್ಲಿ ನನ್ನ ರೂಮಿನಲ್ಲಿ ಈ ಕವರ್ ಬಿದ್ದಿತ್ತು. ಇದರಲ್ಲಿ ಫೋಟೋಗಳು ಇದ್ದವು. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯ ಆಯಿತು. ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಣ ಮುಟ್ಟುತ್ತಿರುವ ಫೋಟೋ ಇದೆಯಲ್ಲಾ ಎಂಬ ಭಾವನೆಯಿಂದ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಅವರು ವಿರೋಧ ಪಕ್ಷದ ಸ್ಥಾನದಲ್ಲಿ ಮುಂದುವರಿಯಬೇಕೆಂಬುದು ನನ್ನ ಭಾವನೆ. ಇವರು ಸರಿಯಿಲ್ಲ, ಸರ್ಕಾರದ ವಿರುದ್ಧ ಮಾತನಾಡುವುದಿಲ್ಲ ಮತ್ತೆ ಇವರು ಮುಖ್ಯಮಂತ್ರಿಗಳ ಜೊತೆ ಚೆನ್ನಾಗಿದ್ದಾರೆಂದು ದೆಹಲಿಗೆ ಅವರ ಪಕ್ಷದವರು ದೂರು ಹೇಳಿರತಕ್ಕಂಥದ್ದು ನನಗೆ ಗೊತ್ತಿದೆ. ನನಗೆ ಕಾಂಗ್ರೆಸ್ ಪಕ್ಷದಲ್ಲಿ ಬಹಳ ಜನ ಸ್ನೇಹಿತರು ಇದ್ದಾರೆ. ಅವರು ವಿರೋಧ ಪಕ್ಷದ ಸ್ಥಾನದಲ್ಲಿ ಮುಂದುವರಿಯಬಾರದೆಂಬ ಭಾವನೆಯಿಂದ ಈ ರೀತಿಯಾಗಿ ಚಿತಾವಣೆ ಮಾಡುತ್ತಾರೆಂದು ಈ ಸದನದಲ್ಲಿ ಅದನ್ನು ತೋರಿಸುವುದಕ್ಕೆ ನನಗೆ ಅವಕಾಶ ಕೊಡಬೇಕೆಂದು ನಾನು ನಿಮ್ಮಲ್ಲಿ ಮನವಿ ಮಾಡಿಕೊಂಡೆ. ಆದರೆ ತಾವು ಹೊರಟು ಬಂದಿರಿ. ನಾನು ಪದೇ ಪದೇ ನಿಂತುಕೊಂಡು ಮಾತನಾಡಬೇಕೆಂದು ಕೇಳಿದರೂ ನೀವು ನನಗೆ ಅವಕಾಶ ಕೊಡಲಿಲ್ಲ. ಈ ಫೋಟೋ ತೋರಿಸಿದರೆ ನನಗೆ ಅವಕಾಶ ಕೊಡುತ್ತೀರೆಂದು ನಾನು ಆ ಫೋಟೋವನ್ನು ಪ್ರದರ್ಶನ ಮಾಡಿದ್ದೇನೆ. ಆ ದಾಖಲೆಗಳನ್ನು ನಾನು ತಮಗೆ ತೋರಿಸಿದ್ದೇನೆ. ತಾವು ಅದನ್ನು ನೋಡಿ ಏನು ಈ ರೀತಿಯಾಗಿದೆ ಎಂದು ತಾವೂ ಕೂಡ ಹೇಳಿದ್ದೀರಿ. ಈ ರಾಜ್ಯದಲ್ಲಿ ಬಡವರ ಪರವಾಗಿ ಕೆಲಸ ಮಾಡುವಲ್ಲಿ ನಾವೆಲ್ಲಾ ಇದ್ದೇವೆ. ಅವರ ಬಗ್ಗೆ ಅಪಾರವಾದಂಥ ಗೌರವ ಇದೆ. ಮತ್ತೆ ಮಾನ್ಯ ಖರ್ಗೆಯವರ ಬಗ್ಗೆ ಕೂಡ ಗೌರವ ಇದೆ. ಅವರುಗಳಿಗೆ ಚಿತಾವಣೆ ಮಾಡಬೇಕೆಂದು ಈ ರೀತಿಯಾಗಿ ತೋರಿಸಿದ್ದಾರೆ. ಅವರು ವಿರೋಧಪಕ್ಷ ನಾಯಕರಾಗಿ ಮುಂದುವರಿಯಬೇಕೆಂಬ ಭಾವನೆ ನನಗೆ ಇದೆ. ಏಕೆಂದರೆ, ಅವರ ಪಾರ್ಟಿಯಲ್ಲಿಯೇ ಅವರನ್ನು ಚಿತಾವಣೆ ಮಾಡುತ್ತಿದ್ದಾರೆ. ಈ ರೀತಿಯಾಗಿ ಆಗಬಾರದೆಂದು ನಾನು ಈ ರೀತಿ ಮಾಡಿರುವುದು ನಿಜ. ಅವರು ಭ್ರಷ್ಟಾಚಾರ

ಮಾಡಿದ್ದಾರೆಂದು ಮತ್ತು ದುಡ್ಡು ತೆಗೆದುಕೊಂಡಿದ್ದಾರೆಂದು ನನ್ನ ಭಾಷಣದಲ್ಲಿ ಎಲ್ಲಿಯೂ ಕೂಡ ನಾನು ಹೇಳಲಿಲ್ಲ. ಮಾನ್ಯ ಅಧ್ಯಕ್ಷರಿಗೆ ನಾನು ಎಲ್ಲಾ ಸಂಪೂರ್ಣವಾದ ವಿವರಗಳನ್ನು ಹೇಳಿದ್ದೇನೆ. ಮತ್ತೆ ಅವೆಲ್ಲವನ್ನೂ ಸಹ ತೋರಿಸಿದ್ದೇನೆ. ನಾನು ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಅವರು ಬಹಳ ಹಿರಿಯರು ಅವರ ಮೇಲೆ ನನಗೆ ಗೌರವ ಇದೆ. ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅವರು ಮತ್ತು ನಾನು ಮೂರು ಜನ ಸೇರಿ ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದೇವೆ. ನಾನು ಮಾನ್ಯ ಗುಂಡೂರಾವ್‌ರವರಿಗೆ ಬಹಳ ನಿಕಟವರ್ತಿಯಾಗಿದ್ದೆ. ಆದ್ದರಿಂದ ಈ ವಿಚಾರದಲ್ಲಿ ಸತ್ಯಾಂಶ ಗೊತ್ತಿಲ್ಲದೆ ನಾನೇನೂ ಮಾತನಾಡಿಲ್ಲ. ಒಳ್ಳೆಯ ಭಾವನೆಯಿಂದ ಆತ್ಮವಿಶ್ವಾಸದಿಂದ ನಾನು ಫೋಟೋ ಪ್ರದರ್ಶನ ಮಾಡಿದ್ದೇನೆ. ಅವರಿಗೆ ಇದರಿಂದ ಬೇಸರವಾಗಿದ್ದರೆ ನಾನು ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ಆ ಫೋಟೋಗಳನ್ನು ನಮಗೆ ತೋರಿಸಬೇಕಾಗುತ್ತದೆ. ಏಕೆಂದರೆ ಅದರಲ್ಲಿ ಏನಿದೆ ಎಂಬುದು ನಮಗೆ ಗೊತ್ತಾಗಬೇಕಲ್ಲವೆ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಸ್ಪೀಕರ್ ರೂಮಿಗೆ ಹೋಗಿ ಕೊಡುತ್ತಾರೆ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ಯಾರು ಏನು ಬೇಕಾದರೂ ಮಾಡುತ್ತಾರೆಂದು ರುಜುವಾತು ಮಾಡುವುದಕ್ಕೆ ಆ ಫೋಟೋಗಳನ್ನು ತಂದು ತೋರಿಸಿದ್ದೇನೆ. ನಾನೇನು ಆರೋಪ ಮಾಡಬೇಕೆಂದು ಕೊಟ್ಟಿಲ್ಲ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ವೆಂಕಟೇಶ್‌ರವರನ್ನು ನಾವು ಅಭಿನಂದಿಸಬೇಕಾಗುತ್ತದೆ. ಏಕೆಂದರೆ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಬುದ್ಧಿವಂತಿಕೆ ಯಾರೊಬ್ಬರ ಜಾಗೀರ್ ಅಲ್ಲ. ಇಂಥ ಸನ್ನಿವೇಶದಲ್ಲಿ ಬಹಳ ಚಾಣಾಕ್ಷತನದಿಂದ ಮಾತನಾಡಬಲ್ಲೆನೆಂದು ರುಜುವಾತು ಮಾಡಿದ್ದಾರೆ. ಅವರು ಬುದ್ಧಿವಂತಿಕೆಗೆ ಎಷ್ಟು ಮಾನ್ಯತೆ ಸಿಗಬೇಕಾಗಿತ್ತೋ ಅಷ್ಟು ಸಿಗಲಿಲ್ಲವೆಂಬ ದುಃಖ ನಮಗೆ ಇದೆ. ನಾನು ನಿಮಗೆ ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ, ಏನೆಂದರೆ, photo ಅವರಿಗೆ ಸಂಬಂಧಿಸಿಲ್ಲ, ಅದು ಅವರ ರೂಮಿನಲ್ಲಿ ಬಿದ್ದಿತ್ತು. ರೂಮಿನಲ್ಲಿ ಬಿದ್ದಿರತಕ್ಕಂಥದ್ದನ್ನು ಅವರು ಕಸದ ಬುಟ್ಟಿಗೆ ಹಾಕಿದ್ದರೆ ಈ ವಿಚಾರ ಇಲ್ಲಿ ಪ್ರಸ್ತಾಪವಾಗುತ್ತಿರಲಿಲ್ಲ. ರೂಮಿನಲ್ಲಿ ಬಿದ್ದಿದ್ದನ್ನು ಕಸದ ಬುಟ್ಟಿಗೆ ಹಾಕಬೇಕಾಗಿರತಕ್ಕಂಥದ್ದನ್ನು ಗೊತ್ತಿಲ್ಲದೆ ಅಜೆಂಡಾ ಪೇಪರ್ಸ್ ನಡುವೆ ವಿಧಾನ ಸಭೆಗೆ ತಂದು ಬಿಟ್ಟಿದ್ದಾರೆ. ಸದನಕ್ಕೆ ಅದನ್ನು ತಂದು ತೋರಿಸಿದ ಮೇಲೆ ಅದು

ಅವರ ಮತ್ತು ತಮ್ಮ ಸ್ವಂತ ವಸ್ತುವಾಗುವುದಿಲ್ಲ. ಅದು ಈ ಸದನದ ವಸ್ತು ಆಗುತ್ತದೆ. ಈ photo ಎಲ್ಲಿ ತಯಾರಾಯಿತು? ಯಾರು ತಯಾರು ಮಾಡಿದರು? ಹೇಗೆ ತಯಾರಾಯಿತು? ಸಿ.ಡಿ.ಗಳು ನಕಲಿಯೋ ಅಥವಾ ಸಾಚಾವೋ ಎಂಬುದು ನಮಗೆ ಗೊತ್ತಿಲ್ಲ, ಆದ್ದರಿಂದ ಅದರ ಬಗ್ಗೆ ವಕಾಲತ್ತು ವಹಿಸುವುದಕ್ಕೆ ನಾನು ಹೋಗುವುದಿಲ್ಲ. ಅದು ಸಾಚವಾಗಿದ್ದರೆ ಸಾಚವಾಗಲಿ, ಅಥವಾ ನಕಲಿಯಾಗಿದ್ದರೆ ನಕಲಿಯಾಗಲಿ, ಆದರೆ ಈ photoಗಳು ನಮ್ಮ ನಾಯಕರಿಗೆ ಸಂಬಂಧಿಸಿದ್ದರಿಂದ ಇವುಗಳ ಬಗ್ಗೆ ಸತ್ಯಾಸತ್ಯತೆ ತಿಳಿದುಕೊಳ್ಳುವ ಅಗತ್ಯಗೆ ನಮಗಿದೆ. ಅವರು ತಮ್ಮ chamberನಲ್ಲಿ ಪ್ರದರ್ಶನ ಮಾಡಿದ್ದರಿಂದ ಅದು that is the property of the House. We demand that there should be an enquiry into the origin of this photo. ಇದರ ಮೂಲ ಎಲ್ಲಿ, ಇದು ಎಲ್ಲಿಂದ ಬಂತು? ಹೇಗೆ ಪ್ರಾರಂಭವಾಯಿತು? ನಾವು ಯಾವ ಸಿ.ಡಿ.ಯನ್ನೂ ತಂದು proceedings ಅನ್ನು stall ಮಾಡಿಲ್ಲ, ಹಾಗೆಯೇ ಯಾವ ಸಿ.ಡಿ. ತಂದು ಇಲ್ಲಿ ಕೊಟ್ಟಿಲ್ಲ, ನಾವು ಅದರ ಜವಾಬ್ದಾರಿಯನ್ನೂ ಸಹ ತೆಗೆದುಕೊಳ್ಳುವುದಿಲ್ಲ. Photoಗಳನ್ನು ಅವರು produce ಮಾಡಿದ್ದಾರೆ, ಅದು ಅವರ ಹೊಣೆಗಾರಿಕೆ ಅದನ್ನು ತಾವು ಸ್ವೀಕರಿಸಿದ್ದೀರಿ, photoಗಳ ಮೂಲ ಸಿ.ಡಿ.ಗಳ ಮೂಲಕ ಪ್ರತಿತಂತ್ರ ಯಾರ ಮೇಲೂ ಮಾಡುವುದಕ್ಕೋಸ್ಕರ ಇವರನ್ನು ಬಲಿ ಮಾಡುತ್ತಿದ್ದಾರೆ. ನಾನೊಂದು ಮಾತು ಕೇಳುತ್ತೇನೆ, ಮಾನ್ಯ ಧರ್ಮಸಿಂಗ್‌ರವರು 1972ನೇ ಇಸವಿಯಿಂದ ಈ ಸದನದಲ್ಲಿ ಇದ್ದಾರೆ, ಈ ರಾಜ್ಯದಲ್ಲಿ ಎಲ್ಲಾ ಲೆಕ್ಕ ಹಾಕಿದರೆ, ರಜಪೂತರು ಸುಮಾರು 500 ರಿಂದ 1000 ಜನ ಇರಬಹುದು. ದುಡ್ಡು, ಜಾತಿ, ತೋಳಬಲ, ಇವುಗಳು ರಾರಾಜಿಸುವಂಥ ಈ ಕಾಲದಲ್ಲಿ ಹೇಳ ಹೆಸರಿಲ್ಲದಂಥ ಒಬ್ಬ ಮನುಷ್ಯ ಇಷ್ಟು ವರ್ಷಗಳು ಸತತವಾಗಿ ವಿಧಾನ ಸಭೆಗೆ ಆರಿಸಿ ಬಂದಿದ್ದಾರೆ, ಹಾಗೆಯೇ ಅತ್ಯಂತ ಜವಾಬ್ದಾರಿ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಒಂದೂ ಹಗರಣವನ್ನೂ ತಲೆಯ ಮೇಲೆ ಹೊತ್ತುಕೊಳ್ಳದೇ ಮತ್ತು ಒಂದು ತಪ್ಪು ಮಾಡದೇ ಈ ರಾಜ್ಯದ ಅಧಿಕಾರವನ್ನು ತ್ಯಾಗ ಮಾಡಿ ಮನೆಗೆ ಹೋಗುತ್ತಾರೆ. ಅವರು ಅಂತಹ ಒಬ್ಬ ಅಸಹಾಯಕರು. ಒಂದು ವೇಳೆ ನಮ್ಮ ಜನರೆಲ್ಲಾ ಬನ್ನಿ ಎಂದರೆ ಇಡೀ ರಾಜ್ಯದಿಂದ 300 ಜನ ಬರಬಹುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ದಲಿತ ವರ್ಗಕ್ಕೆ ಸೇರಿದ್ದಾರೆಂದು ಅವರ ಮೇಲೆ ಕರುಣೆ ತೋರಿಸಿ ಎಂದು ನಾನು ಹೇಳುವುದಿಲ್ಲ. ತಮ್ಮದೇ ಆದ ವರ್ಚಸ್ಸಿನಿಂದ ಮತ್ತು ಯೋಗ್ಯತೆಯಿಂದ ಮುಂದೆ ಬಂದಿದ್ದಾರೆ. ಅವರೊಬ್ಬರು ಕಾರ್ಮಿಕನ ಮಗ. ಅವರಪ್ಪ Prime Minister ಅಲ್ಲ ಅಥವಾ Chief Minister ಅಲ್ಲ. ಮತ್ತೆ ಅವರ ಮಕ್ಕಳೂ ಕೂಡ ಏನು ಆಗಬೇಕಾಗಿಲ್ಲ. ಅವರ ಇಡೀ ಜೀವನದುದ್ದಕ್ಕೂ ಒಂದು ಚುಕ್ಕೆ ತಮ್ಮ ಚರಿತ್ರೆ ಮೇಲೆ ಬಾರದಂತೆ ಬದುಕಿ ಬಂದವರು. ಇಡೀ ಜೀವನವೆಲ್ಲಾ ಈ ರೀತಿಯಾಗಿ 1972ನೇ ಇಸವಿಯಿಂದ

ಇಲ್ಲಿಯವರೆಗೂ ನಡೆಸಿಕೊಂಡು ಬಂದಿದ್ದಾರೆ. ಇವತ್ತು ರಾಜ್ಯದ ಆಡಳಿತವನ್ನು ನಡೆಸತಕ್ಕಂಥವರ ಮನೋಸ್ಥಿತಿ ಎಂದು ನಾವು ತಿಳಿದುಕೊಳ್ಳಬೇಕಾ? Chief Minister and Deputy Chief Minister ರವರ combination ನೋಡಿ ಧರ್ಮಸಿಂಗ್ ಮತ್ತು ಖರ್ಗೆಯವರಂಥ ಇತ್ಯಾದಿಗಳು ಈ ರಾಜ್ಯದಲ್ಲಿ ಯಾರಿದ್ದಾರೆ ಅವರೇನಾದರೂ ನಮ್ಮ ತಂಟೆಗೆ ಬಂದರೆ ನಾವು ಕೊಡತಕ್ಕಂಥ ಶಿಕ್ಷೆ ಎಂದು ಕೊಡತಕ್ಕಂಥ ಸೂಚನೆ ಇದೇನಾ? ಹಾಗಾದರೆ ಆ ಯುದ್ಧಕ್ಕೆ, ಸಂಘರ್ಷಕ್ಕೆ, ಕಾಂಗ್ರೆಸ್ ಪಕ್ಷ ತಯಾರಾಗಿದೆ. ನಾವು ಫೇಸ್ ಮಾಡುತ್ತೇವೆ. ಈ ಪಕ್ಷ ಹುಟ್ಟಿದ್ದೇ ಸಂಘರ್ಷದ ಆಧಾರದ ಮೇಲೆ, ಈ ಪಕ್ಷ ಜೀವಂತವಾಗಿರುವುದೇ ಸಂಘರ್ಷದ ಮೇಲೆ.

(ಅಡಚಣೆ)

ಶ್ರೀ ಹೆಚ್.ಸಿ. ಬಾಲಕೃಷ್ಣ: ನೀವು ಮೊದಲು ಎಲ್ಲಿದ್ದಿರಿ?

(ಅಡಚಣೆ)

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಅಲ್ಲಿದ್ದಾಗಲೂ ಕೂಡ ಇದ್ದನ್ನೇ ಮಾತನಾಡಿದ್ದೇನೆ. ನನ್ನ ಭಾಷೆ, ಧ್ವನಿ ಮತ್ತು ನನ್ನ ನಿಲುವು ಯಾವತ್ತೂ ಕೂಡ, ಎಲ್ಲಿಯೂ ಬದಲಾಗಿಲ್ಲ. Bhagyajyothi disconnections ಮಾಡಿದ ದಿವಸ ರಾಮಕೃಷ್ಣ ಹೆಗಡೆಯವರನ್ನು ನಾನು ಏನು ಕೇಳಿದೆ ಎಂದರೆ, 'ಏನ್ರಿ, ಬಡವನ ಮನೆಯ ಲೈಟ್ ಆಫ್ ಮಾಡಿದ್ದೀರಿ, ವಿಧಾನ ಸೌಧದ ಮೂರನೇ ಮಹಡಿಯ ಲೈಟ್ ಆಫ್ ಆಗುತ್ತದೆ. ಮೊದಲು ರೀ ಕನೆಕ್ಷನ್ ಕೊಡಿ' ಎಂದು ಕೇಳಿದೆ. ನಾನು ಯಾರ ಹಿಂದೆಯೂ ಕೂಡ ಬಿದ್ದವನಲ್ಲ, ನನ್ನ ನಿಲುವು ಆವತ್ತೂ ಒಂದೇ, ಇವತ್ತೂ ಕೂಡ ಒಂದೇ, ಬಾಡಿಗೆಗಾಗಿ ಮಾತನಾಡತಕ್ಕಂಥ ಅಗತ್ಯತೆ ನನಗಿಲ್ಲ. ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಫೋಟೋಗಳ ಮೂಲಗಳ ಬಗ್ಗೆ ತಾವು ತನಿಖೆಗೆ ಆಜ್ಞೆ ಮಾಡಲೇಬೇಕು. ವೆಂಕಟೇಶ್‌ರವರನ್ನು ನಾವು ಆಪಾದಿತರನ್ನಾಗಿ ಮಾಡುವುದಿಲ್ಲ. ಆಯಿತು ಕ್ಷಮೆಯಾಚಿಸುತ್ತೇನೆ, ವಿಷಾಧಿಸುತ್ತೇನೆ ಅವರ ಬಗ್ಗೆ ಗೌರವ ಇದೆ ಎಂದು ಸದ್ಭಾವನೆಯಿಂದ ಹೇಳುತ್ತಾರೆ. ನಾವು ಅದನ್ನು ಅಲ್ಲಿಗೇ ಬಿಡುತ್ತೇವೆ. ಆದರೆ ಈ ಫೋಟೋಗಳ ಮೂಲ ಮಾತ್ರ ಪತ್ತೆಯಾಗಲೇಬೇಕು. ಈ ರೀತಿಯಾದ jugglery ನಡೆಸುವುದಕ್ಕೆ ವಿಧಾನಸಭೆಯ ಈ ಸದನ ಒಂದು ವೇದಿಕೆಯಾಗಬಾರದು. ಇವತ್ತು ನಾವು ಅದನ್ನು ಅಲ್ಲಿಗೆ ಕೈಬಿಟ್ಟರೆ ಮುಂದಕ್ಕೆ ಯಾರ ಮೇಲೆ ಯಾರು ಬೇಕಾದರೂ ಕಸದ ತೊಟ್ಟಿಯಲ್ಲಿ ಬಿದ್ದಿರತಕ್ಕಂಥದ್ದು, ರಸ್ತೆಯಲ್ಲಿ ಬಿದ್ದಿರತಕ್ಕಂಥದ್ದನ್ನು ಎಲ್ಲಾ ತಂದು ಇಲ್ಲಿ ಬಿಸಾಕಿ ಅಮೇಲೆ ವಿಷಾದವನ್ನು ವ್ಯಕ್ತಪಡಿಸಿ ಹೊರಟು ಬಿಡಬಹುದು. ನಾನು ತಮ್ಮ ಹೊಣೆ ಏನಿದೆ ತಮ್ಮ ಜವಾಬ್ದಾರಿ ಏನಿದೆ ಇದನ್ನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಕೆಲವು ಸ್ನೇಹಿತರು ಆ ಕಡೆಯಿಂದ ಕೂಗುತ್ತಿದ್ದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ಬಾವಿಯಲ್ಲಿದ್ದಾಗ ಮಾನ್ಯ ರಮೇಶ್‌ಕುಮಾರ್‌ರವರು ಮಾರ್ಗದರ್ಶನ ಕೊಡಲಿ ಎಂದು ಒಬ್ಬರು ಹೇಳಿದರು. ಸುದೈವವಶಾತ್ ನಾನು ಮಾರ್ಗದರ್ಶನ ಕೊಡುವಂಥ ಸಂದರ್ಭ ಬಂದರೆ ಅವಕಾಶ ಬಂದಾಗ ಹೇಗೆ ಸ್ಥಿತಿಯನ್ನು ನಿಭಾಯಿಸಬೇಕೆಂದು ಮತ್ತೆ ನಾನು ಸಾಬೀತು ಮಾಡಿ ತೋರಿಸುತ್ತೇನೆ. ಹಿಂದೆ ಇದ್ದಾಗ ಮಾಡಿ ತೋರಿಸಿದ್ದೇನೆ.

ಅಧ್ಯಕ್ಷರು: ಆಯಿತು ದಯಮಾಡಿ ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಕಾನೂನು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾತನಾಡಿದಂತೆ ಎರಡೇ ಎರಡು ಪರ್ಯಾಯವಾದಂಥ ಪರಿಹಾರಗಳು ಇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಖರ್ಗೆಯವರು ಹಾಗೂ ಮಾನ್ಯ ಧರ್ಮಸಿಂಗ್‌ರವರು ಹೇಳಿದರು. ಒಂದು, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಅದನ್ನು ನೋಂದಾಯಿಸಬೇಕು. ಇದರ ಬಗ್ಗೆ ಮುಂದಿನ ಕ್ರಮವನ್ನು ಕೈಗೊಳ್ಳಬೇಕು. ಇಲ್ಲದೇ ಹೋದರೆ ಅವರ ಸದನಕ್ಕೆ ಕ್ಷಮೆಯಾಚಿಸಬೇಕೆನ್ನುವ ಮಾತನ್ನು ಹೇಳಿದರು. ಆ ಪ್ರಕಾರ ಸನ್ಮಾನ್ಯ ವೆಂಕಟೇಶ್‌ರವರು ಮಾಡಿದ್ದಾರೆ. ಈಗ ಇದರ ಮೂಲ ಏನು ಎಂದು ಮಾನ್ಯ ರಮೇಶ್‌ಕುಮಾರ್‌ರವರು ಇದರ ಬಗ್ಗೆ ತನಿಖೆಯನ್ನು ನಡೆಸಬೇಕೆಂಬ ವಿಷಯವನ್ನೂ ಕೂಡ ಎತ್ತಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರಿಗೆ ನೆನಪು ಇರಬಹುದು, ಟೆಲಿಫೋನ್ ಟ್ಯಾಪಿಂಗ್ ಕೇಸ್ ಆದಂಥ ಸಂದರ್ಭದಲ್ಲಿ ಕೇಂದ್ರದಿಂದ ಕೆಲವೊಂದು ವಿಷಯಗಳು ಬಹಿರಂಗವಾದಾಗ ನಮ್ಮ ಸದನದಲ್ಲಿ ಅನೇಕ ಕಾಂಗ್ರೆಸ್ ಪಕ್ಷದವರು ಇದರ ಬಗ್ಗೆ ನೀವು ಎಲ್ಲಾ ಮಾಹಿತಿಯನ್ನು ಕೊಡಬಹುದು ಎನ್ನುವಂಥ ವಿಚಾರವನ್ನು ಇಟ್ಟು ಆ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಈ ವಿಚಾರದಲ್ಲಿ ನಾವು ಮಾಹಿತಿಯನ್ನು ಇಡಬೇಕಾದಂಥದ್ದು ಏನೂ ಇಲ್ಲ. ಬಹಳ ಒತ್ತಾಯ ಮಾಡುವುದಾಗಿದ್ದರೆ ಸ್ಪೀಕರ್ ಛೇಂಬರ್‌ನಲ್ಲಿ ನಾವು ಆ ಮಾಹಿತಿಯ ಫೈಲನ್ನು ಇಡುತ್ತೇವೆ. ಯಾರ್ಯಾರು ಇದರ ಬಗ್ಗೆ ಆಸಕ್ತಿ ಇರುತ್ತದೆ, ಅವರು ಬಂದು ನೋಡಬಹುದು ಅಂತ ಹೇಳಿದ್ದೆವು. ಅವತ್ತು ನಮ್ಮ ಶ್ರೀ ಎಂ.ಸಿ. ನಾಣಯ್ಯನವರು ಸಂಸದೀಯ ಸಚಿವರಾಗಿದ್ದರು. ವಿರೋಧ ಪಕ್ಷದ ನಾಯಕರು ಮತ್ತು ಸಭಾನಾಯಕರು ಮತ್ತು ಸ್ಪೀಕರ್ ಛೇಂಬರ್‌ನಲ್ಲಿ ಕುಳಿತು ಇದನ್ನು ನೋಡಬಹುದು ಎಂದು ಹೇಳಿದ್ದೆವು. ಆ ಫೈಲ್‌ನಲ್ಲಿ ಏನೆಲ್ಲಾ ಆರ್ಡರ್‌ಗಳು ಇದ್ದವು ಎನ್ನುವುದನ್ನು ನೋಡಿದರು. ಆದರೆ ಅದರ ಮೂಲ ಏನು? ಯಾರು ಹೇಳಿದರು. ಯಾರು ಏನು ವಿಚಾರಕ್ಕಾಗಿ ಮಾಡಿದರು ಎನ್ನುವಂಥ ವಿಚಾರಕ್ಕಾಗಿ ತನಿಖೆಯನ್ನು ನಡೆಸಿರತಕ್ಕಂಥ ಉದಾಹರಣೆ ಇಲ್ಲ. ಆ ಕಾರಣಕ್ಕಾಗಿ ಅದಕ್ಕೆ ಬೇರೆ ಮಾರ್ಗಗಳು ಇವೆ. ಆ ಬೇರೆ ಮಾರ್ಗಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಅವರು ಬರೀ ಈ ಸದನದಲ್ಲಿ ಪ್ರಕಟ ಮಾಡಿದ್ದಾರೆ ಎಂದ ಕೂಡಲೇ ಎಲ್ಲಾ ಮಾರ್ಗಗಳು ಮುಚ್ಚಿಹೋದವು ಎಂದಲ್ಲ. ಈ ತರಹ ಕಿಡಿಗೇಡಿತನ

ಮಾಡಿದಂಥವರ ಬಗ್ಗೆ ನಾವು ಕ್ರಮ ಕೈಗೊಳ್ಳುವುದಕ್ಕೆ ಬೇಕಾದಷ್ಟು ಅವಕಾಶಗಳು ಇರುವುದರಿಂದ ಆ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು. ಮತ್ತು ಈ ಸದನದ ಕಾರ್ಯಕಲಾಪಗಳು ನಡೆಯಬೇಕಾದದ್ದು ಇದೆ. ಆ ಈರ್ವರ ಬಗ್ಗೆ ನಮಗೆ ಗೌರವ ಇರುವುದರಿಂದ ಈಗ ಇದನ್ನು ಮುಕ್ತಾಯಗೊಳಿಸಿ ಕಾರ್ಯಕಲಾಪಗಳನ್ನು ನಡೆಸಲಿಕ್ಕಾಗಿ ಇದಕ್ಕಿಂತ ಹೆಚ್ಚಿನ exoneration ಏನಿದೆ, ನಾವು ಆಪಾದನೆ ಮಾಡಿರುವವರ ಬಗ್ಗೆ ಗೌರವ ಇದೆ. ನಾನು ಅಂತಹ ಆಪಾದನೆಗಳನ್ನು ಮಾಡಿಲ್ಲವೆಂದು ನಾನು ಕ್ಷಮೆಯಾಚಿಸುತ್ತೇನೆಂದು ಹೇಳಿದಾಗ ಅದನ್ನು ಮುಕ್ತಾಯಗೊಳಿಸಬೇಕು. ಅದರ ಮೇಲೆ ಯಾರು ತೊಂದರೆಗೆ ಒಳಗಾಗಿದ್ದಾರೆ ಅವರು ಬೇರೆ ಪರ್ಯಾಯ ಕ್ರಮ ಕೈಗೊಳ್ಳುವುದಕ್ಕಾಗುತ್ತದೆ. ಆದ್ದರಿಂದ ಸನ್ಮಾನ್ಯ ರಮೇಶಕುಮಾರ್‌ರವರಿಗೆ ಮತ್ತು ಹಿರಿಯರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ತಮ್ಮ ಸದಸ್ಯರುಗಳು ಬಾವಿಯಿಂದ ಹೊರಗಡೆ ಬಂದು ಅದನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಉಳಿದಿರುವಂಥ ಸೂಚಿತ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಮಾನ್ಯ ವೆಂಕಟೇಶ್‌ರವರು ವಿವರಣೆ ಕೊಟ್ಟ ಮೇಲೆ ಅವರು ಇದರಲ್ಲಿ innocent ಎನ್ನುವಂಥ ಭಾವನೆ ನಮಗೂ ಕೂಡ ಬಂದಿದೆ. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಾ ಯಾರು ಈ ತರಹ ನಮ್ಮಲ್ಲಿಯೇ ಕಿತ್ತಾಟ ಹಚ್ಚಿಸಿ ಒಬ್ಬರ ಚಾರಿತ್ರ್ಯವಧೆ ಮಾಡಿಸುವುದು. ಇದು ಯಾರು ಮಾಡುತ್ತಿದ್ದರೆ. ನಾವೆಲ್ಲರೂ ಆ ಕಡೆ ಈ ಕಡೆ ಇರುವವರು ಸಾರ್ವಜನಿಕ ಜೀವನದಲ್ಲಿರುವವರು. ಬೆಳಿಗ್ಗೆ ಒಂದು ಮಾತು ಬಂತು. ಜನಾರ್ಧನರೆಡ್ಡಿಯ ವಿಷಯದಲ್ಲಿ ಅದನ್ನು fabricate ಮಾಡಿದ್ದಾರೆನ್ನುವಂಥಹ ಮಾತು, ಮಾಡಿರಬಹುದು. ಅದೇ ತರಹ ಇದೂ ಕೂಡ ಏಕೆ ವೆಂಕಟೇಶ್‌ರವರ ಮುಖಾಂತರ fabricate ಮಾಡಿ ವಿರೋಧ ಪಕ್ಷದವರ ಮೇಲೆ ಧಾಳಿ ಮಾಡಿಸಲಿಕ್ಕೆ ಸಾಧ್ಯತೆ ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆ ಅನುಮಾನವು ಕೂಡ ಇವತ್ತು ನಮಗೆ ಇಲ್ಲಿ ಬರುತ್ತಿದೆ. ಹಾಗಾಗಿ ಇವತ್ತು ಸತ್ಯ ಹೊರಗೆ ಬರಬೇಕು. ನಮ್ಮ ಉತ್ತರ ಕರ್ನಾಟಕ ಶಾಸಕರ ದುಃಖವೇನೆಂದರೆ, ನಾಳೆ ರಾಜ್ಯಪಾಲರು ಭಾಷಣ ಮಾಡಿದ ಮೇಲೆ ತಾವು ಸಭೆಯನ್ನು ಮುಂದೂಡುತ್ತೀರಿ ಏನೋ ಇವತ್ತು ಸಿಕ್ಕಷ್ಟು ಸಮಯದಲ್ಲಿ ಈ ಭಾಗದ ಸಮಸ್ಯೆಗಳನ್ನು ಚರ್ಚೆ ಮಾಡಬೇಕೆಂದು ನಾವೆಲ್ಲರೂ ಡಾ: ನಂಜುಂಡಪ್ಪನವರ ವರದಿಯನ್ನು, ಬರಗೂರು ರಾಮಚಂದ್ರಪ್ಪನವರ ವರದಿಯನ್ನು ಮತ್ತು ವಾಟಾಳ್‌ರವರ ವರದಿಯನ್ನು ತಂದಿದ್ದೇವೆ. ಸದನದ ಗಮನಕ್ಕೆ ತಂದು ಏನಾದರೂ ಸರ್ಕಾರದಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಬೇಕೆಂದು ತುಂಬಾ ಆತುರದಿಂದ ಕುಳಿತುಕೊಂಡಿದ್ದೇವೆ. ಇಲ್ಲಿಗೆ ಮೂರು

ತಾಸು ಕಳೆದು ಹೋಯಿತು. ಈ ವಿಷಯವನ್ನು ಆಗಲೇ ಅಂತ್ಯಗೊಳಿಸಿದ್ದರೆ ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದರೆ ಬಹುಶಃ ಆ ಭಾಗದ ಜನರಿಗೆ ಎಷ್ಟೊಂದು ಭರವಸೆಯನ್ನು ಕೊಡುವುದಕ್ಕೆ ಈ ಸದನ ಸೇರಿದ್ದು. ನಮ್ಮ ಅಭಿವೃದ್ಧಿಗೋಸ್ಕರ ನಮ್ಮ ಕಾಳಜಿಗೋಸ್ಕರ ಎನ್ನುವಂಥ ಭಾವನೆ ಈ ಉತ್ತರ ಕರ್ನಾಟಕದ ಜನರ ಮನಸ್ಸಿನಲ್ಲಿ ಬರಲಿಕ್ಕೆ ಸಾಧ್ಯತೆ ಇತ್ತು. ಈಗ ಮೂರು ತಾಸು ಕಳೆದುಹೋಯಿತು. ಮಾನ್ಯ ಪ್ರಕಾಶ್‌ರವರ ಮಾತು ಹೇಳಿದ ಮೇಲೆ ಆ status ಕೊಡುವುದಿಲ್ಲ. ಈವತ್ತು ಇದು ಒಂದು ಹೊಸ ತಿರುವು ಪಡೆದಿದೆ, ಯಾರು ಇದನ್ನು ವೆಂಕಟೇಶ್‌ರವರ ರೂಮಿನಲ್ಲಿ ಬಿಸಾಕಿದ್ದರು?

ಶ್ರೀ ಎಂ.ಪಿ. ವೆಂಕಟೇಶ್: ತಾವು ಏನು ಹೇಳುತ್ತಿದ್ದೀರಿ?

ಶ್ರೀ ಬಿ.ಆರ್. ಪಾಟೀಲ್: ನಾನು ನಿಮ್ಮ ಮೇಲೆ ಆರೋಪವನ್ನು ಮಾಡುತ್ತಿಲ್ಲ. ನಿಮ್ಮ ರೂಮಿನಲ್ಲಿ ಬಿಸಾಕಿರುವವರು ನಮ್ಮ ರೂಮಿನಲ್ಲಿ ಹಾಕಬಹುದು. ನಾನು ನಿಮ್ಮ ರಕ್ಷಣೆಗೆ ಬರುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್: ನಾನು ಅವರ ಬಗ್ಗೆ ಅಭಿಮಾನದಿಂದ ವಿಷಾದವನ್ನು ವ್ಯಕ್ತಪಡಿಸಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್: ತಮ್ಮ ಸ್ಪಷ್ಟೀಕರಣವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ನಿಮ್ಮ ಮೇಲೆ ಯಾವುಗೇ ಆರೋಪವಿಲ್ಲ. ಆದರೆ ಈ ಆಟವನ್ನು ಯಾರು ಆಡಿದರು, ಇದು ಗೊತ್ತಾಗಬೇಕಲ್ಲವೆ? ಇಲ್ಲದಿದ್ದರೆ ನಾಳೆ ಒಬ್ಬರ ಮೇಲೆ ಒಬ್ಬರು, ಇವತ್ತು ನಾವು ಸಾರ್ವಜನಿಕ ಜೀವನದಲ್ಲಿ ಈ ತರಹ ಕ್ಯಾಸೆಟ್‌ಗಳನ್ನು ಮಾಡುವುದು, ಈ ತರಹ ಒಬ್ಬರ ರೂಮಿಗೆ ಒಬ್ಬರು ಹಾಕುವುದು, ಹೀಗೆ ಮಣ್ಣೆರಚುವಂತಹ ಕೆಲಸವನ್ನು ಮಾಡಿದರೆ, ಈ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ಅದಕ್ಕಾಗಿ ಮಾನ್ಯ ರಮೇಶ್‌ಕುಮಾರ್ ಏನು ಬೇಡಿಕೆಯನ್ನಿಟ್ಟಿದ್ದಾರೆ, ಇದರ ಬಗ್ಗೆ ತಾವು ದಯಮಾಡಿ ತನಿಖೆಯನ್ನು ಮಾಡಿಸಿ. ತಾವು ಈ ಸದನದ custodian ಯಾರೇ ಸದಸ್ಯರಿಗೆ ಈ ತರಹ ಆಗಲಿಕ್ಕೆ ಅವಕಾಶವನ್ನು ಕೊಡಬಾರದು, ಮತ್ತು ಇದಕ್ಕೆ ಸತ್ಯವಾದ ಅರ್ಥವನ್ನು ಕಂಡುಹಿಡಿಯಬೇಕು. ಅದನ್ನು ತಾವು ದಯಮಾಡಿ ಮಾಡಬೇಕು. ಈ ಒಂದು ತನಿಖೆಗೆ ಆದೇಶವನ್ನು ಮಾಡಬೇಕೆಂದು ನಾನು ಕೂಡ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ವೆಂಕಟೇಶ್‌ರವರು ವಿಷಾದವನ್ನು ವ್ಯಕ್ತಮಾಡಿದ್ದಾರೆ. ಮಾನ್ಯ ಖರ್ಗೆಯವರು ಮೊದಲು ಹೇಳಿದಾಗ ಅದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿದ್ದರು. ಹೇಗೆ ಬಂತು ಅದನ್ನು ಯಾವ ಉದ್ದೇಶಕ್ಕೋಸ್ಕರ ತೋರಿಸುತ್ತಿದ್ದರು.

ಈ ಮಾರ್ಡನ್ ಟೆಕ್ನಾಲಜಿಯನ್ನು ಬಳಸಿಕೊಂಡು ಈ ಸಿ.ಡಿ.ಗಳು ಈ ಫೋಟೋಗಳು ಅವು ಇವು ಎಂದು ತಯಾರು ಮಾಡಿ ಆರೋಪ ಪ್ರತ್ಯಾರೋಪ ಮಾಡುತ್ತಾರೆ ಎನ್ನುವ ಬಗ್ಗೆ ಅವರು ವಿಷಾದವನ್ನು ವ್ಯಕ್ತ ಮಾಡಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ, ನಮ್ಮ ಕಾರ್ಯಪಟ್ಟಿಯಂತೆ ತೆಗೆದುಕೊಳ್ಳೋಣ.

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈ ನಕಲಿ ಸಿ.ಡಿ.ಗಳು ಮತ್ತು ನಕಲಿ ಫೋಟೋಗಳ ಹಾವಳಿ ಪ್ರಾರಂಭವಾಗಿದೆ ಎಂದು ಚರ್ಚೆಗಳನ್ನು ಮಾಡುತ್ತಿದ್ದೀರಿ. ಸರ್ಕಾರ ಪ್ರಾಮಾಣಿಕವಾಗಿದೆ. ನಮ್ಮ ಮುಖ್ಯಮಂತ್ರಿಗಳು ಪ್ರಾಮಾಣಿಕವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆಂದು ಭಾವನೆ ನನಗೂ ಇದೆ. ಅದೇ ರೀತಿಯಲ್ಲಿ ವಿರೋಧ ಪಕ್ಷದಲ್ಲಿ ಅನೇಕ ವರ್ಷಗಳ ಸುದೀರ್ಘವಾದ ಅನುಭವ ಇರತಕ್ಕಂಥ ಮಾನ್ಯ ಖರ್ಗೆಯವರು ಹಾಗೂ ಧರ್ಮಸಿಂಗ್‌ರವರು ನಡೆದುಕೊಂಡು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ಮಾನ್ಯ ಸದಸ್ಯರಾದಂಥ ವೆಂಕಟೇಶ್‌ರವರು ಹೇಳಿದ ರೀತಿಯಲ್ಲಿ ಇಲ್ಲಿಯೂ ನಕಲಿ ಸಿ.ಡಿ.ಗಳ ರೀತಿಯಲ್ಲಿಯೇ ಇಲ್ಲಿಯೂ ಮಾಡಿರಬಹುದು. ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡುವವರನ್ನು ನೀವು ಯಾವ ರೀತಿಯಲ್ಲಿ ಮಾಡುತ್ತೀರೆಂದು ಹೇಳಿ ಅಭಿಪ್ರಾಯವನ್ನು ಇವತ್ತು ಯಾರೋ ಅವರ ರೂಮಿನಲ್ಲಿ ಹಾಕಿದಂಥ ಫೋಟೋಗಳ ಬಗ್ಗೆ ಹೇಳಿದ್ದಾರೆ. ಪ್ರಾಮಾಣಿಕವಾಗಿಯೇ ಸರ್ಕಾರ ನಡೆಯುತ್ತಿದೆ. ನಕಲಿ ಸಿ.ಡಿ.ಗಳ ಹಾವಳಿ ಇದೆ. Science and Technology ಯನ್ನು ಬಳಸಲಿ ಯಾರೋ ನಕಲಿ ಮಾಡುತ್ತಿದ್ದಾರೆ. ಅದೇ ರೀತಿ ಯಾರ್ಯಾರದ್ದೋ ಫೋಟೋಗಳನ್ನು ಸೇರಿಸಿ ವಿಡಿಯೋ ತೆಗೆದು ಆ ಫೋಟೋವನ್ನು ಇಲ್ಲಿ ಸೇರಿಸಿ ಆ ಫೋಟೋವನ್ನು ಅಲ್ಲಿ ಸೇರಿಸಿ ಮಾಡುತ್ತಿದ್ದಾರೆ ಎನ್ನುವ ವಾದವನ್ನು ಇಡುತ್ತಾ ನೀವು ನಕಲಿ ಸಿ.ಡಿ.ಗಳ ಹಾವಳಿಯನ್ನು ತಡೆಗಟ್ಟಲಿಕ್ಕೆ forensic science laboratory ಸರ್ಕಾರದ ಕಡೆಯೇ ಇದೆ. ಅ ನಕಲಿ ಸಿ.ಡಿ. ಯಾವ ರೀತಿ ಇದೆ ಎಂದು ಹೇಳಿ should you not subject the C.D.s to the Forensic science analysis? Don't you feel it is the question of credibility of the Government? ಈ ತರಹದ ವ್ಯವಹಾರಗಳು ನಡೆಯುತ್ತಿವೆಯೆಂದು ಹೇಳಿದ ಮೇಲೆ it is question of the credibility of the Government. Why don't you get it analysed through the Forensic Science Laboratory?

ಶ್ರೀ ಹೆಚ್. ಆಂಜನೇಯ: ಮಾನ್ಯ ಮಹಾದೇವಪ್ಪನವರೆ ಆ ಜನಾರ್ಧನರೆಡ್ಡಿ ಆ ಸಿ.ಡಿ.ಗಳನ್ನು ಕೊಡಬೇಕಲ್ಲಾ?

ಶ್ರೀ ಹೆಚ್.ಸಿ. ಮಹಾದೇವಪ್ಪ: ಸಿ.ಡಿ.ಗಳು ಎಲ್ಲಿ ಬೇಕಾದಲ್ಲಿ ಸಿಗುತ್ತವೆ. ಸರ್ಕಾರ ಪ್ರಾಮಾಣಿಕವಾಗಿದೆ. ಇವರೂ ಪ್ರಾಮಾಣಿಕರಾಗಿದ್ದಾರೆ. ಆ ತರಹದ ಆಟಗಳನ್ನು ಎಷ್ಟು ದಿವಸ ನಡೆಸಿಕೊಂಡು ಹೋಗಬಹುದು. ಜನ ಏನು ಹೇಳುತ್ತಾರೆ. Don't you think it is the question of integrity of the Nation.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಾ: ಹೆಚ್.ಸಿ. ಮಹದೇವಪ್ಪನವರು ಬಹಳ ಉತ್ತಮವಾದಂತಹ ಮಾತನ್ನು ಹೇಳುತ್ತಾ ಇದ್ದಾರೆ. ನಾವು ರಾಜಕಾರಣದಲ್ಲಿ ಯಾವ ಮಟ್ಟಕ್ಕೆ ಬಂದಿದ್ದೇವೆಂದರೆ, ಯಾರ ಮೇಲಾದರೂ ಒಂದು ಸಣ್ಣ ಆಪಾದನೆ ಬಂದರೆ ಅದರ ಸತ್ಯಾಸತ್ಯತೆಯನ್ನು ಶೋಧಿಸಿದಂತೆ ತತ್‌ಕ್ಷಣದಲ್ಲಿ ಅದರ ಬಗ್ಗೆ ನಾವು ಆಪಾದನೆಯನ್ನು ಮಾಡುವುದಕ್ಕೆ ತಯಾರಾಗುತ್ತೇವೆ. ಅವರು ವಿರೋಧ ಪಕ್ಷದವರು ಇದ್ದಾರೆನ್ನುವಂತಹ ಒಂದೇ ಕಾರಣಕ್ಕಾಗಿ ಅಥವಾ ಅವರು ಆಡಳಿತ ಪಕ್ಷದಲ್ಲಿ ಇದ್ದಾರೆನ್ನುವಂತಹ ಒಂದೇ ಕಾರಣಕ್ಕಾಗಿ ನಮ್ಮ ಮೇಲೆ ಒಂದು ಆಪಾದನೆಯನ್ನು ಮಾಡುವಾಗ ಅಥವಾ ವಿಚಾರವನ್ನು ಚರ್ಚೆ ಮಾಡುವಾಗ ಅದರ ಸತ್ಯಾಸತ್ಯತೆಯನ್ನು ಏನು ಎನ್ನುವುದರ ಬಗ್ಗೆ ಕೂಡ ಯೋಚನೆಯನ್ನು ಮಾಡದೆ ಈ ತರಹದಲ್ಲಿ ಪರಸ್ಪರವಾಗಿ ಕೆಸರನ್ನು ಎರಚಾಡುವಂತಹ ಕಾರಣದಿಂದಾಗಿ ರಾಜಕಾರಣಿಗಳ ಬಗ್ಗೆ ಸಂಪೂರ್ಣವಾದಂತಹ ವಿಶ್ವಾಸವನ್ನು ಜನರು ಕಳೆದುಕೊಳ್ಳುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ತಾವು ನಿಯಮ 60ರ ಕೆಳಗಡೆ ಕೊಟ್ಟಿರುವಂತಹ ನೋಟೀಸ್‌ನ್ನು ತಾವು ನೋಡಬಹುದು. ಕೆಲವರು ಯಾರೋ ಸಿ.ಡಿ.ಯನ್ನು ನೋಡಿರುವಂತಹವರು ಅನೇಕ ಜನ ಇದ್ದಾರೆ. ಅದರಲ್ಲಿ ಮಾನ್ಯ ಕುಮಾರಸ್ವಾಮಿಯವರ ಹಾಗೂ ಮಾನ್ಯ ಅಶೋಕ್‌ರವರ ಹೆಸರು ಇಲ್ಲ. ಮಾನ್ಯ ಮುಂತ್ರಿಗಳಾದ ಆಶೋಕ್‌ರವರ ಹೆಸರನ್ನೇ ಪ್ರಸ್ತಾಪ ಮಾಡಿಲ್ಲ. ಆ ಸಿ.ಡಿ.ಯಲ್ಲಿ ಅದು ಇಲ್ಲ. ಆದರೆ ಇಲ್ಲಿ ನೋಟೀಸ್‌ನಲ್ಲಿ ಅವರ ಹೆಸರು ಬರುತ್ತದೆ. ಮತ್ತೆ ಅವರು land grant ಸಮಿತಿಯ ಅಧ್ಯಕ್ಷರಾಗಿ ಅಲ್ಲಿರತಕ್ಕಂತಹ ಎಲ್ಲಾ ಅರ್ಜಿಗಳನ್ನು ತಿರಸ್ಕಾರ ಮಾಡಬೇಕೆಂದು ಬರೆದಿರುವುದು ಇದೆ. ಹೈಕೋರ್ಟ್‌ನವರು ಅವರಿಗೆ ಅದನ್ನು ಕೊಡಬೇಕೆಂಬ ವಿಚಾರ ಇದ್ದಾಗ್ಯೂ ಕೂಡ ತಿರಸ್ಕಾರ ಮಾಡಬೇಕು ಎಂದು ಬರದಂತಹದ್ದೂ ಕೂಡ ಇದೆ. ಇದರ ಜೊತೆಗೆ ಈ ಭೂಮಿಯನ್ನು ಇವರಿಗೆ ಕೊಡಬೇಕೆಂದು ಶಿಫಾರಸ್ಸು ಮಾಡಿರುವವರು ಯಾರ್ಯಾರು ಎಂದು ಗೊತ್ತಿರುವಾಗ ನಿನ್ನೆ ರಾತ್ರಿ 9.30 ಗಂಟೆಗೆ ಬಂತು ಬೆಳಿಗ್ಗೆ ಇವರುಗಳು ಮುಜುಗರಕ್ಕೆ ಸಿಲುಕಿದರೆ ಸಾಕು ಎಂದು ಮಾಡಿದ್ದಾರೆ. ಯಾರು ಈ ಸತ್ಯಾಸತ್ಯತೆಯನ್ನು ನೋಡಿದ್ದಾರೆ? ಆಪಾದನೆಯನ್ನು ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ತಾಳ್ಮೆ, ಸ್ವಲ್ಪ ವಿವೇಚನೆ, ಇದು ಎಷ್ಟು ನೈಜವಾದುದು, ಇದರ ಬಗ್ಗೆ ನಾವು ಯೋಚನೆ ಮಾಡಬೇಕಲ್ಲವೆ? ನಮ್ಮ ಮೇಲೆ ನೀವು, ನಿಮ್ಮ ಮೇಲೆ ನಾವು ಇದನ್ನು ಮಾಡುತ್ತಾ ಹೋದರೆ, ಇದು ಪರ್ಯಾವ್ಯಸನವಾಗುವುದು ಯಾವುದು? ಎಲ್ಲಿಯವರೆವಿಗೆ ಇದರ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ದಯವಿಟ್ಟು ತಾವು ಬಹಳ ಮುಖ್ಯವಾದಂತಹ ವಿಷಯವನ್ನು ಎತ್ತಿದ್ದೀರಿ ನಮಗೆಲ್ಲರಿಗೂ ಕೂಡ ನೈತಿಕವಾದಂತಹ ಜವಾಬ್ದಾರಿ ಇದೆ. ಯಾವುದಾದರೂ ಇಂತಹ ವಿಚಾರಗಳು ಬಂದ ತಕ್ಷಣವೇ

ಸತ್ಯಾಸತ್ಯತೆಯ ಬಗ್ಗೆ ಯೋಚನೆಯನ್ನು ಮಾಡಿ ಅದರ ಬಗ್ಗೆ ಮಾಡಬೇಕೇ ವಿನಃ one up man ship ಎಂದು ಹೇಳಿ ಯಾರ ಮೇಲೆ ಗೂಬೆ ಕೂರಿಸುವುದಕ್ಕೆ ಎಲ್ಲಾ ಅಸ್ತ್ರಗಳನ್ನು ಬಳಸುತ್ತೇವೆಂದರೆ ಆ ಹಿಂದೆಯೂ ಕೂಡ ಅಸ್ತ್ರಗಳನ್ನು ಬಳಸುವುದಕ್ಕೂ ಕೂಡ ಯುದ್ಧದಲ್ಲಿ ಕೆಲವು ನಿಯಮಾವಳಿಗಳು ಇದ್ದವು. ಯಾವಾಗ ಗಾಂಢೀವ ಅಸ್ತ್ರವನ್ನು ಬಳಸಬೇಕೆಂದು ಅರ್ಜುನನಿಗೆ ಹೇಳಿಕೊಡುತ್ತಿದ್ದರು. ಹಾಗೆ ನಾವು ಪ್ರತಿಯೊಂದಕ್ಕೂ ಗಾಂಢೀವಸ್ತ್ರವನ್ನು ಬಳಸಿಕೊಳ್ಳುತ್ತಾ ಹೋದರೆ ಇವರು ಯಾವ ಮಟ್ಟಕ್ಕೆ ಹೋಗುತ್ತಾರೆಂಬುದರ ಬಗ್ಗೆ ತಾವು ಯೋಚನೆ ಮಾಡಬೇಕು. ಆ ದೃಷ್ಟಿಯಿಂದ ಇವತ್ತು ನಾನು ಹಿರಿಯರಾಗಿರತಕ್ಕಂತಹ ಮಾನ್ಯ ಧರ್ಮಸಿಂಗ್‌ರವರಿಗೆ, ಹಾಗೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಸುಮಾರು ತಮ್ಮ ದೀರ್ಘಾವಧಿಯ ಕಾಲದಲ್ಲಿ ಸದನದಲ್ಲಿ ನಡೆದಿರತಕ್ಕ ಇಂತಹ ಅನೇಕ ಘಟನೆಗಳನ್ನು ಮತ್ತು ಬಿಕ್ಕಟ್ಟುಗಳನ್ನು ತಾವು ನೋಡಿದ್ದೀರಿ. ದಯವಿಟ್ಟು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ಅದರ ಬಗ್ಗೆ ಪರ್ಯಾಯವಾದಂತಹ ಅವಕಾಶಗಳನ್ನು ಉಪಯೋಗಿಸಿಕೊಂಡು ಕ್ರಮ ಕೈಗೊಳ್ಳಬಹುದು. ದಯವಿಟ್ಟು ಇದನ್ನು ಮುಕ್ತಾಯಗೊಳಿಸಿ ಬೇರೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಅವರು ವಿಷಾದ ಮತ್ತು ಕ್ಷಮೆಯನ್ನು ಕೇಳಿರುವಂತಹ ಹಿನ್ನೆಲೆಯಲ್ಲಿ ತಾವು ದೊಡ್ಡ ಮನಸ್ಸು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಾ: ಹೆಚ್.ಸಿ. ಮಹದೇವಪ್ಪನವರು ಮಾತನಾಡುವಂತಹ ಕಾಲದಲ್ಲಿ ಈ ಫೋಟೋ ನಕಲಿ ಎಂದು ಹೇಳಿದರು. ನಕಲಿ ಎಂದು ತಮಗೆ ಹೇಗೆ ಗೊತ್ತು? ಅದು ನಕಲಿ ಫೋಟೋ ಅಥವಾ ಓರಿಜಿನಲ್ ಫೋಟೋ ಎಂದು ತಮಗೆ ಹೇಗೆ ಗೊತ್ತು? ನಕಲಿ ಫೋಟೋ ಎಂದು ಏತಕ್ಕೆ ಹೇಳಿದಿರಿ. ತಾವು ಮಾತನಾಡುವ ಸಮಯದಲ್ಲಿ ಫೊಟೋ ಎಂದು ಹೇಳಬೇಕು. ಈ ನಕಲಿ ಫೋಟೋ ಎಂದು ನಿಮಗೆ ಹೇಗೆ ಗೊತ್ತಿದೆ?

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾವು ಡಿಮ್ಯಾಂಡ್ ಮಾಡಿದ್ದು ಅಪಾಲಜಿ ಅಥವಾ prosecution. ಈಗಾಗಲೇ ಗೌರವಾನ್ವಿತ ಸದಸ್ಯರಾದ ವೆಂಕಟೇಶ್‌ರವರು ಅಪಾಲಜಿ ಕೇಳಿದ್ದಾರೆ. ಈ ವಿಷಯವನ್ನು ಇಲ್ಲಿಗೆ ಬಿಡಿ ಎಂದು ಹೇಳಿದ್ದಾರೆ. ಸನ್ಮಾನ್ಯ ಶ್ರೀ ವೆಂಕಟೇಶ್‌ರವರು ಎರಡು–ಮೂರು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಒಂದು ವಿಚಾರ ಏನು ಹೇಳಿದ್ದಾರೆಂದರೆ, ನನ್ನ ರೂಮಿನಲ್ಲಿ ಈ ಫೋಟೋ ಬಿದ್ದಿತ್ತು, ಈಗ ಮಾನ್ಯ ಸದಸ್ಯರಾದ ರಾಜೇಂದ್ರನ್‌ರವರು ಹೇಳಿದ ಹಾಗೆ ಫೋಟೋ ಬಿದ್ದಿದ್ದು ಅದು genuine ಇದೆಯೋ ಅಥವಾ ನಕಲಿ ಇದೆಯೋ ಎಂದು ಅವರಿಗೂ

ಗೊತ್ತಿಲ್ಲ. ಅದರ ಬಗ್ಗೆ ಎನ್‌ಕ್ವಾಯರಿ ಆಗಬೇಕು. Genuine ಇದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತಲ್ಲವೆ? ಎರಡನೆಯ ವಿಚಾರ ಹೇಳಿದರು. ಧರ್ಮಸಿಂಗ್‌ಗೆ ಈ ಸ್ಥಾನದಲ್ಲಿ ಅವರೇ ಕಂಟಿನ್ಯೂ ಆಗಬೇಕು. ಈ ಸ್ಥಾನದಿಂದ ಅವರನ್ನು ವಜಾ ಮಾಡುವುದಕ್ಕೆ ಕಾಂಗ್ರೆಸ್ ಮುಖಂಡರು ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದರು. ಹಾಗಾಗಿ ಈ ಫೋಟೋ source ನಿಜವಾಗಿ ಗೊತ್ತಾದರೆ, ಕಾಂಗ್ರೆಸ್ ಮುಖಂಡರು ಇರಬಹುದಲ್ಲಾ ಈ ಫೋಟೋ ಮಾಡಲಿಕ್ಕೆ ಸತ್ಯ ಹೊರಗೆ ಬರುತ್ತದೆ. ಕಾಂಗ್ರೆಸ್ ಮುಖಂಡರು ಇದ್ದಾರೋ ಮತ್ತೊಂದು ಪಾರ್ಟಿಯ ಮುಖಂಡರು ಇದ್ದಾರೋ ಮತ್ಯಾರೋ ಇದ್ದಾರೋ ಅಧಿಕಾರದಲ್ಲಿರುವ ಜನರು ಇದ್ದಾರೋ? ಎಂಬ ಸತ್ಯ ಹೊರಗೆ ಬರುತ್ತದೆ. ಸತ್ಯ ಹೊರಗೆ ಬರಬೇಕಾದರೆ ನಿಜವಾದ source ಫೋಟೋದ್ದು ಯಾವುದು? Genuine ಫೋಟೋ ಇದೆಯಾ? ಸುಳ್ಳು ಫೋಟೋ ಇದೆಯೋ? ನಕಲಿ ಇದೆಯೋ? ಎಲ್ಲಿ ತಯಾರಾಯಿತು, ಏಕೆ ತಯಾರಾಯಿತು, ಯಾರು ತಯಾರು ಮಾಡಿದ್ದಾರೆ ಎಂಬುದು ಗೊತ್ತಾಗಬೇಕು. ಅದನ್ನು ಮಾಡುವುದಕ್ಕೆ ಸಾಧ್ಯ. ಮತ್ತೊಂದು ಮಾತನ್ನು ಮಾನ್ಯ ವೆಂಕಟೇಶ್‌ರವರು ಹೇಳಿದರು. ಈ ಧರ್ಮಸಿಂಗ್ ಸರ್ಕಾರವನನು ಕಾಂಗ್ರೆಸ್‌ನವರು ತೆಗೆದರು ಎಂದು ಹೇಳಿದರು. ಗೌರವಾನ್ವಿತ ಸದಸ್ಯರು ಇವತ್ತು ಇಲ್ಲ. ಗೌರವಾನ್ವಿತ ಮಾಜಿ ಪ್ರಧಾನ ಮಂತ್ರಿಗಳು ಮೊನ್ನೆ ಮೊನ್ನೆ ಹೇಳಿದ್ದಾರೆ. ನಾನೇ ಹೇಳಿ ಕಾಂಗ್ರೆಸ್‌ನಿಂದ ದೂರಮಾಡಿ ಜೆಡಿಎಲ್ ಮಾಡಿದ್ದೇನೆ. ಜೆಡಿ (ಎಸ್) ಮತ್ತು ಕಾಂಗ್ರೆಸ್ ಸರ್ಕಾರ ಇದ್ದಾಗ ಕಾಂಗ್ರೆಸ್‌ದಿಂದ ನಮಗೆ ಸರಿಯಾದ ಸಹಕಾರ ಸಿಗಲಿಲ್ಲ, ಹಾಗಾಗಿ ನಾವೇ ಕಾಂಗ್ರೆಸ್‌ನಿಂದ ದೂರವಾಗಿದ್ದೇವೆ. ಇದನ್ನು ಜೆಡಿ(ಎಸ್) ನಾಯಕರು ಹೇಳಿದ್ದಾರೆ. ಅವರು ಹಾಗೆ ಹೇಳಿದಾಗ ವೆಂಕಟೇಶ್‌ರವರು ಇಲ್ಲಿಗೆ ಬಂದು ಕಾಂಗ್ರೆಸ್ ಕಾರಣವೆಂದು ಅಪಾದನೆ ಮಾಡಲು ಅಧಿಕಾರವೇನಿದೆ? Atleast ಅವರು ಈ ರೀತಿ ಅಪಾದನೆಯನ್ನು ಮಾಡಬಾರದು. ಇದು ಉತ್ತರ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಚಿಂತನೆಯಾಗಬೇಕಾಗಿದೆ. ಸಾಕಷ್ಟು ಬೆಳಕನ್ನು ಚೆಲ್ಲಬೇಕಾಗಿದೆ. ಬರಗಾಲ, ಡಾ: ನಂಜುಂಡಸ್ವಾಮಿ ವರದಿಯ ಬಗ್ಗೆ ಚರ್ಚೆಯಾಗಬೇಕಾಗಿದೆ. ಹಾಗಾಗಿ ನಮ್ಮದೇನೂ ತಕರಾರು ಇಲ್ಲ, ಇನ್ನು ಎರಡು ಮೂರು ದಿವಸ ಕುಳಿತುಕೊಂಡರೆ ಅದಕ್ಕೆ ನಾವು ತಯಾರಿದ್ದೇವೆ. ಆದರೆ ನಮ್ಮ ಗಮನಕ್ಕೆ ಮಾನ್ಯ ಪ್ರಕಾಶ್‌ರವರೆ, ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಯಲ್ಲಿ ಆಗಬೇಕಾಗಿತ್ತು. ಅದು ಆಗಬಾರದು ಬೆಂಗಳೂರಿನಲ್ಲಿ ಇರಬೇಕೆಂದು ಹೇಳಿ ನಿಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಕೋರ್ಟಿಗೆ ಹೋಗಿದ್ದರು, ಇದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರ ಹೆಸರನ್ನು ಹೇಳುವುದು ಬೇಡ, ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಯಲ್ಲಿ ಆಗಬೇಕಾದ್ದು ಉತ್ತರ ಕರ್ನಾಟಕದಲ್ಲಿ ಆಗಬಾರದೆಂದು ಬೆಂಗಳೂರಿನಲ್ಲಿ ಇರಬೇಕೆಂದು ನಿಮ್ಮ ಪಾರ್ಟಿಯ ಜನರು

ಕೋರ್ಟಿಗೆ ಹೋಗಿದ್ದರು. ಹಾಗಾಗಿ ಮಾನ್ಯ ಪ್ರಕಾಶ್‌ರವರು ಹೇಳಿದ ಹಾಗೆ, ನಿಜವಾದ ಬೆಳಕು ಚೆಲ್ಲಬೇಕು. ನಾವು ನಿಮ್ಮ ಮೇಲೆ ಆಪಾದನೆ ಮಾಡುವುದು ಅವರು ನಮ್ಮ ಮೇಲೆ ಆಪಾದನೆ ಮಾಡುವುದು ಅರ್ಥವಿಲ್ಲ. ಸತ್ಯ ಹೊರಗೆ ಬರಬೇಕಾದರೆ ನಿಜವಾದ source ಫೋಟೋದ್ದು ಯಾವುದು ಎಂಬ ಬಗ್ಗೆ ತಾವು ಅದರ ಎನ್‌ಕ್ವಾಯರಿಗೆ ಆದೇಶ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ದಯಮಾಡಿ ಹೋಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಇವರು ಧರಣಿಗೆ ಕುಳಿತಿದ್ದಾರೆ, ಅವರು ಭಾಷಣ ಹೊಡದೆ ಹೊಡೆಯುತ್ತಿದ್ದಾರೆ. ಇದನ್ನು ಸಭೆ ಎಂದು ಕರೆಯಬೇಕಾ? ನೀವು ಇಷ್ಟು ವರ್ಷ ಆಡಳಿತ ಮಾಡಿದ್ದು ಇದೆ ಕೆಲಸನಾ? ಸ್ವಾತಂತ್ರ್ಯ ಬಂದಾಗಿನಿಂದಲೂ ಆಡಳಿತ ಮಾಡಿದ್ದು ಇದೆನಾ? ಇಷ್ಟು ವರ್ಷದಿಂದ ಆಡಳಿತ ಮಾಡಿದ್ದೀರಿ; ಇದೇ ಬದುಕು ಮಾಡಿದ್ದಾ ಅಂತ ಎಂದೆ. ಬಹಳ ವರ್ಷದಿಂದ ಧರಣಿ ಕುಳಿತಂತೆ ಕಾಣುತ್ತದೆ. ಕೊನೆಯತನಕವು ಧರಣಿನೇ ನಿಮ್ಮದು. ಬೇರೆ ಗತಿ ಇಲ್ಲ ನಿಮಗೆ.

ಅಧ್ಯಕ್ಷರು: ಈ ರೀತಿಯಾದರೆ ಹೇಗೆ ಎಂದು ನನಗೆ ಗೊತ್ತಿಲ್ಲ. ಏನೆಂದರೆ ಇಲ್ಲಿ ಎಲ್ಲರೂ ತಮ್ಮ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳಬೇಕು. ಅವರು ಹೇಳಿದ ರೀತಿಯಲ್ಲಿ ಈ ಸಭೆ ನಡೆಯಬೇಕು. ಅವರು ಹೇಳಿದ್ದು ಆಗಬೇಕು. ಈ ತರಹ ಆದರೆ ಬಹುಶಃ ಈ ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲರೂ ಗಳಿಗೆ ಒಂದೊಂದು ತರಹ ಮಾತನಾಡುತ್ತಾರೆ. ಮಾನ್ಯ ಖರ್ಗೆಯವರೆ, ಹೇಳಿ. ನನಗೆ ಏನೂ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ಚರ್ಚೆ ಈ ಒಂದು ಫೋಟೋವನ್ನು ಪ್ರದರ್ಶನ ಮಾಡಿತಕ್ಕಂಥದ್ದರ ಮೇಲೆ ಆಗಿದೆ. ಅದು ಗೃಹ ಸಚಿವರೂ ಕೂಡ ಅದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಅವರು ಸ್ವತಃ ಇಂತಹ ಅಚಾತುರ್ಯ ಘಟನೆ ನಡೆಯಬಾರದಾಗಿತ್ತು ನಡೆದಿದೆ. ಇಂತಹ ಫೋಟೋಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ, ಯಾವ ರೀತಿಯಾಗಿ ನಕಲಿ ಸಿ.ಡಿ.ಗಳನ್ನು ಮಾಡಬಹುದು ಅದೇ ರೀತಿಯಾಗಿ ಬಹುಶಃ ಅದನ್ನು ಪ್ರದರ್ಶನ ಮಾಡುವುದಕ್ಕೆ ಇಲ್ಲಿ ಅವರು ತಂದಿರಬಹುದು ಎನ್ನುವಂಥ ಮಾತು ಈ ಹಿಂದೆ ಮಾತನಾಡಿದಾಗ ಪ್ರೋಸಿಡಿಂಗ್ಸ್‌ನಲ್ಲಿ ಬಂದಿದೆ. ಅದು ಹೆಚ್ಚು ಕಡಿಮೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಅವರ ಮಾತಿನ ಭರದಲ್ಲಿ

ಅವರು ಕೂಡ ಈ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಹೆಚ್ಚು ಬಳಸುವುದಕ್ಕೆ ಹೋಗುವುದಿಲ್ಲ. ಮತ್ತು ಈಗಾಗಲೇ ಮಾನ್ಯ ವೆಂಕಟೇಶ್‌ರವರು ಕ್ಷಮಾಯಾಚನೆ ಮತ್ತು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಮಾನ್ಯ ಧರಂಸಿಂಗ್ ಹಾಗೂ ನಮ್ಮ ಬಗ್ಗೆ ಇರತಕ್ಕಂಥ ಗೌರವ ಅಭಿಮಾನವನ್ನೂ ಸಹ ವ್ಯಕ್ತಿಪಡಿಸಿದ್ದಾರೆ. ಅದಕ್ಕಾಗಿ ವೈಯಕ್ತಿಕವಾಗಿ ಅವರ ಬಗ್ಗೆ ನನ್ನದೇನೂ ದೋಷಾರೋಪಣೆ ಇಲ್ಲ ಮತ್ತು ಆಕ್ಷೇಪಣೆಯೂ ಇಲ್ಲ, ಆದರೆ ನನ್ನದು ಒಂದೇ ಒಂದು ನೋವು ಏನೆಂದರೆ ಇಂತಹ ಪ್ರಸಂಗಗಳು ಈ ಸದನದಲ್ಲಿ ಆಗಬಾರದು, ಏಕೆಂದರೆ ಅನೇಕ ನಾವು ಎದುರಿಸುವಂತಹ ಸವಾಲುಗಳು ಬರುತ್ತವೆ, ಆ ಸವಾಲುಗಳನ್ನು ಎದುರಿಸಬೇಕೇ ಹೊರತಾಗಿ ಸಾರಿ ಆ ಸವಾಲನ್ನು ಎದುರಿಸಲಿಕ್ಕೆ ಬಂದಿದ್ದಕ್ಕಾಗಿ ನಾವು escape mark ಹುಡುಕಬಾರದು, ಸವಾಲು ಬಂದಾಗ ನಾವು ಅದನ್ನು ಎದ್ದು ನಿಂತು ಅದಕ್ಕೇನು ಬರುತ್ತದೋ ಅದನ್ನು ತೆಗೆದುಕೊಂಡು ಅದಕ್ಕೆ face ಮಾಡುವಂಥ ಶಕ್ತಿಯನ್ನು ತೋರಿಸಬೇಕು. ಆ ಧೈರ್ಯವನ್ನು ತೋರಿಸಬೇಕು, ಅದನ್ನು ಬಿಟ್ಟು ಹೀಗಾಗಿದೆ, ಅದನ್ನು ನೀವು ಮಾಡಿದ್ದೀರಿ ಎಂದು ಹೇಳುವುದು ಅಷ್ಟು ಸಮಂಜಸವಾಗುವುದಿಲ್ಲ, ಇನ್ನು ಮೇಲಾದರೂ ಕೂಡ ಇಂಥ ಚಾರಿತ್ರವಧೆಯನ್ನು ನಿಲ್ಲಿಸಬೇಕು. ಯಾರ್‍ಯಾರು ಯಾವ್ಯಾವ ಸಂದರ್ಭದಲ್ಲಿ ಮಾತನಾಡುತ್ತಾರೆ ಆ ಸಂದರ್ಭಕ್ಕನುಸಾರವಾಗಿ ನೀವು ತೆಗೆದುಕೊಳ್ಳಬೇಕೇ ವಿನಃ ಅದನ್ನು ಬಿಟ್ಟು ಅದಕ್ಕೋಸ್ಕರ ನಾನು ಇದನ್ನು ಮಾಡಿದೆ, ಇದಕ್ಕೋಸ್ಕರ ನಾನು ಅದನ್ನು ಮಾಡಿದೆ ಎನ್ನುವುದು ಸರ್ವಥಾ ಸರಿಹೋಗುವುದಿಲ್ಲ. ಇದರಿಂದ ಇಡೀ ಪ್ರಜಾಪ್ರಭುತ್ವದ ಸಂಸ್ಥೆ, ಪ್ರಜಾಪ್ರಭುತ್ವ ತತ್ವದ ಮೇಲೆ ಒಂದು ಕಳಂಕ ಬರುತ್ತದೆ, ಬೇಕಾದರೆ ಏನಾದರೂ ಮಾತನಾಡಬಹುದು, ಹೋಗಬಹುದು, ಯಾರು ಬೇಕಾದರೂ ಒಂದು ಆಪಾದನೆ ಬಂದ ತಕ್ಷಣ ಒಂದು ದಾಖಲೆಯನ್ನು ತಯಾರು ಮಾಡಿ ನಾವೇ ಪ್ರಚಾರ ಮಾಡುವಂತಹದ್ದು ಆಗುತ್ತದೆ, ಆದರೆ ಇದರ ಹಿನ್ನೆಲೆ ಏನಿದೆ ಏತಕ್ಕೆ ಅವರು ಮಾತನಾಡುತ್ತಿದ್ದಾರೆಂದು ತಿಳಿದುಕೊಂಡು ಮಾಡಿದ್ದರೆ ಅದೊಂದು ರೀತಿ. ಆದರೆ ಅದು ಏನೇ ಇರಲಿ, ಈಗ ಮಾನ್ಯ ವೆಂಕಟೇಶ್‌ರವರು ಸ್ವಲ್ಪ 80% ಸತ್ಯವನ್ನು ಹೇಳಿ 20% ಸುಳ್ಳನ್ನು ಹೇಳಿದ್ದಾರೆ. ನಿಜವಾಗಿ ಅವರ ಆತ್ಮಸಾಕ್ಷಿಯಾಗಿ ಹೇಳಲಿಲ್ಲ. ಏಕೆ ಹೀಗೆ ಮುಚ್ಚಿಡುತ್ತಿದ್ದಾರೆಂಬುದು ಗೊತ್ತಿಲ್ಲ. ಅದಕ್ಕೆ ಮತ್ತೊಂದು ಸುಳ್ಳನ್ನು ಸತ್ಯ ಮಾಡಲಿಕ್ಕೆ ಮತ್ತೊಂದು ಸುಳ್ಳು ಹೇಳುವುದು ಬೇಡ, ಈಗ ಆಯಿತು, ಅವರ ರೂಮಿನಲ್ಲೇ ಬಿದ್ದಿತ್ತೋ, ಎಲ್ಲೋ ಬಿದ್ದಿತ್ತೋ, ಹೇಗೋ? ಈಗೇನಾಗುತ್ತದೆ, ನಾವು ಅವರಿಗೆ ಪ್ರಾಸಿಕ್ಯೂಟ್ ಮಾಡಿ ಅವರ ಮೇಲೆ ಕೇಸ್ ಮಾಡಿ ಎಂದು ಇದನ್ನು ಮುಂದುವರೆಸಿ ಎಂದು ಹೇಳುವುದಿಲ್ಲ, ಆದರೆ ಅದರ ಸತ್ಯಾಂಶವನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ, ಏಕೆಂದರೆ ಕನಿಷ್ಠ ಪಕ್ಷ ಇಂಥ ಘಟನೆಗಳು ಪುನರಾವರ್ತನೆಯಾಗಬಾರದು. ಇವತ್ತು ನನ್ನ ಮೇಲೆ

ಆಗಿದೆ, ನಾಳೆ ಮಾನ್ಯ ಪ್ರಕಾಶ್‌ರವರ ಮೇಲೆ ಆಗಬಹುದು. ಮತ್ತೊಬ್ಬರ ಮೇಲೆ ಆಗಬಹುದು, ಅದಕ್ಕೆ ಈ ವಿಷಯ ತಮ್ಮಲ್ಲಿ ಪ್ರಸ್ತಾಪ ಆಗಿಲ್ಲ. ಅಥವಾ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂಥ ವಿಷಯ ನಿಮ್ಮ ಮುಂದೆ ಪ್ರಸ್ತಾಪ ಆಗಿಲ್ಲ, ಅಥವಾ ನಾವ್ಯಾರೂ ಇಂಥ ದಾಖಲೆಗಳನ್ನು ಸಿ.ಡಿ.ಗಳನ್ನು ಇಲ್ಲಿ ತಂದು ನಿಮಗೆ ಹೇಳುವಂತೆ ಪ್ರಯತ್ನ ಮಾಡಿಲ್ಲ. ತಾವು ಯಥಾಸ್ಥಿತಿಯಲ್ಲಿ ಪತ್ರಿಕೆಯಲ್ಲಿ, ಮಾಧ್ಯಮದಲ್ಲಿ ಬಂದಿದ್ದನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಅದನ್ನು ಅವರು ಅಲ್ಲಗಳೆದರು, ಪುನಃ ನಾವು ಅದನ್ನು insist ಮಾಡುತ್ತಿದ್ದೇವೆ. ಆ ಮಾತು ಬೇರೆ. ಆದರೆ ಇಲ್ಲಿ ಯಾರು ಇದನ್ನು ತಂದಿದ್ದಾರೆ ಅವರು ಈ ಸದನದಲ್ಲಿದ್ದಾರೆ, ಆದರೆ ಅವರು ಹೇಳುವುದೇನು? ಅದು ನಮ್ಮ ರೂಮಿನಲ್ಲಿತ್ತು, ಯಾರೋ ತಂದು ಬಿಸಾಕಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಅಪೀಲ್ ಮಾಡಿಕೊಳ್ಳುತ್ತೇನೆ. In the interest of democratic institution, in the interest of the members of the Legislature. ನಮ್ಮೆಲ್ಲರ interestನಲ್ಲಿ ತಾವು ದಯವಿಟ್ಟು ಅದರ investigation ಮಾಡಿ ಅದರ ಮೂಲ ಎಲ್ಲಿ, ಹೇಗೆ ಅದು ರೂಮಿಗೆ ಬಂತು. ಇಡೀ premisesನಲ್ಲಿ ಪ್ರತಿಯೊಬ್ಬರ ರೂಮಿನಲ್ಲಿ ಪೊಲೀಸ್ ಹಾಗೂ ಸಿ.ಐ.ಡಿ.ಗಳಿದ್ದಾರೆ, ಅದರಲ್ಲಿಯೂ ವಿಶೇಷವಾಗಿ ವಿರೋಧ ಪಕ್ಷದ ಮುಖಂಡರಿರುವ ಜಾಗದಲ್ಲಿ ಏನೋ ಮಾತನಾಡುತ್ತಾರೋ? ಏನೋ ನಡೆಯುತ್ತದೋ ಎನ್ನತಕ್ಕಂಥ ದೃಷ್ಟಿಯಿಂದ ಮಫ್ತಿಯಲ್ಲಿ ಹತ್ತಾರು ಪೊಲೀಸರು ಇದ್ದಾರೆ. ಅದಕ್ಕಾಗಿ ಆ ಪೊಲೀಸ್ ನಿದ್ದೆ ಮಾಡುತ್ತಿದ್ದರೇ? ಆ ಜನ ಏನು ಮಾಡುತ್ತಿದ್ದರೂ? ಯಾರೋ ಒಬ್ಬರು ಬಂದು ಇಂಥ ಪ್ರಿಮಿಸಸ್‌ನಲ್ಲಿ ನೂರು ಜನರು ಒಂದೇ ಹಾಸ್ಟೆಲ್‌ನಲ್ಲಿದ್ದು ಅಥವಾ ಯಾವುದೇ ಒಂದು ಹೋಟೆಲ್‌ನಲ್ಲಿದ್ದರೂ ಕೂಡ ಹತ್ತಿಪ್ಪತ್ತು ಜನ ಒಂದೇ ಕಡೆ ಇರುವಾಗ ಇಲ್ಲ ಅವರೇ ಸ್ವತಂತ್ರವಾಗಿ ಮನೆ ಮಾಡಿ ಅಲ್ಲಿ ಯಾರೂ ಹೋಗದಿರುವ ಕಡೆ ಇದ್ದಿದ್ದರೆ ಆ ಮಾತು ಬೇರೆ. ನನಗೆ ಗೊತ್ತಿಲ್ಲ, ಇದು ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಅಥವಾ ಪಬ್ಲಿಕ್ ಇನ್‌ಸ್ಟಿಟ್ಯೂಷನ್ ಇಂಟರೆಸ್ಟ್‌ನಲ್ಲಿ ನಮ್ಮ ಲೆಜಿಸ್ಲೇಚರ್ಸ್‌ನ ಹಿತದೃಷ್ಟಿಯಿಂದ, ನಮ್ಮ ಪ್ರಿವಿಲೇಜ್ ದೃಷ್ಟಿಯಿಂದ ತಾವು ಇದನ್ನು ದಯವಿಟ್ಟು ಎನ್‌ಕ್ವೈರಿ ಮಾಡಿ ಅದನ್ನು ತರಿಸಿಕೊಂಡು ನೀವು ನಿಮ್ಮದೇ ಆದಂಥ ಧಾಟಿಯಲ್ಲಿ enquiry ಮಾಡಿ. ಇದನ್ನು ಇಂಥದ್ದೇ ರೀತಿಯಲ್ಲಿ enquiry ಮಾಡಿ ಎಂದು ಹೇಳುವುದಿಲ್ಲ, ನಾನು ಆಗಲೇ ನನಗೆ ಕೇಳಿದ್ದಕ್ಕೆ ಆಗ ಹೇಳಿದೆ, Naturally ಈಗಲೂ ಹೇಳುತ್ತೇನೆ, ಆ ಮಾತು ಬೇರೆ. ನಾವು ಕೇಳಿದಾಗ ನೀವು C.B.I. enquiry ಗೆ ಕೊಡಿ ಎಂದು ಪದೇ ಪದೇ ಹೇಳಿದಾಗ ನಾನು ಹೇಳಿದೆ. ನಿಮ್ಮದು ಸಿ.ಬಿ.ಐ.ಗೆ ಕಳಿಸಿ, ನಮ್ಮದು ಸಿ.ಬಿ.ಐ.ಗೆ ಕಳಿಸಿ ಎನ್ನುವ ಮಾತನ್ನು ಹೇಳಿದೆ. ಅದು ಆಗ stand ಇತ್ತು, ಆದರೆ ಅದು ಈಗ ಸುಳ್ಳಾದ

5.00 P.M.

ಮೇಲೆ ಅದನ್ನು close ಮಾಡೋಣ. ಈ ಸತ್ಯಾಂಶವನ್ನು ತಿಳಿಯುವುದಕ್ಕೋಸ್ಕರ ತಾವು ದಯವಿಟ್ಟು ನಿಮ್ಮದೇ source ನಿಂದ ಯಾರು ಮಾಡಿದ್ದಾರೆ, ಎಲ್ಲಿ ಮಾಡಿದ್ದಾರೆ ಎಂದು ಬಹಿರಂಗಪಡಿಸಿ ಮತ್ತೆ ಈ ಶಾಸಕರಿರುವ ಹಾಸ್ಟೆಲ್ ನಿಮ್ಮ ಪ್ರಿಮಿಸೆಸ್‌ನಲ್ಲಿ ಇದೆ. ತಮ್ಮ ಅಧಿಪತ್ಯ, ಅಲ್ಲಿ ಸರ್ಕಾರದ ಜವಾಬ್ದಾರಿ ಬರುವುದಿಲ್ಲ, ಎಲ್ಲಿ ಎಂ.ಎಲ್.ಎ.ಗಳು ಇರುತ್ತೇವೆ. ಆ ಎಂ.ಎಲ್.ಎ.ಗಳ ರೂಮಿನಲ್ಲಿ ಇದು ಆಗಿದ್ದರೆ ಆ ಆಸೆಂಬ್ಲಿ ಯಾವುದಾದರೂ ಸ್ಥಳದಲ್ಲಿ ನಡೆದು ನಿಮ್ಮ ಅಧೀನದಲ್ಲಿ ಬಂದರೆ ಚೌಕಾಸಿ ಮಾಡಲಿಕ್ಕೆ, ನಿಮಗೆ enquiry ಮಾಡಲಿಕ್ಕೆ ನಿಮಗೆ ಸಂಪೂರ್ಣವಾದ ಅಧಿಕಾರವಿದೆ. ಇದು ಸರ್ಕಾರ ಅಥವಾ ಬೇರೆಯವರ ಹತ್ತಿರವೂ ಹೋಗಬೇಕಾಗಿಲ್ಲ, ಆತ್ಮಸಾಕ್ಷಿಯಾಗಿ ಇದರ ಬಗ್ಗೆ ENQUIRY ಮಾಡಿಸಿ ಏನು ಮುಂದಿನ ನಿರ್ಣಯ ತೆಗೆದುಕೊಳ್ಳುತ್ತೀರಿ ಅದನ್ನು ತೆಗೆದುಕೊಳ್ಳಿ. ಇನ್ನು ನಮ್ಮ ಎಲ್ಲಾ ಮಿತ್ರರಿಗೂ ವಿನಂತಿ ಮಾಡುತ್ತೇನೆ. ಏಕೆಂದರೆ ಈ ಭಾಗದ ಕೆಲವು ಸಮಸ್ಯೆ ಇದೆ, ಉತ್ತರ ಕರ್ನಾಟಕದ ಕೆಲವು ಸಮಸ್ಯೆಗಳಿವೆ, ನೀರಾವರಿ ಸಮಸ್ಯೆ ಇದೆ, ಬರಗಾಲದ ಸಮಸ್ಯೆ ಇದೆ, ನಂಜುಂಡಪ್ಪ ವರದಿ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ಇದರೊಂದಿಗೆ ಅಡ್ಮಿನಿಸ್ಟ್ರೇಷನ್ ಎಂದಾಗ ನ್ಯಾಚುರಲಿ day today ಏನು affairs, issues ಬರುತ್ತವೆಯೋ, ಅದರ ಮೇಲೂ ಕೂಡ ಸದನದಲ್ಲಿ ಮಾತನಾಡುತ್ತಾರೆ. ಏಕೆಂದರೆ ಏನಾದರೂ ಒಂದು ವಿಷಯ ಬಂದ ಮೇಲೆ ಅದಕ್ಕೆ ಸೀಮಿತವಾಗಿ ಯಾರೂ ಕೂಡ ಇರುವುದಿಲ್ಲ, naturally ಇದು ಅಸೆಂಬ್ಲಿ, ಇದಕ್ಕೆ ಇಂಥದ್ದೇ ವಿಷಯದ ಬಗ್ಗೆ ಮಾತನಾಡಬೇಕೆಂದು ನಾವು ನಿಯಮ, ನಿರ್ಬಂಧ ಹಾಕಿಕೊಂಡರೂ ಮಧ್ಯದಲ್ಲಿ ಯಾವುದೇ ಒಂದು ವಿಷಯ ಬಂದಾಗ ಪಬ್ಲಿಕ್ ಇಂಟರೆಸ್ಟ್‌ನ ಯಾವುದೇ issue ಬಂದಾಗ ಸಹಜವಾಗಿ raise ಮಾಡುತ್ತಾರೆ. ಅದಕ್ಕೆ ಉತ್ತರ, ಪ್ರತ್ಯುತ್ತರ ಎಲ್ಲವೂ ಕೂಡ ನಡೆಯುತ್ತಿದೆ, ಅದಕ್ಕೆ ದಯವಿಟ್ಟು ಈ public important issues ಏನಿವೆ, ಅದು ಬರಗಾಲ, ನಂಜುಂಡಪ್ಪ ವರದಿ, ಅಥವಾ ಪ್ರವಾಹ, ಬಿ.ಪಿ.ಎಲ್. ರೇಷನ್‌ಕಾರ್ಡ್ ಆಗಲಿ ಇದರೆಲ್ಲದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಆಗುತ್ತದೆ, ನಿನ್ನೆ ರಾತ್ರಿ 11.00 ಗಂಟೆಯವರೆಗೆ ಸದನದಲ್ಲಿ ಕುಳಿತಿದ್ದೆವು, ಇವತ್ತು ರಾತ್ರಿ 11.00 ಗಂಟೆಯವರೆಗೆ ಕುಳಿತುಕೊಂಡು ಚರ್ಚೆ ಮಾಡೋಣ. ಅದಕ್ಕಾಗಿ ನನ್ನ ಎಲ್ಲಾ ಸದಸ್ಯರು ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿ ಕುಳಿತುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಮುಂದೆ ಯಾವ ಇಷ್ಯೂಗಳಿವೆ ಆ ಇಷ್ಯೂಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೇ, ಈ ಫೋಟೋಗಳನ್ನು ಕೆಮಿಕಲ್ ಟೆಸ್ಟ್‌ಗೆ ಕಳುಹಿಸಲಿಕ್ಕೆ ಗೃಹಮಂತ್ರಿಗಳು ಆದೇಶವನ್ನು ಕೊಡಬೇಕು. ಏಕೆಂದರೆ ಅದು ನಕಲಿಯೇ, ಅಸಲಿಯೇ ಎಂಬುದು ಗೊತ್ತಾಗಬೇಕು.